ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 2 ಗುರುವಾರ 2023

ಸಂಪುಟ: 43 | ಸಂಚಿಕೆ: 312 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮಧ್ಯಂತರ ಪರಿಹಾರವಾಗಿ ಶೇ.17ರಷ್ಟು ವೇತನ ಹೆಚ್ಚಳ; ಹಳೆ ಪಿಂಚಣಿ ಜಾರಿ ಸಂಬಂಧ ಉನ್ನತ ಸಮಿತಿ ರಚನೆ

ರಾಜ್ಯ ಸರ್ಕಾರಿ ನೌಕರರ ಮುಷ್ಕರ ಅಂತ್ಯ

ಬೆಂಗಳೂರು, ಮಾ.1(ಕೆಎಂಶಿ)– ರಾಜ್ಯ ಸರ್ಕಾರಿ ನೌಕರರಿಗೆ ಮಧ್ಯಂತರ ಪರಿಹಾರವಾಗಿ ಶೇಕಡ 17ರಷ್ಟು ವೇತನ ಹೆಚ್ಚಳ ಮಾಡಿ, ಆದೇಶ ಹೊರಡಿಸಲಾಗಿದೆ.

ಸರ್ಕಾರಿ ನೌಕರರ ಮುಷ್ಕರಕ್ಕೆ ತಲೆಬಾಗಿದ ರಾಜ್ಯ ಸರ್ಕಾರ ಮಧ್ಯಂತರ ಪರಿಹಾರ ನೀಡಿದ್ದಲ್ಲದೆ, ರಾಷ್ಟ್ರೀಯ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಹಳೆಯ ಪಿಂಚಣಿ ಯೋಜನೆ ಮರು ಜಾರಿ ಮಾಡುವ ಸಂಬಂಧ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚನೆ ಮಾಡಿದೆ. ತಮ್ಮ ಬೇಡಿಕೆಗಳಿಗೆ ಸರ್ಕಾರ ಮಣಿಯುತ್ತಿದ್ದಂತೆ ನೌಕರರು ಮುಷ್ಕರವನ್ನು ಹಿಂದಕ್ಕೆ ಪಡೆದು, ತಕ್ಷಣ ಕೆಲಸಕ್ಕೆ ಹಾಜರಾಗುವ ತೀರ್ಮಾನ ಪ್ರಕಟಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದು ತಮ್ಮ ಸರ್ಕಾರಿ ನಿವಾಸದಲ್ಲಿ ಮುಷ್ಕರ



ನಿರತ ಸಂಘದ ಪದಾಧಿಕಾರಿಗಳ ಜೊತೆ ಸುದೀರ್ಘ ಸಮಾಲೋಚನೆ ನಡೆಸಿ, ಎರಡು ಬೇಡಿಕೆಗಳನ್ನು ಈಡೇರಿಸುವ ತೀರ್ಮಾನ ಪ್ರಕಟಿಸುತ್ತಿದ್ದಂತೆ ನೌಕರರು ಮುಷ್ಕರದಿಂದ ಹಿಂದೆ ಸರಿದರು. ಮಾತುಕತೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿಯವರು, ನೌಕರರಿಗೆ ಮಧ್ಯಂತರ ಪರಿಹಾರವಾಗಿ ಶೇಕಡ 17ರಷ್ಟು ವೇತನ ಹೆಚ್ಚಳಕ್ಕೆ ನಿರ್ಧರಿಸಲಾಗಿದ್ದು, ತಕ್ಷಣದಿಂದಲೇ ಈ ಆದೇಶ ಹೊರಡಿಸಲಾಗುವುದು.

ಏಳನೇ ವೇತನ ಆಯೋಗವನ್ನು ಈಗಾಗಲೇ ರಚಿಸಲಾಗಿದೆ. ಅವರಿಂದ ವರದಿ ಪಡೆದು, ಶೀಘ್ರದಲ್ಲೇ ವೇತನ ಪರಿಷ್ಕರಣೆಗೆ ಪ್ರಯತ್ನ ನಡೆಯುತ್ತಿದೆ. ಈಗ ಮಧ್ಯಂತರ ಪರಿಹಾರ ಘೋಷಿಸಲು ತೀರ್ಮಾನ ಕೈಗೊಂಡಿದ್ದೇವೆ. ಹಳೆಯ ಪಿಂಚಣಿ ಪದ್ಧತಿ ಮರು ಜಾರಿಗೊಳಿಸಬೇಕೆಂಬ ಬೇಡಿಕೆಯನ್ನು ನೌಕರರ ಸಂಘ ಮುಂದಿಟ್ಟಿದ್ದು, ಈ ಕುರಿತು ಅಧ್ಯಯನ ನಡೆಸಲು ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಲಾಗುವುದು. ವಿವಿಧ ರಾಜ್ಯಗಳಲ್ಲಿ ಜಾರಿಯಲ್ಲಿರುವ ಹಳೆಯ ಪಿಂಚಣಿ ಪದ್ಧತಿ ಕುರಿತು ಸಮಿತಿ ಅಧ್ಯಯನ ನಡೆಸಿ ವರದಿ ನೀಡಲಿದೆ. ನಂತರ ಮುಂದಿನ ಕ್ರಮ ಜರುಗಿಸಲಾಗುವುದು. ಎರಡು ವಿಷಯಗಳಲ್ಲಿ ಸರ್ಕಾರ ಮತ್ತು ನೌಕರರ ಸಂಘ ಒಪ್ಪಂದಕ್ಕೆ ಬಂದಿವೆ. ಈ ಒಪ್ಪಂದದ ಅನ್ವಯ ಆದೇಶ ಹೊರಬೀಳಲಿದೆ ಎಂದರು.

ಸರ್ಕಾರದ ನಿರ್ಧಾರ ಘೋಷಣೆಯಾಗುತ್ತಿದ್ದಂತೆ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ಸುದ್ದಿಗಾರರೊಂದಿಗೆ ▶ 8ನೇ ಪುಟಕ್ಕೆ

ಗೃಹ ಬಳಕೆ ಗ್ಯಾಸ್ 50 ರೂ., ವಾಣಿಜ್ಯ 360 ರೂ. ಹೆಚ್ಚಳ

■ 1,057.50 ರೂ. ಇದ್ದ ಗೃಹ ಬಳಕೆ ಅನಿಲ ಬೆಲೆ ಈಗ 1,107.50 ರೂ. ■ 1,810 ರೂ. ಇದ್ದ ವಾಣಿಜ್ಯ ಉದ್ದೇಶಿತ ಗ್ಯಾಸ್ ಸಿಲಿಂಡರ್ ದರ 2,170ಕ್ಕೆ ಏರಿಕೆ



ಮೈಸೂರು, ಮಾ.1(ಆರ್‌ಕೆ)– ಪೆಟ್ರೋಲಿಯಂ ಮತ್ತು ತೈಲ ಮಾರುಕಟ್ಟೆ ಕಂಪನಿ (OMC)ಗಳು ತಕ್ಷಣವೇ ಜಾರಿಗೆ ಬರುವಂತೆ ಎಲ್‌ಪಿಜಿ (ಲಿಕ್ವಿಡ್ ಪೆಟ್ರೋಲಿಯಂ ಗ್ಯಾಸ್) ಬೆಲೆಯನ್ನು ಹೆಚ್ಚಿಸಿವೆ. 2022ರ ಜುಲೈ ತಿಂಗಳಲ್ಲಿ ಎಲ್‌ಪಿಜಿ ದರ ಏರಿಕೆಯಾಗಿತ್ತು. ಅದರಂತೆ 14.2 ಕೆಜಿ. ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ ದರ 1,057.50 ರೂ.ನಿಂದ ಈಗ 1,107.50 ರೂ.ಗಳಿಗೆ ಹಾಗೂ 19 ಕೆಜಿಯ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆ 360 ರೂ. ಏರಿಕೆಯಾಗಿದ್ದು, ಇದರೊಂದಿಗೆ 1810ರೂ. ಇದ್ದ ಈ ಸಿಲಿಂಡರ್ ದರ ಈಗ 2,170ರೂ.ಗೆ ಹೆಚ್ಚಳವಾಗಿದೆ.

2022ರ ಜನವರಿ 1ರಂದು ವಾಣಿಜ್ಯ ಸಿಲಿಂಡರ್ ದರವನ್ನು 25 ರೂ. ಹೆಚ್ಚಿಸಲಾಗಿತ್ತು. ಅದರೊಂದಿಗೆ ಈ ವರ್ಷ 2 ತಿಂಗಳೊಳಗಾಗಿ 2 ಬಾರಿ ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆಯಾದಂತಾಗಿದ್ದು, ಹೋಟೆಲ್, ರೆಸಾರ್ಟ್ ಸೇರಿದಂತೆ ಆತಿಥ್ಯ ಉದ್ಯಮಕ್ಕೆ ಬೆಲೆ ಏರಿಕೆ ಬಿಸಿ ತಟ್ಟಿದಂತಾಗಿದೆ. ಪೆಟ್ರೋಲಿಯಂ ಉತ್ಪನ್ನಗಳು ದಿನೇ ದಿನೆ ಹೆಚ್ಚಾಗುತ್ತಿರುವುದರಿಂದ ಜನಸಾಮಾನ್ಯರು ಪರದಾಡುವಂತಾಗಿದ್ದು, ಜನಜೀವನ ಮತ್ತಷ್ಟು ದುಸ್ತರವಾಗಿದೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಬಡವರು, ಮಧ್ಯಮ ವರ್ಗದ ಜನರಿಗೆ ಗ್ಯಾಸ್ ಸಿಲಿಂಡರ್ ಬೆಲೆ ಹೆಚ್ಚಳವು ಗಾಯದ ಮೇಲೆ ಬರೆ ▶ 8ನೇ ಪುಟಕ್ಕೆ

ವೇತನ ಹೆಚ್ಚಳ ಆದೇಶಕ್ಕೆ ಸಚಿವಾಲಯ ಸಿಬ್ಬಂದಿ ಅಪಸ್ವರ

ಬೆಂಗಳೂರು: ರಾಜ್ಯ ಸರ್ಕಾರ ಸರ್ಕಾರಿ ನೌಕರರ ವೇತನವನ್ನು ಶೇಕಡ 17ರಷ್ಟು ಹೆಚ್ಚಿಸಿ ಆದೇಶ ಹೊರಡಿಸುತ್ತಿದ್ದಂತೆ ರಾಜ್ಯ ಸರ್ಕಾರಿ ನೌಕರರ ಸಂಘ ಅದಕ್ಕೆ ಒಪ್ಪಿ ಮುಷ್ಕರವನ್ನು ವಾಪಸ್ ಪಡೆದುಕೊಂಡಿದೆ. ಆದರೆ ಇದಕ್ಕೆ ವಿಧಾನಸೌಧದ ಸಚಿವಾಲಯ ಸಿಬ್ಬಂದಿಯಿಂದಲೇ ವಿರೋಧ ವ್ಯಕ್ತವಾಗಿದೆ. ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಬಹಳ ಆತುರವಾಗಿ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಂಡಿದ್ದಾರೆ. ಎಲ್ಲರ ಅಭಿಪ್ರಾಯವನ್ನು ಪಡೆದುಕೊಂಡು ನಿರ್ಧಾರಕ್ಕೆ ಬಂದಿಲ್ಲ. ಸರ್ಕಾರದ ಮುಂದೆ ಸರಿಯಾದ ವಾದ ಮುಂದಿಡುತ್ತಿದ್ದರೆ ಶೇ.25ರವರೆಗೆ ವೇತನ ಹೆಚ್ಚಿಸಲು ಮುಂದಾಗುತ್ತಿತ್ತು ಎಂದು ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ಗುರುಸ್ವಾಮಿ ಹೇಳಿದ್ದಾರೆ. ▶ 8ನೇ ಪುಟಕ್ಕೆ

ಮೈಸೂರಲ್ಲೂ ಸರ್ಕಾರಿ ನೌಕರರು ದಿಲ್‌ಖುಷ್

ಮಧ್ಯಾಹ್ನದವರೆಗೂ ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳ ಪರದಾಟ

ಮೈಸೂರು, ಮಾ.1– ಮೂಲ ವೇತನದಲ್ಲಿ ಶೇ.17ರಷ್ಟು ಹೆಚ್ಚಳ ಮಾಡಿ ಸರ್ಕಾರ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಸರ್ಕಾರಿ ನೌಕರರು ಇಂದು ಬೆಳಗ್ಗೆ ಆರಂಭಿಸಿದ್ದ ಅನಿರ್ದಿಷ್ಟಾವಧಿ ಮುಷ್ಕರವನ್ನು ಹಿಂಪಡೆದು ಹರ್ಷ ವ್ಯಕ್ತಪಡಿಸಿದರು.

ಸರ್ಕಾರದ ಆದೇಶ ಹೊರ ಬಿದ್ದ ನಂತರ ಮೈಸೂರಿನ ದಾಸಪ್ಪ ಸರ್ಕಲ್ ಬಳಿ ಇರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮೈಸೂರು ಜಿಲ್ಲಾ ಘಟಕದ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು, ನಮ್ಮ ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿರುವ ಸರ್ಕಾರ ಶೇ.17ರಷ್ಟು ವೇತನ ಹೆಚ್ಚಳ ಮಾಡಿ ಆದೇಶ ಹೊರಡಿಸಿರುವುದರಿಂದ ರಾಜ್ಯ ಸಂಘದ ನಿರ್ದೇಶನದ ಮೇರೆಗೆ ಮೈಸೂರು ಜಿಲ್ಲೆಯಲ್ಲಿ ಇಂದು ಬೆಳಗ್ಗೆ ಆರಂಭಿಸಿದ್ದ ಅನಿರ್ದಿಷ್ಟಾವಧಿ ಮುಷ್ಕರವನ್ನು ಹಿಂಪಡೆದು ಕರ್ತವ್ಯಕ್ಕೆ ಹಾಜರಾಗಲು ನಿರ್ಧರಿಸಲಾಗಿದೆ ಎಂದರು. ಕಂದಾಯ, ಆರೋಗ್ಯ, ಶಿಕ್ಷಣ, ವೈದ್ಯಕೀಯ ಶಿಕ್ಷಣ, ನೀರಾವರಿ, ಕೃಷಿ, ತೋಟಗಾರಿಕೆ, ಇಂಧನ, ನಗರಾಭಿವೃದ್ಧಿ, ಲೋಕೋಪಯೋಗಿ ಸೇರಿದಂತೆ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು ಹಾಗೂ ಎಲ್ಲಾ ನಿಗಮ ಮಂಡಳಿಗಳ ನೌಕರರು ಕರ್ತವ್ಯಕ್ಕೆ ಹಾಜರಾಗದೇ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಮಧ್ಯಾಹ್ನದ ವೇಳೆಗೆ ಸರ್ಕಾರದ ಆದೇಶ ಹೊರ ಬಿದ್ದ ಹಿನ್ನೆಲೆಯಲ್ಲಿ ರಾಜ್ಯ ಸಂಘ ▶ 8ನೇ ಪುಟಕ್ಕೆ



ಮೈಸೂರು–ಬೆಂಗಳೂರು ಹೆದ್ದಾರಿ ಮಾ.12ರಂದು ಮೋದಿ ಉದ್ಘಾಟನೆ

● ಸಂಸದ ಪ್ರತಾಪ ಸಿಂಹ ಮಾಹಿತಿ ● ಎಸ್‌ಪಿಜಿ ಅನುಮತಿಸಿದರೆ 2 ಕಿ.ಮಿ ರೋಡ್ ಶೋ: ನಂತರ ಗೆಜ್ಜಲಗೆರೆಯಲ್ಲಿ ಸಾರ್ವಜನಿಕ ಸಭೆ



ಮೈಸೂರು,ಮಾ.1(ಎಂಟಿವೈ)– ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯನ್ನು ಮಾ.12 ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದ್ದಾರೆ. ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದಶಪಥ ಹೆದ್ದಾರಿ ಕಾಮಗಾರಿ ಪೂರ್ಣಗೊಂಡಿದೆ. ಪ್ರಧಾನಿ ಮೋದಿ ಅವರು ಮಾ.12ರಂದು ▶ 8ನೇ ಪುಟಕ್ಕೆ



ಮಹದೇಶ್ವರ ಬೆಟ್ಟದಲ್ಲಿ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಗೆ ಚಾಲನೆ

ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ; ನಡ್ಡಾ ವಿಶ್ವಾಸ

ಚಾಮರಾಜನಗರ, ಮಾ.1(ಎಸ್‌ಎಸ್)– ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಸ್ಥಳ ಮಲೆ ಮಹದೇಶ್ವರ ಬೆಟ್ಟದಲ್ಲಿ ಬಿಜೆಪಿಯಿಂದ ಹಮ್ಮಿಕೊಂಡಿರುವ ವಿಜಯ ಸಂಕಲ್ಪ ರಥ ಯಾತ್ರೆಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ನಗಾರಿ ಬಾರಿಸಿ, ಬಿಜೆಪಿ ಬಾವುಟ ಬೀಸುವ ಮೂಲಕ ಚಾಲನೆ ನೀಡಿದರು.

ಮಲೆ ಮಹದೇಶ್ವರ ದೇವಸ್ಥಾನದ ಎದುರಿನ ಮೈದಾನದಲ್ಲಿ, ಅಲಂಕೃತಗೊಂಡ ವಾಹನದ ಮುಂಭಾಗ ನಗಾರಿ ಬಾರಿಸುವ ಮೂಲಕ ಯಾತ್ರೆಗೆ ಚಾಲನೆ ನೀಡಿದರು. ಬಳಿಕ ವಾಹನವನ್ನೇರಿ ಎಲ್ಲ ಮುಖಂಡರೂ ಜನರತ್ತ ಕೈಬೀಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ರಾಜ್ಯ ಪ್ರಧಾನ ಕಾರ್ಯದರ್ಶಿ ರವಿಕುಮಾರ್, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಸಚಿವರಾದ ಆರಗ ಜ್ಞಾನೇಂದ್ರ, ಸುನೀಲ್‌ಕುಮಾರ್, ಕೋಟಾ ಶ್ರೀನಿವಾಸಪೂಜಾರಿ, ಸಂಸದ ಬಿ.ವೈ. ರಾಘವೇಂದ್ರ, ರಾಜ್ಯಸಭಾ ಸದಸ್ಯ ಜಗ್ಗೇಶ್, ಶಾಸಕರಾದ ಎನ್. ಮಹೇಶ್, ಸಿ.ಎಸ್. ನಿರಂಜನಕುಮಾರ್, ಜಿಲ್ಲಾ ಪ್ರಭಾರಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಜಿಲ್ಲಾಧ್ಯಕ್ಷ ನಾರಾಯಣ ಪ್ರಸಾದ್, ಚಲನಚಿತ್ರ ನಿರ್ದೇಶಕ ಎಸ್. ಮಹೇಂದರ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ವಿವಿಧ ಜನಪದ ಕಲಾತಂಡಗಳು, ಗೊರವರ ಕುಣಿತ, ಕಂಸಾಳೆ, ವೀರಗಾಸೆ, ಬೇಡಗಂಪಣ ನೃತ್ಯ, ಮಂಗಳವಾದ್ಯ ಮತ್ತಿತರ ಸಾಂಸ್ಕೃತಿಕ ಕಲಾ ತಂಡಗಳ ನಡುವೆ ಯಾತ್ರೆಗೆ ▶ 8ನೇ ಪುಟಕ್ಕೆ





ವಿಜಯ ಸಂಕಲ್ಪ ಯಾತ್ರೆಯಿಂದ ದಿಗ್ವಿಜಯ ಸಾಧನೆ

ಸಂವಾದದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ಚಾಮರಾಜನಗರ, ಮಾ.1– ಮಲೆ ಮಹದೇಶ್ವರರ ಆಶೀರ್ವಾದದಿಂದ ಆರಂಭಿಸಿದ ಈ ಯಾತ್ರೆ, ಜನಸಂಕಲ್ಪದಿಂದ ವಿಜಯ ಸಂಕಲ್ಪವಾಗಿ, ದಿಗ್ವಿಜಯ ಸಾಧಿಸಲಿದ್ದೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯ ಬಳಿಕ ಬುಡಕಟ್ಟು ಜನರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಎಲ್ಲ ವರ್ಗಗಳ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ▶ 6ನೇ ಪುಟಕ್ಕೆ

ಚಾ.ನಗರ ಉಸ್ತುವಾರಿಯಾದರೂ ವಿಜಯ ಸಂಕಲ್ಪ ಯಾತ್ರೆ ನೇತೃತ್ವ ನೀಡದ್ದಕ್ಕೆ ಕೆರಳಿದ ಸಚಿವ ಸೋಮಣ್ಣ

● ಮಹದೇಶ್ವರ ಬೆಟ್ಟದಲ್ಲಿ ನಡೆದ ಯಾತ್ರೆಗೆ ಗೈರು ಹಾಜರಿ ● ಪಕ್ಷದ ರಾಜ್ಯ, ರಾಷ್ಟ್ರ ನಾಯಕರು ಮನವೊಲಿಸಲೆತ್ನಿಸಿದರೂ ಬಗ್ಗದ ಸೋಮಣ್ಣ ● ಮಾಜಿ ಸಿಎಂ ಯಡಿಯೂರಪ್ಪ ಜೊತೆಗಿನ ಮನಸ್ತಾಪವೇ ಇಷ್ಟೆಲ್ಲಾ ಬೆಳವಣಿಗೆಗೆ ಕಾರಣ

ಬೆಂಗಳೂರು, ಮಾ.1(ಕೆಎಂಶಿ)– ಮಲೆಮಹದೇಶ್ವರ ಬೆಟ್ಟದಲ್ಲಿ ಇಂದು ಆರಂಭವಾದ ಬಿಜೆಪಿಯ ವಿಜಯ ಸಂಕಲ್ಪ ರಥಯಾತ್ರೆಗೆ ಆರಂಭದಲ್ಲೇ ವಿಘ್ನ ಎದುರಾಗಿದ್ದು, ಯಾತ್ರೆಯ ನೇತೃತ್ವ ನೀಡದೆ ತಮ್ಮನ್ನು ನಿರ್ಲಕ್ಷಿಸಿದ್ದರಿಂದ ಕೆಂಡಾಮಂಡಲಗೊಂಡಿರುವ ವಸತಿ ಸಚಿವ ವಿ.ಸೋಮಣ್ಣ ಯಾತ್ರೆಯನ್ನು ಬಹಿಷ್ಕರಿಸಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಜೆ.ಪಿ.ನಡ್ಡಾ ಸೇರಿದಂತೆ ಹಲವು ಪ್ರಮುಖರು ಸೋಮಣ್ಣ ಅವರ ಅಸಮಾಧಾನವನ್ನು ಶಮನಗೊಳಿಸಲು ಯತ್ನಿಸಿದರೂ ಅದು ಸಫಲವಾಗದಿರುವುದು ಬಿಜೆಪಿ ಪಾಳೆಯದಲ್ಲಿ ಭಾರೀ ಸಂಚಲನವುಂಟು ಮಾಡಿದೆ.



ಆ ಮೂಲಕ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ವಿ.ಸೋಮಣ್ಣ ಅವರ ನಡುವೆ ನಡೆಯುತ್ತಿದ್ದ ಮುಸುಕಿನ ಗುದ್ದಾಟ ಬಹಿರಂಗವಾಗಿದ್ದು, ಸಚಿವ ಸಂಪುಟದಿಂದ ತಮ್ಮನ್ನು ತೆಗೆದು ಹಾಕಿದರೂ ಚಿಂತಿಸಲಾರೆ ಎಂದು ▶ 6ನೇ ಪುಟಕ್ಕೆ

ಬಿಜೆಪಿ ಅಧಿಕಾರಕ್ಕೆ ಬರುವುದು ಸೂರ್ಯ, ಚಂದ್ರರಷ್ಟೇ ಸತ್ಯ: ಬಿಎಸ್‌ವೈ

ಚಾಮರಾಜನಗರ, ಮಾ.1– ಕಾಂಗ್ರೆಸ್ ಪಕ್ಷ ಮುಳುಗುತ್ತಿರುವ ಹಡಗು. ಕಾಂಗ್ರೆಸ್‌ನವರ ಆಟ ಇನ್ನು ನಡೆಯೋದಿಲ್ಲ. ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ 140 ಸ್ಥಾನಗಳನ್ನು ಗೆಲ್ಲುತ್ತೇವೆ. ಯಾವುದೇ ಶಕ್ತಿ ಕೂಡ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲು ಸಾಧ್ಯವಿಲ್ಲ. ಸೂರ್ಯ ಚಂದ್ರರಿರುವಷ್ಟೇ ಸತ್ಯ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ. ರಾಜ್ಯದ ಉದ್ದಗಲಕ್ಕೂ ಹೋರಾಟ ಮಾಡಿ ▶ 8ನೇ ಪುಟಕ್ಕೆ

ಎನ್.ಆರ್.ಕ್ಷೇತ್ರದಲ್ಲಿ ಬಿಜೆಪಿ ಪ್ರಗತಿ ರಥಕ್ಕೆ ಚಾಲನೆ



ಮೈಸೂರು, ಮಾ. 1– ಬಿಜೆಪಿ ನರಸಿಂಹರಾಜ ಕ್ಷೇತ್ರದ ಯುವ ಮೋರ್ಚಾ ವತಿಯಿಂದ ಕ್ಯಾತಮಾರನಹಳ್ಳಿಯ ಟೆಂಟ್ ವೃತ್ತದಲ್ಲಿ ಪ್ರತಿ ವಾರ್ಡಿನ ವೃತ್ತಗಳಲ್ಲಿ ಸಾಗುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆ ಹಾಗೂ ಸಾಧನೆಯ ಪ್ರಗತಿ ರಥಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿಗೌಡ, ವೇಲು, ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷರಾದ ಡಿ ಲೋಹಿತ್, ಮೈಸೂರು ನಗರ ಉಪಾಧ್ಯಕ್ಷರಾದ ಟಿ.ರಮೇಶ್, ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಸಂತೋಷ್ ಕುಮಾರ್, ಕ್ಷೇತ್ರದ ಎಸ್.ಟಿ ಮೋರ್ಚಾ ಅಧ್ಯಕ್ಷ ನಾರಾಯಣ ಲೋಲಪ್ಪ, ನಗರ ಯುವ ಮೋರ್ಚಾ ಉಪಾಧ್ಯಕ್ಷ ಕಾರ್ತಿಕ್, ಕಾರ್ಯದರ್ಶಿ ಪುನೀತ್, ಕ್ಷೇತ್ರದ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ನವೀನ್ ಶೆಟ್ಟಿ, ಧನರಾಜ್, ಕ್ಷೇತ್ರದ ಮಹಿಳಾ ಮೋರ್ಚಾ ಅಧ್ಯಕ್ಷೆ ಮಮತಾ ಚಂದ್ರಶೇಖರ್, ಮುಖಂಡರಾದ ನರಸಿಂಹಮೂರ್ತಿ, ಆನಂದ, ಗಿರಿಧರ್, ಕೃಷ್ಣಮೂರ್ತಿ ರಾವತ್, ಮಹದೇವ್.ಸು. ಮುರಳಿ, ಪ್ರಸಾದ್ ಪದ್ಮನಾಭ, ಜೀವನ್, ಸುರೇಂದ್ರ, ಮನೋಜ್, ನಾಗರಾಜು, ಬಸವರಾಜು, ಇಂದ್ರೇಶ್ ಇತರರು ಉಪಸ್ಥಿತರಿದ್ದರು.

ಪಡುವಾರಹಳ್ಳಿಯಲ್ಲಿ ಯುವಕರ ಮೇಲೆ ಗುಂಪಿನಿಂದ ಹಲ್ಲೆ

ಮೈಸೂರು, ಮಾ. 1– ಇಬ್ಬರು ಯುವಕರ ಮೇಲೆ ಗುಂಪೊಂದು ಹಲ್ಲೆ ಮಾಡಿದ ಘಟನೆ ಮೈಸೂರಿನ ಪಡುವಾರಹಳ್ಳಿ 3ನೇ ಮೇನ್‌ನಲ್ಲಿ ನಡೆದಿದೆ.

ಮೈಸೂರು ತಾಲೂಕು ಮೈದನಹಳ್ಳಿ ಗ್ರಾಮದ ಎಂ.ಜಿ. ರಾಹುಲ್(21) ಮತ್ತು ತನುಜ್(21) ಹಲ್ಲೆಯಿಂದ ಗಾಯಗೊಂಡವರಾಗಿದ್ದು, ಇವರು ಫೆಬ್ರವರಿ 26ರಂದು ಮಧ್ಯಾಹ್ನ ಪಡುವಾರಹಳ್ಳಿಯ ಸ್ನೇಹಿತ ಹೇಮಂತ್ ಎಂಬುವರ ಮನೆಗೆ ಹಬ್ಬದ ಊಟಕ್ಕಾಗಿ ಹೋಗಿದ್ದು, ಹಿಂತಿರುಗುತ್ತಿದ್ದಾಗ ಅಲ್ಲಿನ 3ನೇ ಮೇನ್‌ನಲ್ಲಿ ಇವರನ್ನು ಅಡ್ಡಗಟ್ಟಿದ ಗುಂಪೊಂದು ಮನಬಂದಂತೆ ಹಲ್ಲೆ ನಡೆಸಿದೆ. ಈ ವೇಳೆ ರಾಹುಲ್‌ನಿಂದ 7,200 ರೂ. ಕಿತ್ತುಕೊಳ್ಳಲಾಗಿದೆ. ಜೊತೆಗೆ ಆತನ ಕತ್ತಿನಲ್ಲಿದ್ದ 20 ಗ್ರಾಂ ತೂಕದ ಚಿನ್ನದ ಸರ ಕಳೆದುಹೋಗಿದೆ. ಹಲ್ಲೆ ನಡೆಸಿದ ಗುಂಪು ಹೋಗುವಾಗ "ಜಗ ಮತ್ತು ಆಕಾಶ್ ಎಂದರೆ ಸುತ್ತಮುತ್ತ ಏರಿಯಾದವರು ನಡುಗಬೇಕು" ಎಂದು ಕೂಗಾಡುತ್ತಾ ಹೋಗಿದ್ದಾರೆ ಎಂದು ರಾಹುಲ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಜಯಲಕ್ಷ್ಮಿಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



ಮೈಸೂರಿನ ಅಶೋಕಪುರಂನ ಆದಿ ಕರ್ನಾಟಕ ಮಹಾಸಂಸ್ಥೆ ವತಿಯಿಂದ ನಡೆದ ರಾಜ್ಯಮಟ್ಟದ ಬೌದ್ಧ ಸಮ್ಮೇಳನದಲ್ಲಿ ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮೊಮ್ಮಗ ಯಶವಂತ ರಾವ್ ಅಂಬೇಡ್ಕರ್ ಅವರನ್ನು ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು. ಆದಿ ಕರ್ನಾಟಕ ಮಹಾಸಂಸ್ಥೆಯ ಅಧ್ಯಕ್ಷ ಪಿ.ಸಿದ್ದರಾಜು (ಸುನಿಲ್), ಉಪಾಧ್ಯಕ್ಷ ಶಿವಸ್ವಾಮಿ, ಕಾರ್ಯದರ್ಶಿ ರಾಜ್‌ಮೋಗ, ಕೃಷ್ಣಮೂರ್ತಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನೂಕುನುಗ್ಗಲಲ್ಲಿ ಬಸ್ ಹತ್ತುವಾಗ ಗೃಹಿಣಿಯ ಮಾಂಗಲ್ಯ ಸರ ಕಳವು

ಕೆ.ಆರ್.ನಗರ, ಮಾ.1– ಬಸ್ ಹತ್ತುವಾಗ ನೂಕುನುಗ್ಗಲಿನಲ್ಲಿ ಗೃಹಿಣಿಯ ಮಾಂಗಲ್ಯ ಸರ ಕಳವು ಮಾಡಿರುವ ಘಟನೆ ಕೆ.ಆರ್.ನಗರ ಬಸ್ ನಿಲ್ದಾಣದಲ್ಲಿ ನಡೆದಿದೆ. ಕೆ.ಆರ್.ನಗರ ತಾಲೂಕು ನಾಟನಹಳ್ಳಿ ಗ್ರಾಮದ ನಾಗಮ್ಮ(66) ಸರ ಕಳೆದುಕೊಂಡವರಾಗಿದ್ದು, ಇವರು ಪತಿಯೊಂದಿಗೆ ಮೈಸೂರಿನಲ್ಲಿರುವ ಮಗಳ ಮನೆಗೆ ಹೋಗುವ ಸಲುವಾಗಿ ಫೆಬ್ರವರಿ 27ರಂದು ಬೆಳಗ್ಗೆ 11.45ರಲ್ಲಿ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವ ವೇಳೆ ನೂಕುನುಗ್ಗಲಿನಲ್ಲಿ ಇವರ ಕತ್ತಿನಲ್ಲಿದ್ದ 30 ಗ್ರಾಂ ತೂಕದ ಮಾಂಗಲ್ಯ ಸರ ಕಳವು ಮಾಡಲಾಗಿದೆ. ಈ ಸಂಬಂಧ ಕೆ.ಆರ್.ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ಮೈಸೂರಿನ ಮಹಾಜನ ಪದವಿ ಪೂರ್ವ ಕಾಲೇಜಿನಲ್ಲಿ ಸುಮಾರು 35 ವರುಷಗಳ ಕಾಲ ಉಪನ್ಯಾಸಕರಾಗಿ ಮತ್ತು ಕಾಲೇಜಿನ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿ ವಯೋ ನಿವೃತ್ತಿ ಹೊಂದಿದ ಎಸ್.ಉಮಾರಾಣಿ ಅವರನ್ನು ಪ್ರಾಂಶುಪಾಲರೂ ಆದ ಲಯನ್ ಸಿ.ಆರ್.ದಿನೇಶ್ ಸನ್ಮಾನಿಸಿದರು. ಚಿತ್ರದಲ್ಲಿ ಕಾಲೇಜು ಪ್ರಾಂಶುಪಾಲರಾದ ರಾಮೇಗೌಡ, ಡಾ. ಎಂ.ಜಿ.ರಮಾನಂದ್, ರಾಷ್ಟ್ರೀಯ ಶಿಕ್ಷಣ ನೀತಿಯ ಸಂಪನ್ಮೂಲ ವ್ಯಕ್ತಿ ಶಿವಾನಂದ್ ಸಿಂಧನಕೇರಿ, ಉಪನ್ಯಾಸಕ ಪವಾರ್ ನಾಗಭೂಷಣ್, ನಿವೃತ್ತ ಪ್ರಾಂಶುಪಾಲರಾದ ನಾಗರತ್ನ ಇದ್ದರು.

ವಾಮನ ಚರಿತ್ರೆ–ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮ

ಮೈಸೂರು,ಮಾ.1–ಹೂಟಗಳ್ಳಿಯ ಕರಾವಳಿ ಸಾಂಸ್ಕೃತಿಕ ಚಾವಡಿಯ ದಶಮಾನೋತ್ಸವದ ಪ್ರಯುಕ್ತ ಉಜಿರೆ ಕುರಿಯ ವಿಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನದ ಸಹಯೋಗದಲ್ಲಿ ಮಾ. 4 ರಂದು ಸಂಜೆ 6 ರಿಂದ 8.30 ರವರೆಗೆ ಕೆಹೆಚ್‌ಬಿ ಲೇಔಟ್‌ನಲ್ಲಿರುವ ದರ್ಶಿನಿ ಫಂಕ್ಷನ್ ಹಾಲ್‌ನಲ್ಲಿ ವಾಮನ ಚರಿತ್ರೆ–ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಭಾಗವತರು: ಪ್ರಶಾಂತ್ ರೈ ಮುಂಡಾಲ ಗುತ್ತು, ಮದ್ದಳೆ: ಬಿ ಜನಾರ್ದನ ತೋಳ್ಪಡಿತಾಯ, ಚೆಂಡೆ: ವಿಷ್ಣು ಶರಣ ಬನಾರಿ. ಅರ್ಥಧಾರಿಗಳು: ಉಜಿರೆ ಅಶೋಕ ಭಟ್, ಸಂಕದ ಗುಂಡಿ ವಿದ್ವಾನ್ ಗಣಪತಿ ಭಟ್, ರಾಧಾಕೃಷ್ಣ ಕಲ್ಚಾರ್ ಭಾಗವಹಿಸಲಿದ್ದಾರೆ.

ನಿಧನ



ಶತಾಯುಷಿ ನಾಗರತ್ನಮ್ಮ

ಮೈಸೂರು, ಮಾ.1–ಮೈಸೂರಿನ ಗೋಕುಲಂ ನಿವಾಸಿ ಶತಾಯುಷಿ ನಾಗರತ್ನಮ್ಮ (100) ಬುಧವಾರ ಬೆಳಗ್ಗೆ ನಿಧನರಾದರು.

ಮೃತರು ಓರ್ವ ಪುತ್ರ, ನಿವೃತ್ತ ಪ್ರಾಧ್ಯಾಪಕರಾದ ಶಶಿಕಲಾ ಸೇರಿದಂತೆ ಇಬ್ಬರು ಪುತ್ರಿಯರು, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಕೆ.ಲೋಕೇಶ್

ಚಾಮರಾಜನಗರ: ತಾಲೂಕಿನ ಕೂಡ್ಲೂರು ಗ್ರಾಮದ ನಿವಾಸಿ ಸಿ.ಕುಮಾರ್ ಅವರ ಪುತ್ರ ಕೆ. ಲೋಕೇಶ್ (24) ಮಂಗಳವಾರ (ಫೆ.28) ನಿಧನರಾದರು. ಇವರು ತಂದೆ–ತಾಯಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೂಡ್ಲೂರು ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ವಿ.ಮೂರ್ತಿ

ಮೈಸೂರು, ಮಾ.1– ಮೈಸೂರು ವಿದ್ಯಾರಣ್ಯಪುರಂನ ಕನಕಗಿರಿ ನಿವಾಸಿ ವಿ.ಮೂರ್ತಿ(72) ಅವರು ಇಂದು ನಿಧನರಾದರು.

ಮೃತರು ಪತ್ನಿ ಭಾಗ್ಯ, ಇಬ್ಬರು ಪುತ್ರರು, ಪುತ್ರಿ, ಸೊಸೆಯಂದಿರು, ಅಳಿಯಂದಿರು, ಬಂಧು–ಬಳಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಗುರುವಾರ) ಬೆಳಗ್ಗೆ 11.30ರಲ್ಲಿ ಚಾಮುಂಡಿಬೆಟ್ಟ ತಪ್ಪಲ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ರಾಧಾಕೃಷ್ಣ

ಮೈಸೂರು,ಮಾ.1–ಚಾಮರಾಜನಗರ ತಾಲೂಕು ಕುದೇರು ಗ್ರಾಮದ ಕೆ.ಪಿ.ರಾಧಾಕೃಷ್ಣ (70) ಇಂದು ನಿಧನರಾದರು. ಇವರು ಪುತ್ರಿ, ಆರು ಮಂದಿ ಸಹೋದರರು, ಐವರು ಸಹೋದರಿಯರು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಕುದೇರುವಿನಲ್ಲಿ ನೆರವೇರಿತು ಎಂದು ಮೂಲಗಳು ತಿಳಿಸಿವೆ.

ಕೋವ್ಯಾಕ್ಸಿನ್ ಲಸಿಕೆ ಆವಿಷ್ಕರಿಸಿದ ಭಾರತ್ ಬಯೋಟೆಕ್‌ನ ತಂಡಕ್ಕೆ

ಭ್ರಮರ ಟ್ರಸ್ಟ್‌ನ ಜೀವಮಾನ ಸಾಧನೆ ಪ್ರಶಸ್ತಿ

ಭಾರತ್ ಬಯೋಟೆಕ್‌ನ ಸಹ ಸಂಸ್ಥಾಪಕ ಡಾ.ಕೃಷ್ಣ ಎಲ್ಲ ನೇತೃತ್ವದ ವಿಜ್ಞಾನಿಗಳ ತಂಡದಿಂದ ಮಾ.4ರಂದು ಪ್ರಶಸ್ತಿ ಸ್ವೀಕಾರ



ಡಾ.ಕೃಷ್ಣ ಎಲ್ಲ

ಮೈಸೂರು,ಮಾ.1(ಪಿಎಂ)–ಕೋವಿಡ್ ಮಹಾಮಾರಿ ತೊಡೆದು ಹಾಕಲು 'ಕೋವ್ಯಾಕ್ಸಿನ್' ಲಸಿಕೆ ಆವಿಷ್ಕರಿಸಿದ 'ಭಾರತ್ ಬಯೋಟೆಕ್'ನ ವಿಜ್ಞಾನಿಗಳ ತಂಡವು ವೈಟಿ ಮತ್ತು ಮಾಧುರಿ ತಾತಾಚಾರಿಯವರ 'ಭ್ರಮರ ಟ್ರಸ್ಟ್' ವತಿಯಿಂದ ಕೊಡ ಮಾಡುವ ಪ್ರತಿಷ್ಠಿತ 'ಜೀವಮಾನ ಸಾಧನೆ ಪ್ರಶಸ್ತಿ'ಗೆ ಭಾಜನವಾಗಿದ್ದು, ಮಾ.4ರಂದು ಮೈಸೂರಲ್ಲಿ ಹಮ್ಮಿಕೊಂಡಿರುವ ಸಮಾರಂಭದಲ್ಲಿ ಭಾರತ್ ಬಯೋಟೆಕ್‌ನ ಸಹ ಸಂಸ್ಥಾಪಕರೂ ಆದ ಕಾರ್ಯಕಾರಿ ಅಧ್ಯಕ್ಷ ಡಾ.ಕೃಷ್ಣ ಎಲ್ಲ ಅವರ ನೇತೃತ್ವದಲ್ಲಿ ಸದರಿ ಲಸಿಕೆ ಆವಿಷ್ಕರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ವಿಜ್ಞಾನಿಗಳ ತಂಡವು ಪ್ರಶಸ್ತಿ ಸ್ವೀಕರಿಸಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಮಾಧುರಿ ತಾತಾಚಾರಿ, ಕೋವಿಡ್‌ನಿಂದ ಇಡೀ ವಿಶ್ವದಲ್ಲಿ ಸಾಕಷ್ಟು ಸಾವು–ನೋವು ಸಂಭವಿಸಿತು. ಲಸಿಕೆ ಆವಿಷ್ಕಾರದಿಂದ ಕೋವಿಡ್ ದುರಂತಗಳಿಗೆ ಕಡಿವಾಣ ಸಾಧ್ಯವಾಯಿತು. ಕೇವಲ 9 ತಿಂಗಳಲ್ಲೇ ಕೋವ್ಯಾಕ್ಸಿನ್ ಲಸಿಕೆ ಆವಿಷ್ಕಾರ ಮಾಡಲಾಯಿತು. ದೇಶ ಮಾತ್ರವಲ್ಲದೆ, ವಿದೇಶಗಳಿಗೂ ಇದನ್ನು ಕಳುಹಿಸಿ ಹೆಚ್ಚಿನ ದುರಂತಕ್ಕೆ ತಡೆಯೊಡ್ಡಲಾಯಿತು. ಇಂತಹ ಮಹತ್ವದ ಕಾರ್ಯವನ್ನು ಗುರುತಿಸಿ ಭಾರತ ಸರ್ಕಾರವು ಭಾರತ್ ಬಯೋಟೆಕ್‌ನ ಡಾ.ಕೃಷ್ಣ ಎಲ್ಲ ಅವರಿಗೆ ದೇಶದ ಅತ್ಯುನ್ನತ ಪದ್ಮಭೂಷಣ ಪುರಸ್ಕಾರ ನೀಡಿ, ಗೌರವಿಸಿದೆ ಎಂದು ತಿಳಿಸಿದರು.

ಇಂತಹ ಮಾನವೀಯ ಸೇವೆಗಾಗಿ ಭ್ರಮರ ಟ್ರಸ್ಟ್, ತೆಲಂಗಾಣದ ಹೈದರಾಬಾದಿನ ಭಾರತ್ ಬಯೋಟೆಕ್‌ನ ಕೋವಾಕ್ಸಿನ್ ತಂಡಕ್ಕೆ ಜೀವಮಾನ ಪ್ರಶಸ್ತಿ ಪ್ರದಾನ ಮಾಡುತ್ತಿದೆ. ಕೋವ್ಯಾಕ್ಸಿನ್ ತಂಡವು ಈ ಲಸಿಕೆಯನ್ನು ಆವಿಷ್ಕರಿಸಿ ಇಡೀ ದೇಶವೇ ಹೆಮ್ಮೆಪಡುವಂತೆ ಮಾಡಿದೆ. ಮೈಸೂರಿನ ಬನ್ನಿಮಂಟಪದ ಶ್ರೀ ಶಿವರಾತ್ರೀಶ್ವರನಗರದ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಅಂದು ಸಂಜೆ 4.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದ್ದು, ಕೋವ್ಯಾಕ್ಸಿನ್ ತಂಡವನ್ನು ಗೌರವಿಸಲು ಮೈಸೂರಿನ ಜನತೆ ಕೈಜೋಡಿಸಬೇಕು ಎಂದು ಕೋರಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಸಮಾರಂಭದ ಸಾನ್ನಿಧ್ಯ ವಹಿಸಲಿದ್ದಾರೆ. ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಯಾಗಿ ಪದ್ಮಶ್ರೀ ಪುರಸ್ಕೃತ ಇಸ್ರೋ ಮಾಜಿ ಮುಖ್ಯಸ್ಥ ಎ.ಎಸ್.ಕಿರಣ್‌ಕುಮಾರ್ ಭಾಗವಹಿಸಲಿದ್ದಾರೆ. ಅತಿಥಿಗಳಾಗಿ ಭಾರತ ಸರ್ಕಾರದ ಮಾಜಿ ಮುಖ್ಯ ವೈಜ್ಞಾನಿಕ ಸಲಹೆಗಾರ ಪದ್ಮಶ್ರೀ ಪುರಸ್ಕೃತ ಕೆ.ವಿಜಯರಾಘವನ್, ಭಾರತೀಯ ವಿಜ್ಞಾನ ಕಾಂಗ್ರೆಸ್‌ನ ಮಾಜಿ ಪ್ರಧಾನ ಅಧ್ಯಕ್ಷರೂ ಆದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸಮಕುಲಾಧಿಪತಿ ಡಾ.ಸುರೇಶ್ ಭೋಜ್‌ರಾಜ್ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಪ್ರೊ.ವೈ.ಟಿ.ತಾತಾಚಾರಿ ಬಯಸಿದಂತೆ ಸೇವೆ–ಸಹಾಯ: ಸಾಮಾನ್ಯವಾಗಿ ಪ್ರಶಸ್ತಿಯೊಂದಿಗೆ ನಗದು ನೀಡುವುದು ನಮ್ಮ ವಾಡಿಕೆ. ಆದರೆ ಯಾವುದೇ ಕಾರಣಕ್ಕೂ ನಗದು ನೀಡಬಾರದೆಂದು ನಯವಾಗಿಯೇ ನಿರಾಕರಿಸಿದ್ದಾರೆ. ಅದಕ್ಕಾಗಿ ನಗದು ಬದಲಿಗೆ ಪ್ರಶಸ್ತಿ ಪತ್ರದೊಂದಿಗೆ ವಿಶೇಷ ಸ್ಮರಣಿಕೆಯನ್ನು ನೀಡಲಾಗುತ್ತಿದೆ. ಕೋವಿಡ್ ತೀವ್ರವಾಗಿದ್ದ ವರ್ಷಗಳನ್ನು ಹೊರತುಪಡಿಸಿ, ಕಳೆದ 25 ವರ್ಷಗಳಿಂದ ಈ ಪ್ರಶಸ್ತಿಯನ್ನು ನಿರಂತರವಾಗಿ ನೀಡಲಾಗುತ್ತಿದೆ. ನನ್ನ ಪತಿ ಪ್ರೊ.ವೈ.ಟಿ.ತಾತಾಚಾರಿ ಪ್ರಸಿದ್ಧ ವಿಜ್ಞಾನಿ ಆಗಿದ್ದವರು. ಅವರು 1993ರಲ್ಲಿ ನಿಧನ ಹೊಂದಿದರು. ಅವರ ಸ್ಮರಣಾರ್ಥ ಈ ಟ್ರಸ್ಟ್ ಸ್ಥಾಪಿಸಿ, ಸೇವಾ ಚಟುವಟಿಕೆ ನಡೆಸಲಾಗುತ್ತಿದೆ. ನಮ್ಮ ಸಂಪಾದನೆಯಲ್ಲಿ ಸಮಾಜಕ್ಕೆ ಕೈಲಾದ ಸೇವೆ–ಸಹಾಯ ಮಾಡಬೇಕೆಂದು ಅವರು ಬಯಸಿದ್ದರು. ಅದರಂತೆ ಟ್ರಸ್ಟ್ ಮುನ್ನಡೆಯುತ್ತಿದೆ ಎಂದು ಮಾಧುರಿ ತಾತಾಚಾರಿ ಹೇಳಿದರು.

ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿ, ಭ್ರಮರ ಟ್ರಸ್ಟ್ ಕಳೆದ 25 ವರ್ಷಗಳಿಂದ ಸಮಾಜ ಸೇವೆ ಮಾಡುವವರನ್ನು ಗುರುತಿಸಿ, ಗೌರವಿಸುತ್ತಿದೆ. ಟ್ರಸ್ಟ್ ನೀಡುವ ಪ್ರಶಸ್ತಿ ತನ್ನದೇ ಆದ ಪ್ರತಿಷ್ಠೆ ಹೊಂದಿದೆ. ಸರ್ಕಾರಿ ಶಾಲಾ–ಕಾಲೇಜುಗಳಿಗೆ ಮೂಲಸೌಕರ್ಯ ಒದಗಿಸುವುದು ಸೇರಿದಂತೆ ಬಹಳಷ್ಟು ಸೇವಾ ಚಟುವಟಿಕೆಗಳನ್ನು ಮೊದಲಿನಿಂದಲೂ ಟ್ರಸ್ಟ್ ಮಾಡುತ್ತಾ ಬರುತ್ತಿದೆ. ಭಾರತ್ ಬಯೋಟೆಕ್ ಅತ್ಯುತ್ತಮ ಲಸಿಕೆ ಆವಿಷ್ಕರಿಸಿದೆ. ದೇಶಿಯ ಕಂಪನಿಯಾದ ಇದರ ಈ ಕಾರ್ಯ ನಿಜಕ್ಕೂ ಪ್ರಶಂಸನೀಯ. ಇಡೀ ಪ್ರಪಂಚದಲ್ಲೇ ಕೋವ್ಯಾಕ್ಸಿನ್ ಉತ್ತಮ ಲಸಿಕೆ ಎಂದು ಪರಿಗಣಿಸಲ್ಪಟ್ಟಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ ಮಾತನಾಡಿ, ಪ್ರತಿಯೊಂದು ಲಸಿಕೆ ಆವಿಷ್ಕರಿಸಲು ಹತ್ತಾರು ವರ್ಷಗಳೇ ಬೇಕು. ಆದರೆ ಕೋವ್ಯಾಕ್ಸಿನ್ ಲಸಿಕೆ ಅತ್ಯಂತ ಕಡಿಮೆ ಅವಧಿಯಲ್ಲಿ ಆವಿಷ್ಕರಿಸಲ್ಪಟ್ಟಿದೆ. ಕೋವಿಡ್ ವಿರುದ್ಧ ಪರಿಣಾಮಕಾರಿಯಾಗಿ ರಕ್ಷಣೆ ನೀಡಿದ ಲಸಿಕೆ ಇದಾಗಿದೆ. ಈ ಲಸಿಕೆ ಕಂಡುಹಿಡಿಯುವಲ್ಲಿ 100ಕ್ಕೂ ಹೆಚ್ಚು ವಿಜ್ಞಾನಿಗಳು ಶ್ರಮಿಸಿದ್ದಾರೆ. ಈ ಪೈಕಿ ಮುಖ್ಯ ಪಾತ್ರ ವಹಿಸಿದ ಅನೇಕ ವಿಜ್ಞಾನಿಗಳು ಡಾ.ಕೃಷ್ಣ ಎಲ್ಲ ಅವರ ನೇತೃತ್ವದಲ್ಲಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ ಎಂದು ಹೇಳಿದರು. ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರೂ ಆದ ಪ್ರಭಾರ ನಿರ್ದೇಶಕ ಡಾ.ಸಿ.ಪಿ.ಮಧು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಸಚಿವ ಡಾ.ಮಂಜುನಾಥ್ ಗೋಷ್ಠಿಯಲ್ಲಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ (ಎಡದಿಂದ ಮೊದಲನೆಯವರು) ಭ್ರಮರ ಟ್ರಸ್ಟ್‌ನ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಸಮಾರಂಭದ ಬಗ್ಗೆ ಮಾಹಿತಿ ನೀಡಿದರು. ಎಡದಿಂದ, ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಮಾಧುರಿ ತಾತಾಚಾರಿ, ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಸಚಿವ ಡಾ.ಮಂಜುನಾಥ್ ಚಿತ್ರದಲ್ಲಿದ್ದಾರೆ.

ಭಾರತ್ ಬಯೋಟೆಕ್ ಕಂಪನಿ

"ಭಾರತ್ ಬಯೋಟೆಕ್ ಇಂಡಿಯಾ ಲಿಮಿಟೆಡ್ ಜೈವಿಕ ತಂತ್ರಜ್ಞಾನ ಕಂಪನಿಯು 1996ರಲ್ಲಿ ಸ್ಥಾಪನೆಯಾಯಿತು. ಈ ಕಂಪನಿಯ ವಿಜ್ಞಾನಿಗಳ ತಂಡವು ಸತತ 9 ತಿಂಗಳ ಕಾಲ ದಣಿವರಿಯದೇ ಕೆಲಸ ಮಾಡಿ, ಕೋವ್ಯಾಕ್ಸಿನ್ ಲಸಿಕೆ ಆವಿಷ್ಕರಿಸಿದೆ. ಕೋವಿಡ್ ತೊಡೆದು ಹಾಕುವಲ್ಲಿ ಕೋವ್ಯಾಕ್ಸಿನ್ ಒಂದು ಪರಿಣಾಮಕಾರಿ ಲಸಿಕೆ ಎಂದು ಪರಿಗಣಿಸಲ್ಪಟ್ಟಿದ್ದು, ಪರಿಶ್ರಮ ಮತ್ತು ಸಮರ್ಪಿತ ಭಾವದಲ್ಲಿ ಕೋವ್ಯಾಕ್ಸಿನ್ ತಂಡ ಕಾರ್ಯ ನಿರ್ವಹಿಸಿದೆ.

–ಮಾಧುರಿ ತಾತಾಚಾರಿ

ಮನೆಗೆ ನುಗ್ಗಿ ವೃದ್ಧೆಯ ಸರ ಕಿತ್ತುಕೊಂಡು ಪರಾರಿಯಾದ ಖದೀಮ

ಮೈಸೂರು, ಮಾ. 1– ಮನೆಗೆ ನುಗ್ಗಿ ವೃದ್ಧೆಯ ಚಿನ್ನದ ಸರ ಕಿತ್ತುಕೊಂಡು ಪರಾರಿಯಾದ ಬಗ್ಗೆ ಮೈಸೂರಿನ ಲಷ್ಕರ್ ಮೊಹಲ್ಲಾದಲ್ಲಿರುವ ದೊಡ್ಡ ಒಕ್ಕಲಗೇರಿಯಿಂದ ವರದಿಯಾಗಿದೆ. ಅಲ್ಲಿನ ನಿವಾಸಿ ಸಣ್ಣಮ್ಮ(95) ಸರ ಕಳೆದುಕೊಂಡವರಾಗಿದ್ದು, ಇವರು ದೊಡ್ಡ ಒಕ್ಕಲಗೇರಿಯ ಮನೆಯೊಂದರ ಮೊದಲ ಮಹಡಿಯಲ್ಲಿ ವಾಸವಿದ್ದಾರೆ. ಫೆಬ್ರವರಿ 27ರಂದು ಸಂಜೆ 4.15ರ ಸುಮಾರಿನಲ್ಲಿ ಇವರ ಮನೆಗೆ ನುಗ್ಗಿದ ಖದೀಮ, ಅವರ ಕತ್ತಿನಲ್ಲಿದ್ದ 30 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ. ಈ ಸಂಬಂಧ ಲಷ್ಕರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನೇಮಕ




ಮೈಸೂರು, ಮಾ.1– ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಉಪಾಧ್ಯಕ್ಷರನ್ನಾಗಿ ಕೈಲಾಸಪುರಂ ಕೃಷ್ಣ ಅವರನ್ನು ನಗರಾಧ್ಯಕ್ಷ ಕೆ.ರಮೇಶ್ ನೇಮಕ ಮಾಡಿದ್ದಾರೆ.

ನಾಳೆ ಶೋರೂಮ್ ಉದ್ಘಾಟನೆ

ಮೈಸೂರು,ಮಾ.1(ಪಿಎಂ)– ಇನ್ಫಿನಿಟಿ ಪ್ಯಾಲೇಸ್‌ನಿಂದ ಮೈಸೂರಿನಲ್ಲಿ ಬೌನ್ಸ್ ಇನ್ಫಿನಿಟಿ ಎಲೆಕ್ಟ್ರಿಕ್ ದ್ವಿಚಕ್ರ ವಾಹನ ಕಂಪನಿಯ ಶೋರೂಮ್ ಆರಂಭಿಸಲಾಗುತ್ತಿದೆ ಎಂದು ಇನ್ಫಿನಿಟಿ ಪ್ಯಾಲೇಸ್‌ನ ವ್ಯವಸ್ಥಾಪಕ ವಿನಯ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕುವೆಂಪುನಗರದಲ್ಲಿ ಆರಂಭಿಸಿರುವ ಶೋರೂಮ್ ಅನ್ನು ಮಾ.3ರಂದು ಸಂಜೆ 4ಕ್ಕೆ ಬೌನ್ಸ್ ಇನ್ಫಿನಿಟಿ ಸಿಇಒ ವಿವೇಕಾನಂದ ಹಲ್ಲೇಕೆರೆ ಉದ್ಘಾಟಿಸಲಿದ್ದಾರೆ ಎಂದರು. ಇನ್ಫಿನಿಟಿ ಪ್ಯಾಲೇಸ್‌ನ ನಿರ್ದೇಶಕರಾದ ರೂಪ, ರಾಜೇಶ್ವರಿ ಗೋಷ್ಠಿಯಲ್ಲಿದ್ದರು.

ಪ್ರಾಣಿ–ಪಕ್ಷಿ ಸಂಕುಲ ಉಳಿಸುವುದು ಪುಣ್ಯ ಕಾರ್ಯ

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮನವಿ



ಮೈಸೂರು, ಮಾ.1–ಮನುಷ್ಯನ ಒಡನಾಡಿಯಾಗಿರುವ ಪ್ರಾಣಿ–ಪಕ್ಷಿಗಳ ಉಳಿಸಲು ಸಮಾಜದ ಸಹೃದಯಿ ನಾಗರಿಕರು ಮುಂದಾಗಬೇಕೆಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಮನವಿ ಮಾಡಿದ್ದಾರೆ.

ಪರಿಸರ ಸ್ನೇಹಿ ತಂಡ ಹಾಗೂ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ವತಿಯಿಂದ 2 ತಿಂಗಳ ಕಾಲ ಮೂಕ ಸ್ಪಂದನೆ 'ನೀರುಣಿಸಿ–ಜೀವವನ್ನುಳಿಸಿ' ಅಭಿಯೋಜನೆಯನ್ನು ಮೈಸೂರು ನಗರದಲ್ಲಿ ಹಮ್ಮಿಕೊಂಡಿದ್ದು, ನಗರದ ಚಾಮುಂಡಿಪುರಂನಲ್ಲಿರುವ ಟ್ರಸ್ಟ್ ಕಚೇರಿಯಲ್ಲಿ ಅಭಿಯಾನದ ಸಾಮಗ್ರಿಗಳನ್ನು ಅವರು ಬಿಡುಗಡೆಗೊಳಿಸಿದರು.

ಈ ವೇಳೆ ಮಾತನಾಡಿ, ಬೇಸಿಗೆಯ ರಣಬಿಸಿಲಿನ ತಾಪಮಾನದ ತೀವ್ರತೆಯಿಂದಾಗಿ ಪ್ರಾಣಿ–ಪಕ್ಷಿಸಂಕುಲ ಬಳಲುತ್ತದೆ. ಕುಡಿಯುವ ನೀರು, ಆಹಾರಕ್ಕಾಗಿ ಪರಿತಪಿಸುತ್ತವೆ. ಆದ್ದರಿಂದ ಪರಿಸರ ರಕ್ಷತಿ ರಕ್ಷಿತಃ ಪರಿಸರ ಸ್ನೇಹಿ ತಂಡ ಹಾಗೂ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ 2 ತಿಂಗಳ ಕಾಲ ಮೂಕ ಸ್ಪಂದನೆ ಎಂಬ 'ನೀರುಣಿಸಿ–ಜೀವವನ್ನುಳಿಸಿ' ಅಭಿಯೋಜನೆಯನ್ನು ಮೈಸೂರು ನಗರದ ಸುತ್ತಮುತ್ತಲ ಪ್ರದೇಶಗಳಲ್ಲಿ ರೂಪಿಸುತ್ತಿರುವುದು ಅತ್ಯುತ್ತಮ ಕಾರ್ಯ. ಬೇಸಿಗೆಯ ದಿನಗಳು ಇನ್ನೇನು ಆರಂಭಗೊಂಡಿದ್ದು, ಪ್ರಾಣಿ– ಪಕ್ಷಿಗಳು ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸುವ ಪರಿಸ್ಥಿತಿ ಎದುರಾಗಲಿದೆ.

ಜನವಸತಿಗನುಗುಣವಾಗಿ ಮೊಬೈಲ್ ತರಂಗಗಳಿಂದಾಗಿ, ಸುರಕ್ಷಿತ ಆಶ್ರಯದ ಕೊರತೆಯಿಂದಾಗಿ ಪ್ರಾಣಿ–ಪಕ್ಷಿಗಳ ಸಂತತಿ ಕ್ಷೀಣಿಸುತ್ತಿದೆ. ಉಳಿದಿರುವ ಪ್ರಾಣಿ–ಪಕ್ಷಿಗಳು ಆಹಾರ ಮತ್ತು ನೀರಿಗಾಗಿ ಪರಿತಪಿಸುವ ಸಂಕಷ್ಟ ಕಾಲವಿದು. ಹಾಗಾಗಿ ಇಂತಹ ಸಂದರ್ಭದಲ್ಲಿ ಅವುಗಳ ರಕ್ಷಿಸುವ ಹೊಣೆ ಎಲ್ಲರದು ಎಂದರು.

ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್ ಮಾತನಾಡಿ, ಈ ಅಭಿಯಾನಕ್ಕೆ ಸಾರ್ವಜನಿಕರು ಕೈ ಜೋಡಿಸಬೇಕು. ಮೈಸೂರು ನಗರದಲ್ಲಿ ಎಲ್ಲೇ ಪ್ರಾಣಿ–ಪಕ್ಷಿಗಳು ಆಹಾರ–ನೀರಿಗೆ ಪರಿತಪಿಸುವ ಚಿತ್ರಣ ಕಂಡು ಬಂದರೆ ನಮ್ಮನ್ನು ಸಂಪರ್ಕಿಸಿದರೆ ಅವುಗಳಿಗೆ ಸೂಕ್ತ ಆಹಾರ, ನೀರಿನ ವ್ಯವಸ್ಥೆ ಮಾಡಲಾಗುವುದು ಎಂದರು. ನಮ್ಮ ಅಭಿಯಾನಕ್ಕೆ ಕೈ ಜೋಡಿಸುವ ಆಸಕ್ತರು 9880752727 / 8105078070 ಸಂಪರ್ಕಿಸುವಂತೆ ಕರೆ ನೀಡಿದರು.

ಮನವಿ: ಮೈಸೂರು ನಿವಾಸಿಗಳು ತಮ್ಮ ಮನೆಗಳ ತಾರಸಿಯ ಮೇಲೆ, ಮರಗಳ ಕೆಳಗೆ, ಮನೆಯ ಮುಂದೆ ರಸ್ತೆಯ ಇಕ್ಕೆಲಗಳಲ್ಲಿ ಪ್ರಾಣಿ, ಪಕ್ಷಿಗಳ ಬಾಯಿಗೆ ಎಟುಕುವಂತೆ ಮಣ್ಣಿನ ಬಟ್ಟಲು ಅಥವಾ ಸಣ್ಣ ಸಿಮೆಂಟ್ ತೊಟ್ಟಿಗಳನ್ನಿಟ್ಟು ಅದರಲ್ಲಿ ಶುದ್ಧ ನೀರನ್ನು ತುಂಬಿಡಬೇಕು. ಆಹಾರ ಧಾನ್ಯ ಇಟ್ಟು ಅವುಗಳ ಹಸಿವನ್ನು ನೀಗಿಸಬೇಕು. ಈ ವೇಳೆ ಅಪೂರ್ವ ಸುರೇಶ್, ಜಿ ರಾಘವೇಂದ್ರ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕಡಕೊಳ ಜಗದೀಶ್, ವಿನಯ್ ಕಣಗಾಲ್, ಸಚಿಂದ್ರ, ಚಕ್ರಪಾಣಿ, ವಿದ್ಯಾರ್ಣ್ಯ ಟ್ರಸ್ಟ್ ಅಧ್ಯಕ್ಷ ರವಿಶಂಕರ್, ರೇಡಿಯೋ ಜಾಕಿ ಆರ್ ಜೆ ಅವಿನಾಶ್, ಎಸ್.ಬಿ. ವಾಸುದೇವಮೂರ್ತಿ, ಲಿಂಗರಾಜು, ಮಿರ್ಲೆ ಪನೀಶ್, ರಾಕೇಶ್, ರಘು,ಹಾಗೂ ಇನ್ನಿತರರು ಹಾಜರಿದ್ದರು.




ಮೈಸೂರಿನ ಅನಂತಗೀತ ವಿದ್ಯಾಲಯದ ಸಂಸ್ಥಾಪಕರು ಹಾಗೂ ಶಿಕ್ಷಣ ತಜ್ಞ ದಿ.ಪ್ರೊ. ಅನಂತರಾಮಯ್ಯ ಅವರ 13ನೇ ವರ್ಷದ ಪುಣ್ಯ ಸ್ಮರಣೆ ಸ್ಮರಣಾರ್ಥ ಸಂಸ್ಥೆಯ ಆಡಳಿತ ಮಂಡಳಿ, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಭಾವಪೂರ್ಣ ನಮನ ಸಲ್ಲಿಸಿದರು.

ಅಭಿನಯ ತರಬೇತಿ ಶಿಬಿರ ಉದ್ಘಾಟನೆ

ಮೈಸೂರು, ಮಾ. 1–ಮೈಸೂರಿನ ಅದಮ್ಯ ರಂಗ ಶಾಲೆಯ ವತಿಯಿಂದ ಆಸಕ್ತ ಹವ್ಯಾಸಿ ಕಲಾವಿದರಿಗೆ 30 ದಿನಗಳ ಅಭಿನಯ ತರಬೇತಿ ಶಿಬಿರ ಏರ್ಪಡಿಸಲಾಗಿದ್ದು, ಇದರ ಉದ್ಘಾಟನಾ ಸಮಾರಂಭ ಮಾ. 3ರಂದು ಸಂಜೆ 6 ಗಂಟೆಗೆ ಜಯಲಕ್ಷ್ಮಿಪುರಂನ ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜಿನ ಶ್ರೀ ಕುವೆಂಪು ರಂಗಮಂದಿರದಲ್ಲಿ ನಡೆಯಲಿದೆ. ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಶಿಬಿರ ಉದ್ಘಾಟಿಸಲಿದ್ದು, ಖ್ಯಾತ ರಂಗಕರ್ಮಿ ಹಾಗೂ ವಿಶ್ರಾಂತ ಪ್ರಾಂಶುಪಾಲರಾದ ಪ್ರೊ. ಎಚ್.ಎಸ್. ಉಮೇಶ್ ಅಧ್ಯಕ್ಷತೆ ವಹಿಸುವರು. ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ವಿಜ್ಞಾನ ಲೇಖಕರಾದ ಸಾತನೂರು ದೇವರಾಜ್ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅವರನ್ನು ಅಭಿನಂದಿಸಲಾಗುವುದು. ರಂಗಕರ್ಮಿ ಪ್ರೊ.ಎಚ್.ಎಸ್. ಉಮೇಶ್ ಅವರ ಜೊತೆ ಶಿಬಿರಾರ್ಥಿಗಳು ಸಂವಾದ ನಡೆಸುವರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.3.2023 ಗುರುವಾರ, ಮಳೆ ನಕ್ಷತ್ರ: ಶತಭಿಷ, 19.02.2023ರಿಂದ 04.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸಮ್, ಪುರುಷರಲ್ಲಿ ಬಂಜೆತನ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.
- **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ಪುಷ್ಪ ಮಂಟಪಾರೋಹಣ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ, ಬೆಳಗ್ಗೆಯಿಂದ.
- **ಶ್ರೀ ದಿಗಂಬರ ಜೈನ ಸಮಾಜ ಮತ್ತು ಪದ್ಮಶ್ರೀ ಜೈನ ಮಹಿಳಾ ಸಮಾಜ :** ಫಾಲ್ಗುಣ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಡಾ. ಸಿ.ಪಿ. ಕುಸುಮ ಪ್ರಕಾಶ್ ಅವರಿಂದ ಗಾಥ : 451 ರಿಂದ 475 ಕುರಿತು ಪ್ರವಚನ, ಸ್ಥಳ: ಶ್ರೀ ಶಾಂತೀಶ್ವರ ಸ್ವಾಮಿ ಬಸದಿ (ಕೋಟೆ ಬಸದಿ), ಬೆಳಗ್ಗೆ 6 ಗಂಟೆಯಿಂದ.
- **ಕ್ಯಾತಮಾರನಹಳ್ಳಿ ಗ್ರಾಮಸ್ಥರು :** ಹುಲಿಯಮ್ಮ ಜಾತ್ರಾ ಮಹೋತ್ಸವ, ಅಡಿಕೆ ಮರಕ್ಕೆ (ನಿಶಾನಿ ಮರ) ಪೂಜೆ ಸಲ್ಲಿಸಿ ಮಧ್ಯಾಹ್ನ ದೇವಸ್ಥಾನದ ಮುಂಭಾಗ ಪ್ರತಿಷ್ಠಾಪಿಸಿ ಅಲಂಕಾರ ಮಾಡುವುದು ಹಾಗೂ ಸಂಜೆ ಕರಕಲು ಹಾಕುವುದು, ಸ್ಥಳ: ಕ್ಯಾತಮಾರನಹಳ್ಳಿ ದೇವಸ್ಥಾನ ಆವರಣ.
- **ಹಾರ್ಡ್ವಿಕ್ ಸ್ವತಂತ್ರ ಪದವಿಪೂರ್ವ ಕಾಲೇಜು, ಭಾರತೀಯ ರಂಗಭೂಮಿ ಸಂಸ್ಥೆ :** ಹಾರ್ಡ್ವಿಕ್ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ರಂಗಭೂಮಿ ಕಾರ್ಯಕ್ರಮ, ಉದ್ಘಾಟನೆ : ಬಿಷಪ್ ರೆವರೆಂಡ್ ಹೇಮಚಂದ್ರ ಅಯ್ಯ, ಅಧ್ಯಕ್ಷತೆ : ಶಿಕ್ಷಣ ತಜ್ಞ ಡಾ. ಹೆಚ್.ಎಸ್. ಉಮೇಶ್, ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ನಿರ್ದೇಶಕ ಪ್ರಸನ್ನ, ಉಪಸ್ಥಿತರು : ಪ್ರಾಂಶುಪಾಲ ಸುಂದರೇಶ್ ದೇವಪ್ರಿಯಂ, ಮುಖ್ಯೋಪಾಧ್ಯಾಯ ಗುರುಭಕ್ತಯ್ಯ, ಉಪನ್ಯಾಸಕ ಡಾ. ಮೋಹನ್ ಪಾಳೇಗಾರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.
- **ನವೋ–ಪ್ರಮತಿ ಇನ್ಸ್‌ಟಿಟ್ಯೂಟ್ ಆಫ್ ಸಿವಿಲ್ ಸರ್ವೀಸಸ್, ಪೂರ್ವಭಾವಿ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು :** ಅಧ್ಯಯನ ಸಾಮಗ್ರಿ ವಿತರಣೆ ಕಾರ್ಯಕ್ರಮ, ಉದ್ಘಾಟನೆ : ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರಾದ ಶ್ರೀಮತಿ ಮಾಲತಿ, ಅಧ್ಯಕ್ಷತೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಪೊಲೀಸ್ ಆಯುಕ್ತ ಬಿ. ರಮೇಶ್, ಮೈಸೂರು ವಿವಿ ಕುಲಸಚಿವರಾದ ವಿ.ಆರ್. ಶೈಲಜಾ, ಪ್ರಮತಿ ಹಿಲ್ ವ್ಯೂ ಅಕಾಡೆಮಿ ಖಜಾಂಚಿ ಎಸ್. ಫಣಿರಾಜ್, ಸ್ಥಳ: ಪ್ರಮತಿ ಹಿಲ್ ವ್ಯೂ ಅಕಾಡೆಮಿ, ಬೆಳಗ್ಗೆ 11ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಶಿವಕಾಂತಾನಂದ ಅವರಿಂದ ರಾಮಾಯಣದ ಕೆಲವು ಸನ್ನಿವೇಶಗಳು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು–ಸಮಾಧಿ ಪಾದ, ಸ್ಥಳ: #148, 6ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ, ಸಂಜೆ 6ಕ್ಕೆ.

ಚಂದ್ರವಾಡಿಯಲ್ಲಿಂದು, ನಂಜನಗೂಡು ತಾಲೂಕು

- **ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ :** ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಪ್ರಾಂಶುಪಾಲ ಬಿ.ಎಸ್. ರಾಜಶೇಖರ, ಸಮಾರೋಪ ಭಾಷಣ : ಪ್ರಾಂಶುಪಾಲ ಎನ್. ವಿದ್ಯಾಶಂಕರ್, ಆಶಯ ನುಡಿ : ಡಾ. ಗುರುಪ್ರಸಾದ್ ಎಸ್. ಹೂಗಾರ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ– ಗೀತಾ ವೈ.ಪುಟ್ಟಿ, ಜಯಂತಿ ವಿ.ಭಟ್, ಎನ್.ಹೇಮಾ, ವ್ಯಾಖ್ಯಾನ– ಡಾ. ಎನ್.ಎಸ್.ತಾರಾನಾಥ್, 8.30 ಗೆಲುವಿನ ಗುಟ್ಟು– ಪ್ರಹಸನ, ಪ್ರಾಯೋಜಿತ ಕಾರ್ಯಕ್ರಮ, 8.45 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.00 ಮೈಸೂರು ಎಂ. ನಾಗರಾಜ್–ವಯೋಲಿನ್ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯಾರಾಗ, 6.50 ಕೃಷಿರಂಗ–ಕಿಸಾನ್‌ವಾಣಿ, 8.00 ಯುವವಾಣಿ, 9.30 ನಾಟಕ, 10.30 ಸವಿನೆನಪು

ಮೈಸೂರು ಮಿತ್ರ ಗುರುವಾರ 2 ಮಾರ್ಚ್ 2023

ಮೈಸೂರಲ್ಲಿ ಭರದಿಂದ ಸಾಗಿವೆ ರಸ್ತೆ, ಚರಂಡಿ ಕಾಮಗಾರಿಗಳು

ಮುಡಾ, ಪಾಲಿಕೆ, ಲೋಕೋಪಯೋಗಿ ಇಲಾಖೆಯಿಂದ ಮಾರ್ಚ್ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಳಿಸಿ ಮೈಸೂರನ್ನು ಗುಂಡಿ ಮುಕ್ತ ನಗರವಾಗಿಸಲು ಸಂಕಲ್ಪ

ಮೈಸೂರು, ಮಾ.1(ಆರ್‌ಕೆ)–ಚುನಾವಣೆ ಸಮೀಪಿಸುತ್ತಿದ್ದಂತೆಯೇ ಮೈಸೂರು ಮಹಾನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಮೈಸೂರು ನಗರದಾದ್ಯಂತ ರಸ್ತೆ ಡಾಂಬರೀಕರಣ, ಮಳೆ ನೀರು, ಚರಂಡಿ ನಿರ್ಮಾಣ, ಪಾರ್ಕ್ ಅಭಿವೃದ್ಧಿ ಕಾಮಗಾರಿಗಳನ್ನು ಏಕ ಕಾಲದಲ್ಲಿ ನಡೆಸುತ್ತಿದ್ದಾರೆ.



ಈಗಾಗಲೇ ಪ್ರಮುಖ ರಸ್ತೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಚಾಮರಾಜ, ಕೆ.ಆರ್., ಚಾಮುಂಡೇಶ್ವರಿ ಕ್ಷೇತ್ರಗಳ ಶಾಸಕರು ರಾಜ್ಯ ಹಣಕಾಸು ಆಯೋಗ (SFC)ದಲ್ಲಿ ಯಥೇಚ್ಛವಾಗಿ ಅನುದಾನ ತಂದಿರುವುದರಿಂದ ರಸ್ತೆ ಡಾಂಬರೀಕರಣ, ಬಾಕ್ಸ್ ಡ್ರೇನ್, ಪಾರ್ಕ್, ಕ್ರೀಡಾಂಗಣ ಹಾಗೂ ಸ್ಮಶಾನ ಅಭಿವೃದ್ಧಿ ಕಾಮಗಾರಿಗಳು ಭರದಿಂದ ಸಾಗಿವೆ.

ಮೈಸೂರು ಮಹಾನಗರ ಪಾಲಿಕೆಯಿಂದ ಶಾಸಕರಾದ ಎಲ್.ನಾಗೇಂದ್ರ, ಎಸ್.ಎ.ರಾಮದಾಸ್ ಅವರು ತಂದಿರುವ ಸುಮಾರು 170 ಕೋಟಿ ರೂ., ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ (ನಗರೋದ್ಯಾನ) ಯೋಜನೆಯಡಿ 83 ಕೋಟಿ ರೂ.ಗಳ ಅನುದಾನ ಬಳಸಿ ಕಾಮಗಾರಿ ನಡೆಸಲಾಗುತ್ತಿದೆ. ಅಲ್ಲದೆ, ಒಂದು ಬಾರಿ ಅಭಿವೃದ್ಧಿ ಯೋಜನೆಯಡಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 450 ಕೋಟಿ ರೂ. ರಸ್ತೆ ಅಭಿವೃದ್ಧಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ.

ಮತ್ತೊಂದೆಡೆ ಲೋಕೋಪಯೋಗಿ ಇಲಾಖೆಯೂ ಸಹ ತಮ್ಮ ವ್ಯಾಪ್ತಿಯ ರಸ್ತೆಗಳಿಗೆ ಮೆಟ್ಲಿಂಗ್, ಡಾಂಬರೀಕರಣ ಕಾಮಗಾರಿಗಳನ್ನು ಅಂದಾಜು 100 ಕೋಟಿ ರೂ. ವೆಚ್ಚದಲ್ಲಿ ನಡೆಸುತ್ತಿರುವುದರಿಂದ ಇದೀಗ ಮೈಸೂರು ನಗರದಾದ್ಯಂತ ಬಹುತೇಕ ಎಲ್ಲಾ ರಸ್ತೆಗಳು ಡಾಂಬರೀಕರಣಗೊಂಡಿವೆ. ಮಾರ್ಚ್ 31ರೊಳಗಾಗಿ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ಮೈಸೂರು ನಗರವನ್ನು ಗುಂಡಿ ಮುಕ್ತ ರಸ್ತೆಯನ್ನಾಗಿಸಲು ತೀವ್ರ ಗತಿಯಿಂದ ಕೆಲಸ ಮಾಡಲಾಗುತ್ತಿದೆ.

ಈ ಹಿಂದೆ ಮೇಯರ್ ಆಗಿದ್ದ ಸುನಂದಾ ಪಾಲನೇತ್ರ ಸಹ ರಸ್ತೆ ಡಾಂಬರೀಕರಣಕ್ಕೆಂದೇ ತಂದಿದ್ದ 25 ಕೋಟಿ ರೂ. ವಿಶೇಷ ಅನುದಾನದಿಂದಲೂ ಕಾಮಗಾರಿ ಪೂರ್ಣಗೊಳಿಸಲಾಗಿದ್ದು, ಒಟ್ಟಾರೆ ಮೈಸೂರು ನಗರದಾದ್ಯಂತ ಸುಮಾರು 800 ಕೋಟಿ ರೂ. ವೆಚ್ಚದ ರಸ್ತೆ, ಚರಂಡಿ, ಪಾರ್ಕ್, ಸ್ಮಶಾನ ಅಭಿವೃದ್ಧಿ ಕಾಮಗಾರಿಗಳನ್ನು ಕಳೆದ 3 ತಿಂಗಳಿಂದೀಚೆಗೆ ಕೈಗೊಳ್ಳಲಾಗಿದೆ.

ಸಂಗೀತ ವಿದುಷಿ ನೀಲಾ ರಾಂಗೋಪಾಲ್ ಇನ್ನಿಲ್ಲ

ಬೆಂಗಳೂರು: ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ವಿದುಷಿ ನೀಲಾ ರಾಂಗೋಪಾಲ್ ಇಂದು ಬೆಳಗಿನ ಜಾವ ನಿಧನರಾದರು. ಅವರಿಗೆ 87 ವರ್ಷ ವಯಸ್ಸಾಗಿತ್ತು.



ತಮಿಳುನಾಡಿನ ಕುಂಭಕೋಣಂನಲ್ಲಿ 1935ರಲ್ಲಿ ಜನಿಸಿದ ವಿದುಷಿ ನೀಲಾ, ಮದುವೆಯ ಬಳಿಕ ಬೆಂಗಳೂರಿನಲ್ಲಿ ನೆಲೆಸಿದ್ದರು. ಉತ್ತಮ ಮನೋಧರ್ಮ, ವಿದ್ವತ್‌ಪೂರ್ಣ ಗಾಯನಕ್ಕೆ ಹೆಸರಾದ ನೀಲಾ, ಹಲವಾರು ಶಿಷ್ಯಂದಿರನ್ನು ತಯಾರು ಮಾಡಿದವರು.

ಮದ್ರಾಸ್ ಮ್ಯೂಸಿಕ್ ಅಕಾಡೆಮಿ ನೀಡುವ ಸಂಗೀತ ಕಲಾಚಾರ್ಯ ಪ್ರಶಸ್ತಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ 'ಸಂಗೀತ ಕಲಾಶ್ರೀ' ರಾಮಸೇವಾ ಮಂಡಳಿ ನೀಡುವ ಸಂಗೀತ ಚೂಡಾಮಣಿ.. ಇವೇ ಮುಂತಾದ ಪ್ರಶಸ್ತಿಗಳಿಗೆ ಭಾಜನರಾದ ಇವರು ಶಿಷ್ಯಂದಿರ ಪ್ರೀತಿಯ 'ನೀಲಾ ಮಾಮಿ' ಎಂದೇ ಹೆಸರಾಗಿದ್ದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಆರಾಧ್ಯ ಮಹಾಸಭಾದಲ್ಲಿ ಮಂಗಳವಾರ ಬೆಳಗ್ಗೆ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಎಸ್.ಪ್ರಕಾಶ್ ಪ್ರಿಯದರ್ಶನ್ ಸ್ನೇಹ ಬಳಗದ ವತಿಯಿಂದ 112ನೇ ಕಾ0ರ್ಯಕ್ರಮ, ವಿಶೇಷ ಉಚಿತ ಕುರಿ ನೀಡುವ ಯೋಜನೆಯ 5ನೇ ಕಾರ್ಯಕ್ರಮದಲ್ಲಿ 10ಕುರಿ ಮರಿಯನ್ನು ಲಾಟರಿ ಎತ್ತುವ ಮೂಲಕ ಫಲಾನುಭವಿಗಳಿಗೆ ವಿತರಣೆ ಮಾಡಲಾಯಿತು. ಈ ವೇಳೆ ರಾಮಲಿಂಗಪ್ಪ ಗುರೂಜಿ, ಬೋಧಿಧತ್ತ ಬಂತೆಜಿ, ಕಾಂಗ್ರೆಸ ಮುಖಂಡ ನವೀನ್ ಕುಮಾರ್, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ಬಿಜೆಪಿ ಮುಖಂಡ ಲಿಂಗರಾಜು, ಕಾಂಗ್ರೆಸ್ ಯುವ ಮುಖಂಡರಾದ ರಾಕೇಶ್, ಎಂ ಮಾಧವಿ ಇನ್ನಿತರರು ಹಾಜರಿದ್ದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸಿಗದೆ ಪರದಾಡಿದ ರೋಗಿಗಳು







ಮೈಸೂರು, ಮಾ. 1(ಆರ್‌ಕೆ)– ವೇತನ ಪರಿಷ್ಕರಣೆ, ಹಳೇ ಪಿಂಚಣಿ ಯೋಜನೆ ಜಾರಿಗೊಳಿಸುವಂತೆ ಆಗ್ರಹಿಸಿ ರಾಜ್ಯ ಸರ್ಕಾರಿ ನೌಕರರು ಮುಷ್ಕರ ನಡೆಸಿದ ಪರಿಣಾಮ ಮೈಸೂರಿನ ಕೆ.ಆರ್, ಚೆಲುವಾಂಬ, ಜಿಲ್ಲಾ ಆಸ್ಪತ್ರೆ, ಹೆರಿಗೆ ಆಸ್ಪತ್ರೆ ಸೇರಿದಂತೆ ಜಿಲ್ಲೆಯಾದ್ಯಂತ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸಿಗದೆ ರೋಗಿಗಳು ಪರದಾಡಿದರು.

ಎಂದಿನಂತೆ ಬೆಳಗ್ಗೆ 9 ಗಂಟೆಗೆ ಕೆಆರ್ ಆಸ್ಪತ್ರೆಗೆ ಬಂದಿದ್ದ ರೋಗಿಗಳು ಹೊರ ರೋಗಿ ಚೀಟಿ ಪಡೆದು ವಿಭಾಗಕ್ಕೆ ಹೋದರೆ ಅಲ್ಲಿ ಯಾರೂ ಇರಲಿಲ್ಲ. ಅಪಘಾತ ತುರ್ತು ಚಿಕಿತ್ಸಾ ವಿಭಾಗ, ಮೈನರ್ ಓಟಿ ತೆರೆದಿದ್ದವಾದರೂ, ಹೊರರೋಗಿಗಳನ್ನು ನಾವು ನೋಡುವುದಿಲ್ಲ. ಗಂಭೀರ ಸಮಸ್ಯೆಗಳಿದ್ದರೆ ಮಾತ್ರ ಚಿಕಿತ್ಸೆ ನೀಡುತ್ತೇವೆ ಎಂದರು.

ಡಿ ಗ್ರೂಪ್ ನೌಕರರಾಗಲೀ, ವೈದ್ಯರಾಗಲೀ, ಓಪಿಡಿಯಲ್ಲಿ ಇಲ್ಲದ ಕಾರಣ ಹೊರ ರೋಗಿಗಳ ವಿಭಾಗ ಬಿಕೋ ಎನ್ನುತ್ತಿದ್ದವು. ಎಕ್ಸ್ ರೇ, ಸ್ಕ್ಯಾನಿಂಗ್, ರಕ್ತ ಪರೀಕ್ಷೆ, ಪ್ರಯೋಗಾಲಯಗಳಲ್ಲಿ ನರ್ಸ್‌ಗಳು, ಪ್ಯಾರಾಮೆಡಿಕಲ್ ಸಿಬ್ಬಂದಿಗಳು ಗೈರು ಹಾಜರಾಗಿದ್ದರಿಂದ ಕೆ.ಆರ್. ಆಸ್ಪತ್ರೆಯಲ್ಲಿ ಇಂದು ರೋಗಿಗಳಿಗೆ ಚಿಕಿತ್ಸೆ ಲಭ್ಯವಾಗಲಿಲ್ಲ.

ದೂರದ ಊರುಗಳಿಂದ ಬಂದಿದ್ದವರು ಚಿಕಿತ್ಸೆ ಸಿಗದೆ ಪರದಾಡಿ ಕಡೆಗೆ ಬರಿಗೈಲಿ ಹಿಂದಿರುಗಬೇಕಾಯಿತು. ಒಳರೋಗಿ ವಿಭಾಗದ ವಾರ್ಡ್‌ಗಳು, ಡಯಾಲಿಸಿಸ್, ಫಿಸಿಯೋ ಥೆರಪಿ, ಪ್ರಯೋಗಾಲಯ, ಹೆರಿಗೆ ಆಸ್ಪತ್ರೆ, ಮಕ್ಕಳ ಆಸ್ಪತ್ರೆ, ಸೂಪರ್ ಸ್ಪೆಷಾಲಿಟಿ, ಜಿಲ್ಲಾ ಆಸ್ಪತ್ರೆ, ಪಿಕೆಟಿಬಿ ಸೇರಿದಂತೆ ಬಹುತೇಕ ಆಸ್ಪತ್ರೆಗಳಲ್ಲಿ ನರ್ಸ್‌ಗಳು, ಪ್ಯಾರಾ ಮೆಡಿಕಲ್ ಸಿಬ್ಬಂದಿಗಳಿಲ್ಲದ ಕಾರಣ ರೋಗಿಗಳಿಗೆ ತೀವ್ರ ತೊಂದರೆ ಉಂಟಾಯಿತು.

ತಮ್ಮ ವೇತನ ಹೆಚ್ಚಳ ಬೇಡಿಕೆ ಮುಂದಿಟ್ಟು ಮುಷ್ಕರ ನಡೆಸಿದ ಸರ್ಕಾರಿ ನೌಕರರೊಂದಿಗೆ ಸೇರಿ ವೈದ್ಯಕೀಯ ಮತ್ತು ಆರೋಗ್ಯ ಸೇವೆ ನೀಡುವವರು ಮಾನವೀಯತೆ ಮರೆತ ಕಾರಣ ಅನಾರೋಗ್ಯದಿಂದ ಬಳಲುತ್ತಿರುವ ಅಸಂಖ್ಯಾತ ರೋಗಿಗಳು ಇಂದು ಪರದಾಡುವಂತಾಯಿತು.

ಬಹಳಷ್ಟು ಹೆರಿಗೆ ಆಸ್ಪತ್ರೆಗಳಲ್ಲಿ ಗರ್ಭಿಣಿ ಸ್ತ್ರೀಯರು, ಬಾಣಂತಿಯರು, ಮಕ್ಕಳು ಸರ್ಕಾರಿ ನೌಕರರ ಮುಷ್ಕರದಿಂದ ಬಳಲಿದರೂ ಲೆಕ್ಕಿಸದ ಸಿಬ್ಬಂದಿ, ಮುಷ್ಕರ ವಾಪಸ್ ಪಡೆದ ನಂತರವಾದರೂ ಸೇವೆಗೆ ಹಾಜರಾಗದೇ ಹೋದದ್ದು ಅಮಾನವೀಯತೆಗೆ ಸಾಕ್ಷಿಯಾಯಿತು.

ತಾಲೂಕು ಸಾರ್ವಜನಿಕ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಂತೂ ಆರೋಗ್ಯ ಸೇವೆ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು ಜನರು ಚಿಕಿತ್ಸೆ ಸಿಗದೇ ಕಂಗಾಲಾಗಿದ್ದರು.

ಹೋಟೆಲ್ ಮಾಲೀಕರಿಂದ ಹೆಚ್ಚು ಕಮಿಷನ್ ಕಡಿತ; ಆರೋಪ



ಮೈಸೂರು,ಮಾ.1(ಪಿಎಂ)– ಕೆಲವು ಆನ್‌ಲೈನ್ ಫುಡ್ ಡೆಲಿವರಿ ಕಂಪನಿಗಳು ಹೋಟೆಲ್ ಉದ್ಯಮಿಗಳಿಂದ ಅರಿವಿಗೆ ಬಾರದಂತೆ ಹೆಚ್ಚಿನ ಕಮಿಷನ್ ಕಡಿತ ಮಾಡಿಕೊಳ್ಳುತ್ತಿದ್ದು, ಇದರಿಂದ ಹೋಟೆಲ್ ಉದ್ಯಮಿಗಳಿಗೆ ನಷ್ಟ ಉಂಟಾಗುತ್ತಿದೆ ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ದೂರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಹೋಟೆಲ್ ಉದ್ಯಮಿ ಡಾ.ಶ್ವೇತ ಮಡಪ್ಪಾಡಿಯವರು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸದರಿ ವ್ಯವಸ್ಥೆಯೊಂದಿಗೆ ವಹಿವಾಟು ನಡೆಸುವುದನ್ನು ಹಂತ ಹಂತವಾಗಿ ಕೈಬಿಡಲು ನಮ್ಮ ಸಂಘದ ಸದಸ್ಯತ್ವ ಹೊಂದಿರುವ ಹೋಟೆಲ್, ರೆಸ್ಟೋರೆಂಟ್ ಮಾಲೀಕರಿಗೆ ಸಲಹೆ ನೀಡಲಾಗಿದೆ ಎಂದರು.

ಕೋವಿಡ್ ಸಂದರ್ಭದಲ್ಲಿ ಆನ್‌ಲೈನ್ ಫುಡ್ ಡೆಲಿವರಿಗೆ ಬೇಡಿಕೆ ಹೆಚ್ಚಾಯಿತು. ಆರಂಭದಲ್ಲಿ ಹೋಟೆಲ್ ಮಾಲೀಕರಿಂದ ಶೇ.28ರಿಂದ 30ರಷ್ಟು ಕಮಿಷನ್ ಪಡೆಯುತ್ತಿದ್ದ ಕೆಲವು ಫುಡ್ ಡೆಲಿವರಿ ಕಂಪನಿ ಗಳು, ಇದೀಗ ಅರಿವಿಗೆ ಬಾರದಂತೆ ಶೇ.45 ರಷ್ಟು ಕಮಿಷನ್ ಕಡಿತ ಮಾಡಿಕೊಳ್ಳುತ್ತಿವೆ. ಆನ್‌ಲೈನ್ ವ್ಯವಸ್ಥೆಯಲ್ಲಿ ವಹಿವಾಟು ನಡೆಯುವ ಕಾರಣ ಸೂಕ್ಷ್ಮವಾಗಿ ಅವಲೋಕಿಸದೇ ಹೋದರೆ ನಷ್ಟ ಅನುಭವಿಸುತ್ತಿರುವುದು ಅರಿವಿಗೇ ಬರುವುದಿಲ್ಲ. ಗ್ರಾಹರಿಗೆ ರಿಯಾಯಿತಿ, ಜಾಹೀರಾತು, ಪ್ರೊಮೋ ಮೊದಲಾದ ಹೆಸರಿನಲ್ಲಿ ಹೋಟೆಲ್ ಮಾಲೀಕರ ಖಾತೆಯಿಂದ ಹಣ ಕಡಿತ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು.

ಈ ಕಂಪನಿಗಳ ಜೊತೆಗೆ ಆನ್‌ಲೈನ್ ವಹಿವಾಟು ನಡೆಸುವುದನ್ನು ಕೈಬಿಡುವುದೇ ಸೂಕ್ತ ಎಂಬ ಅಭಿಪ್ರಾಯಕ್ಕೆ ಬಂದಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ನಮ್ಮಲ್ಲಿ 30 ರೂ.ಗೆ ಇಡ್ಲಿ ತೆಗೆದುಕೊಂಡರೆ, ಅವರು ಅದನ್ನು 40ರಿಂದ 60 ರೂ.ಗೆ ಮಾರಾಟ ಮಾಡುತ್ತಾರೆ. ಈ ವ್ಯವಸ್ಥೆಯಲ್ಲಿ ಮಹಾ ಮೋಸ ನಡೆಯುತ್ತಿದೆ. ಹೋಟೆಲ್ ಮಾಲೀಕರು ಮಾತ್ರವಲ್ಲದೆ, ಗ್ರಾಹಕರಿಗೂ ನಷ್ಟ ಉಂಟಾಗುತ್ತಿದೆ. ಹಾಗಾಗಿ ಈ ಆನ್‌ಲೈನ್ ವ್ಯವಸ್ಥೆ ರದ್ದುಗೊಳಿಸಬೇಕು ಎಂದು ಒತ್ತಾಯಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಡಾ.ಶ್ವೇತ ಮಡಪ್ಪಾಡಿ, ಆನ್‌ಲೈನ್ ಫುಡ್ ಡೆಲಿವರಿ ವ್ಯವಸ್ಥೆಯೊಂದಿಗೆ ವಹಿವಾಟು ನಡೆಸಿದ್ದರಿಂದ ತಮ್ಮ ಉದ್ಯಮ ನಷ್ಟ ಅನುಭವಿಸಿದೆ ಎಂದು ದೂರಿದರು. ಹೋಟೆಲ್ ಉದ್ಯಮಿಗಳಾದ ಗುರುರಾಜ್ ಹೆಬ್ಬಾರ್, ರವಿಶಾಸ್ತ್ರಿ, ಸುಬ್ರಹ್ಮಣ್ಯತಂತ್ರಿ ಗೋಷ್ಠಿಯಲ್ಲಿದ್ದರು.

ಹಾಸನ ಬಳಿ ಗೃಹ ಸಚಿವರ ಎಸ್ಕಾರ್ಟ್ ವಾಹನ ಬೈಕ್‌ಗೆ ಡಿಕ್ಕಿ; ಸವಾರ ದುರ್ಮರಣ

ಹಾಸನ: ಬಂಕ್‌ನಿಂದ ಪೆಟ್ರೋಲ್ ಹಾಕಿಸಿಕೊಂಡು ಹೊರಬರುತ್ತಿದ್ದ ಬೈಕ್‌ಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಎಸ್ಕಾರ್ಟ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಅದರ ಸವಾರನೊಬ್ಬ ಸಾವನ್ನಪ್ಪಿದ್ದಾನೆ. ಅರಸೀಕೆರೆ ತಾಲೂಕಿನ ಗಂಡಸಿ ಪೊಲೀಸ್ ಠಾಣೆ ಬಳಿ ಅಪಘಾತ ಸಂಭವಿಸಿದ್ದು ಚಿಕ್ಕಗಂಡಸಿ ಗ್ರಾಮದ 45 ವರ್ಷದ ರಮೇಶ್ ಎಂಬುವರು ಮೃತಪಟ್ಟಿದ್ದಾರೆ. ಆರಗ ಜ್ಞಾನೇಂದ್ರ ಅವರು ಮಲೆಮಹದೇಶ್ವರ ಬೆಟ್ಟದಿಂದ ಸ್ವಗ್ರಾಮಕ್ಕೆ ತೆರಳುತ್ತಿದ್ದಾಗ ಪೊಲೀಸ್ ವಾಹನ ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಅಪಘಾತ ಸ್ಥಳಕ್ಕೆ ಗಂಡಸಿ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಮೃತನ ದೇಹವನ್ನು ಜಿಲ್ಲಾಸ್ಪತ್ರೆಗೆ ರವಾನಿಸಿದ್ದಾರೆ.

ಕಾರ್ಮಿಕರ ಸೇವಾ ಅವಧಿ ಹೆಚ್ಚಿಸುವ ವಿಧೇಯಕ ಹಿಂಪಡೆಯಲು ಆಗ್ರಹಿಸಿ ಪ್ರತಿಭಟನೆ



ಮೈಸೂರು, ಮಾ.1(ಎಂಟಿವೈ)– ಕಾರ್ಮಿಕರ ಸೇವಾ ಅವಧಿ ಹೆಚ್ಚಿಸಿರುವ ವಿಧೇಯಕ ಹಿಂಪಡೆಯುವಂತೆ ಆಗ್ರಹಿಸಿ, ಸಿಐಟಿಯು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಸೆಂಟರ್ ಫಾರ್ ಟ್ರೇಡ್ ಯೂನಿಯನ್(ಸಿಐಟಿಯು) ಕಾರ್ಯಕರ್ತರು ಪ್ರತಿಭಟನೆ ಮಾಡಿ, ಸರ್ಕಾರದ ವಿರುದ್ಧ ಕಿಡಿಕಾರಿದರು. ಪ್ರಸ್ತುತ ಜಾರಿಯಲ್ಲಿರುವ ವ್ಯವಸ್ಥೆಯಲ್ಲಿ 8 ಗಂಟೆ ಅವಧಿಯಲ್ಲಿ ಕೆಲಸ ಮಾಡಲು ಕಷ್ಟ ಪಡುವ ಸಂದರ್ಭ ಒದಗಿ ಬಂದಿದೆ. ಯಾವುದೇ ಮೂಲ ಸೌಲಭ್ಯ ಕಲ್ಪಿಸದೇ ನೌಕರರಿಂದ ದುಡಿಸಿಕೊಳ್ಳುವ ಮೂಲಕ ಶೋಷಣೆಗೆ ಗುರಿಯಾಗಿಸಲಾಗಿದೆ. ಅದರಲ್ಲೂ ಕಾರ್ಖಾನೆಗಳಲ್ಲಿ ಕಾರ್ಮಿಕರನ್ನು ಶೋಷಿಸಲಾಗುತ್ತಿದೆ. ಈ ನಡುವೆ ಸರ್ಕಾರವೇ ವಿಧೇಯಕ ಅಂಗೀಕರಿಸಿ, ಕೆಲಸದ ಅವಧಿಯನ್ನು ವಿಸ್ತರಿಸಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

8 ಗಂಟೆ ಇದ್ದ ಸೇವಾ ಅವಧಿಯನ್ನು 12 ಗಂಟೆಗೆ ನಿಗದಿ ಮಾಡಿರುವುದು ಖಂಡನೀಯ. ಏಕಾಏಕಿ 3 ಗಂಟೆ ಅವಧಿ ಹೆಚ್ಚಿಸಿರುವುದು ಸರಿಯಲ್ಲ. ಸರ್ಕಾರ ಕಾರ್ಮಿಕ ವಿರೋಧಿ ನೀತಿ ಅನುಸರಿಸುತ್ತಿರುವುದಕ್ಕೆ ಈ ವಿಧೇಯಕವೇ ಸಾಕ್ಷಿಯಾಗಿದೆ. ರಾತ್ರಿ ಪಾಳಿಯಲ್ಲಿ ಮಹಿಳಾ ಕಾರ್ಮಿಕರು ಕೆಲಸ ಮಾಡಲು ಸೂಚಿಸಿರುವುದು ಖಂಡನೀಯ. ಸಂಜೆ 6ರಿಂದ ಬೆಳಗ್ಗೆ 7 ಗಂಟೆವರೆಗೆ ಮಹಿಳಾ ಕಾರ್ಮಿಕರಿಗೆ ಕೆಲಸ ಮಾಡಲು ಸಮಯ ನಿಗದಿ ಮಾಡಿರುವುದು ಅವೈಜ್ಞಾನಿಕ. ಯಾವುದೆ ಸುರಕ್ಷೆ ಹಾಗೂ ಭದ್ರತೆಯಿಲ್ಲದೇ ಮಹಿಳಾ ಕಾರ್ಮಿಕರು ರಾತ್ರಿ ವೇಳೆ ಕೆಲಸ ಮಾಡುವುದು ಸೂಕ್ತವಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ಮಂಡಿಸಿರುವ ವಿಧೇಯಕವನ್ನು ಹಿಂಪಡೆಯಬೇಕು. ಕೆಲಸದ ಅವಧಿಯನ್ನು ಈ ಹಿಂದಿನಂತೆ 8 ಗಂಟೆ ಅವಧಿಯನ್ನು ಮುಂದುವರೆಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.


ಪ್ರತಿಭಟನೆಯಲ್ಲಿ ಸಿಐಟಿಯು ಅಣ್ಣಯ್ಯ, ಕಾರ್ಮಿಕ ಮುಖಂಡರಾದ ವಿಕ್ರಾಂತ್ ಜಯಚಂದ್ರ, ರಾಜು, ವಿಶ್ವನಾಥ್, ಮೆಹಬೂಬು, ಲೋಕೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಆಮ್ ಆದ್ಮಿ ಕಾರ್ಯವೈಖರಿಯಿಂದ ಬೇಸರ

ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರರಾವ್ ಬಿಜೆಪಿ ಸೇರ್ಪಡೆ

ಬೆಂಗಳೂರು, ಮಾ.1(ಕೆಎಂಶಿ)– ಆಮ್ ಆದ್ಮಿ ಪಕ್ಷದ ಕಾರ್ಯವೈಖರಿಯಿಂದ ಬೇಸರಗೊಂಡು ರಾಷ್ಟ್ರೀಯವಾದದ ಸನಾತನ ಪರವಾದ ಪಕ್ಷದ ತತ್ವ ಸಿದ್ಧಾಂತ ಒಪ್ಪಿ ಬಿಜೆಪಿಗೆ ಸೇರುತ್ತಿದ್ದೇನೆ. ಬಿಜೆಪಿ ನಾಯಕರ ಸದೃಢ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ನನ್ನ ಕೊಡುಗೆ ನೀಡುತ್ತೇನೆ ಎಂದು ನಿವೃತ್ತ ಪೊಲೀಸ್ ಅಧಿಕಾರಿ ಭಾಸ್ಕರ್‌ರಾವ್ ತಿಳಿಸಿದ್ದಾರೆ.

ಆಮ್ ಆದ್ಮಿ ಪಕ್ಷಕ್ಕೆ ಗುಡ್ ಬೈ ಹೇಳಿದ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರರಾವ್ ಇಂದು ಬಿಜೆಪಿ ಸೇರ್ಪಡೆಯಾದರು. ಮಲ್ಲೇಶ್ವರದಲ್ಲಿರುವ ರಾಜ್ಯ ಬಿಜೆಪಿ ಕಚೇರಿ ಜಗನ್ನಾಥ ಭವನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸಮ್ಮುಖದಲ್ಲಿ ಪಕ್ಷ ಸೇರ್ಪಡೆಯಾದರು. ಪಕ್ಷದ ಶಾಲು ಹಾಕಿ, ಧ್ವಜ ನೀಡಿ ಭಾಸ್ಕರರಾವ್ ಅವರನ್ನು ಪಕ್ಷಕ್ಕೆ ಬರಮಾಡಿಕೊಳ್ಳಲಾಯಿತು. ಭಾಸ್ಕರ್ ರಾವ್ ಜತೆ ಅವರ ಬೆಂಬಲಿಗರು ಕೂಡ ಬಿಜೆಪಿಗೆ ಸೇರ್ಪಡೆಯಾದರು.



ಬದ್ಧತೆ ಇರುವ ಪಕ್ಷಕ್ಕೆ ಸೇರ್ಪಡೆ: ಪಕ್ಷ ಸೇರ್ಪಡೆ ನಂತರ ಮಾತನಾಡಿದ ಭಾಸ್ಕರ ರಾವ್, ಇಂದು ಬಹಳ ಸಂತೋಷದ ದಿನ. ಮರಳಿ ಸನಾತನ ಧರ್ಮಕ್ಕೆ ಸೇರಿರುವ ಪಕ್ಷಕ್ಕೆ ಹಾಗೂ ರಾಷ್ಟ್ರೀಯತೆಗೆ ಬದ್ಧತೆ ಇರುವ ಪಕ್ಷಕ್ಕೆ ಸೇರ್ಪಡೆಯಾಗಿದ್ದೇನೆ. ಇದು ಖುಷಿ ತಂದಿದೆ. ಬಾಲ್ಯದಿಂದಲೇ ನಾನು ರಾಷ್ಟ್ರೀಯತೆ, ಸನಾತನ ಧರ್ಮಕ್ಕೆ ಬದ್ಧವಾಗಿದ್ದೆ. ಪೊಲೀಸ್ ಅಧಿಕಾರಿಯಾಗಿದ್ದ ನಾನು ಸ್ವಯಂ ನಿವೃತ್ತಿ ಬಳಿಕ ಕೆಲಕಾಲ ಉತ್ಸಾಹದಿಂದ ರಾಜಕಾರಣದಲ್ಲಿ ಬದಲಾವಣೆ ತರಲು ಕೆಲಸ ಮಾಡುವ ಆಸೆ ಹೊಂದಿದ್ದೆ ಆದರೆ ಆಮ್ ಆದ್ಮಿ ಪಕ್ಷ ಸೇರಿ ಒಂದು ವರ್ಷವಾದರೂ ಆ ಪಕ್ಷ ಕರ್ನಾಟಕದಲ್ಲಿ ಬೆಳೆಯಲು ಸಾಧ್ಯವೇ ಆಗುತ್ತಿಲ್ಲ. ಬಹಳಷ್ಟು ಪ್ರಯತ್ನಪಟ್ಟೆ, ಆದರೆ ಆಗಲಿಲ್ಲ. ಅವರ ಕಾರ್ಯವೈಖರಿಯಲ್ಲಿಯೂ ಬೆಳವಣಿಗೆ ಕಂಡು ಬಂದಿಲ್ಲ ಸಮಯವನ್ನು ವ್ಯರ್ಥ ಮಾಡದೆ ಕೆಲಸಮಾಡಬೇಕು ಎಂದು ನಿರ್ಧರಿಸಿದೆ ಎಂದರು.

ಮದುವೆಗೆ ಒಪ್ಪದ ಪ್ರಿಯತಮೆಯ 16 ಬಾರಿ ಇರಿದು ಕೊಂದ ಪಾಗಲ್ ಪ್ರೇಮಿ

ಬೆಂಗಳೂರು: ಸಿಲಿಕಾನ್ ಸಿಟಿ ಬೆಂಗಳೂರಲ್ಲಿ ಮತ್ತೊಂದು ಬರ್ಬರ ಕೊಲೆಯಾಗಿದೆ. ವರ್ಷಗಳಿಂದ ಪ್ರೀತಿಸುತ್ತಿದ್ದ ಪ್ರಿಯತಮೆಯನ್ನೇ ಪಾಗಲ್ ಪ್ರೇಮಿಯೊಬ್ಬ 16 ಬಾರಿ ಚುಚ್ಚಿ ಚುಚ್ಚಿ ಕೊಲೆ ಮಾಡಿರುವ ಘಟನೆ ಮುರಗೇಶ್ ಪಾಳ್ಯದ ಎನ್‌ಎಎಲ್ ರಸ್ತೆಯಲ್ಲಿ ನಡೆದಿದೆ.



ಮೃತಳನ್ನು ಲೀಲಾ ಪವಿತ್ರಾ (26) ಎಂದು ಗುರುತಿಸಲಾಗಿದ್ದು, ಈಕೆಯನ್ನು ಪಾಗಲ್ ಪ್ರೇಮಿ ದಿನಕರ್ ಬನ್ನಾಳ ಕೊಲೆ ಮಾಡಿದ್ದಾನೆ. ಆಂಧ್ರಪ್ರದೇಶ ಮೂಲದ ಲೀಲಾ ಪವಿತ್ರಾ, ಒಮೆಗಾ ಎಂಬ ಮೆಡಿಸನ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಲೀಲಾ ಪವಿತ್ರಾ ಹಾಗೂ ದಿನಕರ್ ಕಳೆದ 5 ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಆದರೆ ಇತ್ತೀಚೆಗೆ ಲೀಲಾ, ದಿನಕರ್‌ನನ್ನು ಅವಾಯ್ಡ್ ಮಾಡುತ್ತಿದ್ದರು ಎನ್ನಲಾಗಿದೆ.

ಲೀಲಾಳನ್ನು ಕೊಲೆ ಮಾಡಲೇಬೇಕು ಎಂದು ಆಂಧ್ರದಿಂದ ಬೆಂಗಳೂರಿಗೆ ಬಂದಿದ್ದ ದಿನಕರ್, ಆಕೆ ಕೆಲಸ ಮುಗಿಸಿ ಹೊರ ಬರೋದನ್ನೇ ಕಾಯುತ್ತಿದ್ದ. ಮಾತನಾಡಬೇಕೆಂದು ಪಕ್ಕಕ್ಕೆ ಕರೆದು ಏಕಾಏಕಿ ಆಕೆಯ ಎದೆ, ಹೊಟ್ಟೆ, ಕುತ್ತಿಗೆ ಭಾಗಕ್ಕೆ 16 ಬಾರಿ ಇರಿದು ಕೊಲೆ ಮಾಡಿದ್ದಾನೆ. ಲೀಲಾ ಪವಿತ್ರಾ ಹಾಗೂ ದಿನಕರ್ ಪ್ರೀತಿಗೆ ಜಾತಿ ಅಡ್ಡಿಯಾಗಿತ್ತು ಎನ್ನಲಾಗಿದ್ದು, ವಿವಾಹಕ್ಕೆ ಯುವತಿ ಪೋಷಕರು ಒಪ್ಪಿರಲಿಲ್ಲ. ಇದರಿಂದ ಕೋಪಗೊಂಡ ದಿನಕರ್ ಲೀಲಾಳನ್ನು ಮದುವೆಯಾಗುವಂತೆ ಬೆನ್ನುಬಿದ್ದಿದ್ದ. ಆದರೆ ಯುವತಿ ಒಪ್ಪದಿದ್ದಕ್ಕೆ ಆಕೆಯನ್ನೇ ಕೊಲ್ಲಲು ತೀರ್ಮಾನಿಸಿ, ಎರಡು ಚಾಕುಗಳನ್ನು ತಂದಿದ್ದ. ಒಂದರಲ್ಲಿ ಲೀಲಾಳನ್ನು ಕೊಂದು, ಮತ್ತೊಂದರಲ್ಲಿ ತಾನು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದ ಎಂದು ಹೇಳಲಾಗಿದ್ದು, ಲೀಲಾಳನ್ನು ಇರಿದ ಬಳಿಕ ನರಳುತ್ತಿದ್ದ ಆಕೆಯ ಪಕ್ಕದಲ್ಲೇ ಅಳುತ್ತಾ ಕುಳಿತಿದ್ದ. ಸಾರ್ವಜನಿಕರು ಹೆದರಿಕೊಂಡು ಹತ್ತಿರ ಹೋಗದಿದ್ದಾಗ ಕೆಲವರು ಧೈರ್ಯ ಮಾಡಿ, ಹೆಲ್ಮೆಟ್‌ನಿಂದ ಆತನ ಮೇಲೆ ಹಲ್ಲೆ ನಡೆಸಿ, ಲೀಲಾಳನ್ನು ಸಮೀಪದಲ್ಲೇ ಇರುವ ಮಣಿಪಾಲ್ ಆಸ್ಪತ್ರೆಗೆ ಆಟೋದಲ್ಲಿ ಕರೆದೊಯ್ದಿದ್ದಾರೆ. ಆದರೆ, ಆಕೆ ಮಾರ್ಗಮಧ್ಯೆಯೇ ಮೃತಪಟ್ಟಿದ್ದಾಳೆ ಎಂದು ವೈದ್ಯರು ಘೋಷಿಸಿದ್ದಾರೆ.

ಸಾರ್ವಜನಿಕರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಆಗಮಿಸಿದ ಜೀವನ್ ಭೀಮಾನಗರ ಠಾಣೆ ಪೊಲೀಸರು ದಿನಕರ್‌ನನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನಾಳೆ ತಳ ಸಮುದಾಯದ ವಿಶಿಷ್ಟ ಕಲೆಗಳ ತರಬೇತಿ ಸಮಾರೋಪ

ಮೈಸೂರು,ಮಾ.1(ಪಿಎಂ)– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮೈಸೂರು ಜಿಲ್ಲಾ ಮಟ್ಟದಲ್ಲಿ 'ಮೂಲ ಸಂಸ್ಕೃತಿ–ಕನ್ನಡ ಸಂಸ್ಕೃತಿ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ನಶಿಸಿ ಹೋಗುತ್ತಿರುವ ತಳ ಸಮುದಾಯಗಳ ವಿಶಿಷ್ಟ ಕಲೆಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಮತ್ತು ಶಿಬಿರಾರ್ಥಿಗಳ ಕಲಾ ಪ್ರದರ್ಶನ ಮಾ.3ರಂದು ನಡೆಯಲಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ತಿಳಿಸಿದರು.

ಶಿಬಿರಾರ್ಥಿಗಳಿಂದ ಕಲಾ ಪ್ರದರ್ಶನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಮನೆಯ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಅಂದು ಸಂಜೆ 5.30ಕ್ಕೆ ಸಮಾರೋಪ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಇದೇ ವೇಳೆ ತರಬೇತಿ ಪಡೆದ ಶಿಬಿರಾರ್ಥಿಗಳು ತಮ್ಮ ಕಲಾ ಪ್ರದರ್ಶನ ಸಾದರಪಡಿಸಲಿದ್ದಾರೆ ಎಂದರು.

2022–23ನೇ ಸಾಲಿನ ರಾಜ್ಯ ಬಜೆಟ್‌ನ ಘೋಷಣೆಯಂತೆ ನಶಿಸಿ ಹೋಗುತ್ತಿರುವ ತಳ ಸಮುದಾಯಗಳ ವಿಶಿಷ್ಟ ಕಲೆಗಳನ್ನು ಮುನ್ನಲೆಗೆ ತರಲು ರಾಜ್ಯದ ಎಲ್ಲಾ ಜಿಲ್ಲಾ ಮಟ್ಟದಲ್ಲಿ ಈ ತರಬೇತಿ ಶಿಬಿರ ನಡೆಸಲಾಗಿದೆ. ಅಂತೆಯೇ ಮೈಸೂರಿನಲ್ಲಿ ಜಿಲ್ಲಾಧಿಕಾರಿಗಳು ಜಿಲ್ಲಾ ಸಮಿತಿ ಅಧ್ಯಕ್ಷರಾಗಿದ್ದು, ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಂಬೂರಿ ಪದ, ರಂಗಗೀತೆ, ಸೋಬಾನೆ ಪದ, ಸೋಮನ ಕುಣಿತ, ತಮಟೆ ಕುಣಿತ ಈ ಐದು ಕಲಾಪ್ರಕಾರಗಳನ್ನು ಆಯ್ಕೆ ಮಾಡಿಕೊಂಡು ತರಬೇತಿ ನೀಡಲಾಗಿದೆ ಎಂದು ಹೇಳಿದರು.

ಪ್ರತಿ ಕಲಾಪ್ರಕಾರದಲ್ಲಿ ತಲಾ 10 ಶಿಬಿರಾರ್ಥಿಗಳಿಗೆ ಆಯಾಯ ಕಲಾಪ್ರಕಾರದಲ್ಲಿ ಪರಿಣಿತಿ ಹೊಂದಿದ ಹಿರಿಯ ಕಲಾವಿದರು ಜ.23ರಿಂದ ಫೆ.11ರವರೆಗೆ ತರಬೇತಿ ನೀಡಿದ್ದಾರೆ. ನಿಯಮಾನುಸಾರ ಪತ್ರಿಕಾ ಪ್ರಕಟಣೆ ನೀಡಿ, ಅರ್ಜಿ ಆಹ್ವಾನಿಸಿ, ಶಿಬಿರಾರ್ಥಿಗಳನ್ನು ಆಯ್ಕೆ ಮಾಡಲಾಗಿತ್ತು. ಶಿಬಿರಾರ್ಥಿಗಳಿಗೆ ಶಿಷ್ಯವೇತನ ನೀಡಿದ್ದು, ತರಬೇತಿ ನೀಡಿದ ಕಲಾವಿದರಿಗೆ ಗೌರವಧನ ನೀಡಲಾಗಿದೆ ಎಂದರು.

ಸಮಾರೋಪ ಸಮಾರಂಭ ಹಾಗೂ ಕಲಾಪ್ರದರ್ಶನಕ್ಕೆ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್‌ಕುಮಾರ್ ಘನ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಲಿದ್ದಾರೆ. ಶಾಸಕ ಎಸ್.ಎ.ರಾಮದಾಸ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಪ್ರತಾಪ್ ಸಿಂಹ, ಸುಮಲತಾ ಅಂಬರೀಷ್ ಪಾಲ್ಗೊಳ್ಳಲಿದ್ದಾರೆ. ರಂಗಭೂಮಿ ಮತ್ತು ಚಲನಚಿತ್ರ ನಿರ್ದೇಶಕ ಟಿ.ಎಸ್.ನಾಗಾಭರಣ ಮತ್ತು ಸದರಿ ತರಬೇತಿ ಶಿಬಿರದ ರಾಜ್ಯ ಸಂಚಾಲಕ ಜಗದೀಶ್ ಹಿರೇಮನಿ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಜಿಲ್ಲೆಯ ಎಲ್ಲಾ ಶಾಸಕರು, ವಿಧಾನ ಪರಿಷತ್ ಸದಸ್ಯರು, ನಿಗಮ–ಮಂಡಳಿಗಳ ಅಧ್ಯಕ್ಷರು ಸೇರಿದಂತೆ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ತಂಬೂರಿ ಪದ, ರಂಗಗೀತೆ, ಸೋಬಾನೆ ಪದ, ಸೋಮನ ಕುಣಿತ ಮತ್ತು ತಮಟೆ ನೃತ್ಯದ ಪ್ರದರ್ಶನ ನಡೆಯಲಿದೆ ಎಂದರು. ಶಿಬಿರದ ವಿಭಾಗ ಸಂಚಾಲಕ ಎಂ.ಎಸ್.ಪರಮಾನಂದ, ಜಿಲ್ಲಾ ಸಂಚಾಲಕರಾದ ಶರತ್ ಸತೀಶ್, ಡಾ.ಆರ್.ನಿಂಗರಾಜು ಗೋಷ್ಠಿಯಲ್ಲಿದ್ದರು.

ನಕ್ಕರೆ ಅದೇ ಸ್ವರ್ಗ

ಕೆಲಸದವ : (ಜೋರಾಗಿ ಅಳುತ್ತಾ) "ಯಜಮಾನರೇ, ಅಮ್ಮನವರು ಈ ದಿನ ಬೆಳಿಗ್ಗೆ ನನ್ನ ಕೆನ್ನೆಗೆ ಜೋರಾಗಿ ಬಾರಿಸಿದರು. ನೋವು ಇನ್ನೂ ಹೋಗಿಲ್ಲ"

ಮನೆ ಯಜಮಾನ : "ಅದಕ್ಕೇನೀಗ? ನಾನೆಂದಾದರೂ ಅತ್ತಿರುವುದನ್ನು ನೀನು ನೋಡಿದ್ದೀಯಾ?!"

ಮೈಸೂರು ಮಿತ್ರ

ಗುರುವಾರ, 2 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಹೇಳುವುದಕ್ಕೆ ಏನಾದರೂ ಇರಲಿ ಸಾಧ್ಯವಾದಷ್ಟು ಸ್ಪಷ್ಟವಾಗಿ ಅದನ್ನು ಹೇಳು. ಅದೇ ಒಳ್ಳೆಯ ಶೈಲಿಯ ಗುಟ್ಟು. – ಮಾಥ್ಯೂ ಆರ್ನಾಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೆಟ್ಟಿದ್ದನ್ನು ಬಯಸಬೇಡ. ಒಳ್ಳೆಯದನ್ನು ಬಿಡಬೇಡ

ನಿಮ್ಮ ಪತ್ರಗಳು

ನಿಜವಾದ ಜಾಣರ ಪೆಟ್ಟಿಗೆ

ಮಾನ್ಯರೆ,

ಚಂದನ ವಾಹಿನಿಗೆ ಚಂದನ ವಾಹಿನಿಯೇ ಸಾಟಿ ಎಂದರೆ ತಪ್ಪಾಗಲಾರದು. ಏಕೆಂದರೆ ಚಂದನ ವಾಹಿನಿ ತನ್ನ ವೀಕ್ಷಕರಿಗೆ ಉಣಬಡಿಸುವ ಕಾರ್ಯಕ್ರಮಗಳು ಅಂತಹದು. ಚಂದನ ವಾಹಿನಿಯಲ್ಲಿ ಇತರೆ ವಾಹಿನಿ ರೀತಿ ಧಾರಾವಾಹಿಗಳು ರಬ್ಬರ್ ಥರ ಎಳೆಯುದಿಲ್ಲ ಎಂಬುದು ಒಂದೇ ಸಣ್ಣ ಉದಾಹರಣೆ ಸಾಕು. ಚಂದನದಲ್ಲಿ ವಾರ್ತೆಗಳಂತು ವಸ್ತುನಿಷ್ಠೆ ಕಾಯ್ದುಕೊಂಡಿವೆ ಮತ್ತು ಸುದ್ದಿ ವೈಭವೀಕರಿಸಿ ತೋರಿಸುವುದಿಲ್ಲ ಎಂಬುದು ಸತ್ಯ. ಥಟ್ ಅಂತ ಹೇಳಿ ರಸಪ್ರಶ್ನೆ ಕಾರ್ಯಕ್ರಮವಂತು ವಿಶ್ವ ದಾಖಲೆ ಬರೆಯುವುದು ಶತಸಿದ್ದ. ಇನ್ನೂ ಇತರೆ ಕಾರ್ಯಕ್ರಮಗಳು ಮೂಡಿ ಬರುತ್ತಿರುವ ರೀತಿ ಶ್ಲಾಘನೀಯ. ಅದರಲ್ಲೂ ಉದಾಹರಣೆಗೆ ಹೇಳುವುದಾದರೆ ವೈದ್ಯ ಲೋಕ ವೀಕ್ಷಕರಿಗೆ ಆರೋಗ್ಯದ ಬಗ್ಗೆ ಮಹತ್ವದ ಮಾಹಿತಿಗಳು ತಿಳಿಸುತ್ತಿದೆ. ಶುಭೋದಯ ಕಾರ್ಯಕ್ರಮ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಅಪರೂಪದ ಸಾಧಕರ ಜೀವನ ಗಾಥೆಯ ಮಾಹಿತಿ ಅರ್ಥಪೂರ್ಣವಾಗಿದೆ. ಚಿಣ್ಣರ ಲೋಕದಲ್ಲಿ ಮಕ್ಕಳಿಗೆ ಆಟ ಪಾಠಗಳ ಮಾಹಿತಿ ಜ್ಞಾನ ಹೆಚ್ಚಿಸುವಲ್ಲಿ ಸಹಾಯಕ, ನನ್ನ ಹಾಡು ಮೆರೆದ ಮಾಣಿಕ್ಯ ಕಾರ್ಯಕ್ರಮದಲ್ಲಿ ಅನುಭವ ಹಾಡುಗಾರರು ಚಲನಚಿತ್ರ ಗೀತೆಗಳ ಗಾಯನ ಮಧುರಾನುಭವ ನೀಡುತ್ತಿದೆ. ವಾರದ ಅತಿಥಿ ಕಾರ್ಯಕ್ರಮದಲ್ಲಿ ವ್ಯಕ್ತಿ ಮತ್ತು ವ್ಯಕ್ತಿತ್ವದ ಪರಿಚಯ ಅನನ್ಯ. ಮಣ್ಣಿನ ಮಕ್ಕಳು ಕಾರ್ಯಕ್ರಮ ರೈತರಿಗೆ ಉಪಯುಕ್ತ ಮಾಹಿತಿ ನೀಡುತ್ತಿದೆ.

ಕಾನೂನು ಕಾರ್ಯಕ್ರಮ ಕಾನೂನಿನ ಪರಿಚಯ ಮತ್ತು ಸಲಹೆಗಳು ಉಪಯುಕ್ತವಾಗಿದೆ, ಓ ಸಖಿ ಕಾರ್ಯಕ್ರಮ ಹೆಣ್ಣು ಮಕ್ಕಳಿಗೆ ಖಂಡಿತವಾಗಿ ಸಹಾಯ ಮಾಡುತ್ತಿದೆ. ಚಂದದ ಚಂದನ ವಾಹಿನಿ ಪ್ರತಿ ಮನೆಯ ಆಬಾಲವೃದ್ಧರಿಗೆ ನಿಜವಾದ ಜಾಣರ ಪೆಟ್ಟಿಗೆ ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ಬೇರೆ ವಾಹಿನಿಗಳು ಚಂದನ ವಾಹಿನಿಯನ್ನು ನೋಡಿ ಕಲಿಯಬೇಕು.

–ವಿಜಯಕುಮಾರ್ ಎಚ್.ಕೆ., ರಾಯಚೂರು

ನಮ್ಮ ಮತದಾನ ಮಾರಾಟಕ್ಕಿಲ್ಲ

ಮಾನ್ಯರೆ,




ಬರಲಿರುವ ಸಾರ್ವಜನಿಕ ಚುನಾವಣೆಯ ಕಾವು ದಿನದಿಂದ ದಿನಕ್ಕೆ ಏರುತ್ತಿದೆ. ಕೋಟಿ ಕೋಟಿ ಭ್ರಷ್ಟಾಚಾರ ಮಾಡಿ ರುವ ವಿಷಯವಾಗಿ ಒಬ್ಬರಿಗೊಬ್ಬರು ವಾಗ್ದಾಳಿ ನಡೆಸುತ್ತಿರವುದನ್ನು ಮಾಧ್ಯಮಗಳು ವೈಭವೀಕರಿಸಿ ಮತದಾರರಿಗೆ ಮುಟ್ಟಿಸುತ್ತಿವೆ. ವ್ಯವಸ್ಥಿತವಾಗಿ ನಡೆಯುವ ಅವ್ಯವಹಾರಗಳನ್ನು ನಿಯಂತ್ರಿಸುವುದು ಮತ ನೀಡುವ ಪ್ರತೀ ನಾಗರಿಕನ ಹೊಣೆಯಾಗಿರುತ್ತದೆ. ಹಣ ಪಡೆದು ಮತ ಹಾಕಿದರೆ ಚುನಾಯಿತ ಪ್ರತಿನಿಧಿ ಭ್ರಷ್ಟನಾಗದೆ ಶುದ್ಧವಾಗಿರುತ್ತಾನೆಯೇ? ಯಾರನ್ನೂ ದೂಷಿಸಲಾಗದ ಸಂದಿಗ್ದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಕಾರಣ ಒಂದಲ್ಲ ಒಂದು ರೀತಿಯಲ್ಲಿ ಎಲ್ಲರೂ ಅವ್ಯವಹಾರಕ್ಕೆ ಕೈಜೋಡಿಸಿದ್ದೇವೆ. ಅರ್ಹ ಅಭ್ಯರ್ಥಿ ಇಲ್ಲದೆ ಚುನಾವಣೆಗೆ ನಿಂತವರೆಲ್ಲರೂ ಭ್ರಷ್ಟರಾದರೆ ಯಾರನ್ನು ಚುನಾಯಿಸುವುದು? ಹೆಂಡ, ಹಣ, ಸೀರೆ, ಪಂಚೆ, ಕುಕ್ಕರ್ ಕೊಡದ ಸಭ್ಯರು ಇಲ್ಲವೆಂದಲ್ಲ ಇದ್ದಾರೆ. ಅಲ್ಲಲ್ಲಿ ಹುಡುಕಬೇಕಿದೆ ಭೂತಗಾಜು ಹಿಡಿದು!, ಆದರೆ ಇವರಿಗೆ ನಾವು ಮತ ಹಾಕುವುದಿಲ್ಲವಲ್ಲ!

ಅವರನ್ನಷ್ಟೇ ತಪ್ಪಿತಸ್ಥರನ್ನಾಗಿ ಮಾಡಲಾಗದು, ಮೊದಲು ನಾವು ಶುದ್ದಿಯಾಗೋಣ, ನಮ್ಮಿಂದಲೇ ಭ್ರಷ್ಟರಹಿತ ಸರ್ಕಾರ ರಚಿಸುವ ನಡೆ ಪ್ರಾರಂಭವಾಗಲಿ. ಮತಕ್ಕಾಗಿ ಹಣ ಕೊಟ್ಟು ಹಣ ದೋಚುವ ಅಭ್ಯರ್ಥಿಯನ್ನು ದೂರವಿರಿಸಿ, ಮನೆ ಮುಂದಿನ 'ನಾಯಿಗಳಿವೆ ಎಚ್ಚರಿಕೆ' ಎಂಬ ನಾಮಫಲಕವನ್ನು ತೆಗೆದು 'ನಮ್ಮ ಮತದಾನ ಮಾರಾಟಕಿಲ್ಲ' ಎಂಬ ನಾಮಫಲಕವನ್ನು ಮತದಾನದವರೆಗೂ ಹಾಕಿ. ಆಸೆ ಆಮೀಷಕ್ಕೆ ಒಳಗಾಗದೆ ಹಣ ಪಡೆಯದೆ ಮತದಾನ ಮಾಡಿದಾಗ ಮಾತ್ರ ಜನಪರ ಸರ್ಕಾರವನ್ನು ರಾಜ್ಯದಲ್ಲಿ ತರಲು ಸಾಧ್ಯ. ಈ ನಿಟ್ಟಿನಲ್ಲಿ ಮತದಾರರನ್ನು ಪ್ರಬುದ್ಧರನ್ನಾಗಿ ಮಾಡುವುದು ಯಾರು? ರಾಜಕೀಯ ಪಕ್ಷಗಳು ಖಂಡಿತ ಈ ಕಾರ್ಯವನ್ನು ಮಾಡುವುದಿಲ್ಲ. ರಾಜಕೀಯವು ವ್ಯಾಪಾರೀಕರಣ ಆಗಿರುವುದನ್ನು ನಿಯಂತ್ರಿಸಲು ಮಾಧ್ಯಮಗಳು ಹಾಗೂ ಸಂಘಸಂಸ್ಥೆಗಳು ಮನಸ್ಸು ಮಾಡಬೇಕಿದೆ!.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಮೊಬೈಲ್ ಮೂಲಕ ಫೋಟೋ, ಸಂದೇಶ ನೀಡಿ

ಮಾನ್ಯರೆ,



ಈ ಮೊಬೈಲ್ ಪೀಳಿಗೆಯಲ್ಲಿ ಎಲ್ಲವೂ ಮೊಬೈಲ್ ಮೂಲಕವೇ ನಡೆಯುತ್ತಿದೆ. ಪ್ರಾದೇಶಿಕ ಸಾರಿಗೆ ಕಚೇರಿ (RTO) ಮತ್ತು ಸಾರಿಗೆ ಇಲಾಖೆಯು ವಾಹನ ನಂಬರ್‌ನೊಂದಿಗೆ ಮೊಬೈಲ್ ನಂಬರ್ ಜೋಡನೆ ಮಾಡಿ, ಯಾವುದೇ ಸಂಚಾರಿ ನಿಯಮ ಪಾಲಿಸದಿದ್ದಲ್ಲಿ ತಕ್ಷಣ ಮೊಬೈಲ್ ಮೂಲಕ ಪೋಟೋ, ಸಂದೇಶ ನೀಡಿ, ಕ್ರಮ ಕೈಗೊಂಡಲ್ಲಿ ಮುಂದಾಗುವ ಅಪಘಾತ ತಪ್ಪಿಸಬಹುದು. ಉದಾಹರಣೆಗೆ ಹೆದ್ದಾರಿಗಳಲ್ಲಿ ಸಂಚರಿಸುವ ಕಾರು ಮತ್ತು ಬಾರಿ ವಾಹನಗಳಲ್ಲಿ ಸೀಟ್ ಬೆಲ್ಟ್ ಧರಿಸದೆ ವಾಹನ ಚಲಾಯಿಸುವ ಚಾಲಕರಿಗೆ ತಕ್ಷಣ ಸಂದೇಶ ರವಾನಿಸಿ, ಕ್ರಮ ಕೈಗೊಂಡಲ್ಲಿ ಹೆದ್ದಾರಿಗಳಲ್ಲಿ ನಡೆಯುವ ಅಪಘಾತಗಳಲ್ಲಿ ಸಾವು–ನೋವು ಕಡಿಮೆ ಮಾಡಬಹುದು. ಹೆಲ್ಮೆಟ್ ಧರಿಸದಿದ್ದರೆ, ನಂಬರ್ ಪ್ಲೇಟ್‌ನಲ್ಲಿ ತೊಂದರೆ ಇದ್ದರೆ, ಸಿಗ್ನಲ್ ಜಂಪ ಮುಂತಾದ ಸಂಚಾರಿ ನಿಯಮ ಪಾಲಿಸದ ಕಾರಣಗಳಿದ್ದರೆ ತಕ್ಷಣ ಪೋಟೋ ರವಾನಿಸಿ ಮಾಹಿತಿ ನೀಡಿದಲ್ಲಿ, ವಾಹನ ಸವಾರರು ಮತ್ತು ಚಾಲಕರು ಒಂದೇ ದಿನ ಒಂದೇ ಕಾರಣಕ್ಕೆ ಹಲವು ಬಾರಿ ದಂಡ ಕಟ್ಟುವುದು ಮತ್ತು ಅಪಘಾತಗಳನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ. ಇದು ವಾಹನ ಸವಾರರು ಮತ್ತು ಚಾಲಕರು ಜಾಗೃತರಾಗಲು ಪರಿಣಾಮಕಾರಿಯಾಗಿದೆ. ಮತ್ತು ಎಲ್ಲರಿಗೂ ಸಂದೇಶ, ಮಾಹಿತಿ ನೀಡಲು ಉತ್ತಮ ಮಾರ್ಗವಾಗಿದೆ. ಜಗತ್ತು ಮುಂದುವರಿದಂತೆ, ಮುಂದುವರಿದ ತಂತ್ರಜ್ಞಾನ ಬಳಸುವುದು ಮುಖ್ಯ ಮತ್ತು ಅನಿವಾರ್ಯವಾಗಿದೆ.

–ರಾಜು. ಜೆ., ರಾಘವೇಂದ್ರ ನಗರ, ಮೈಸೂರು.



ಪ್ರೊ. ಎ.ವಿ.ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು


ಹೋರಾಟ, ಸೇವಾ ಧುರೀಣರಾದ 'ಪಟವರ್ಧನರು'

ಇವರಲ್ಲಿ ಒಬ್ಬರು ಹೋರಾಟಗಾರರು, ಮತ್ತೊಬ್ಬರು ವನಸ್ಪತಿ ಆಧಾರಿತ ಖ್ಯಾತ ವೈದ್ಯರು. ಈ ಇಬ್ಬರು ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡು ಜನರಿಗೆ ಒಳಿತು ಮಾಡಿದವರೇ. ಅಲ್ಲದೆ ದೇಶದ ಹಿತಚಿಂತಕರು. ಈ ಮಹನೀಯರ ಬಗ್ಗೆ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಅಚ್ಚುತ ಸೀತಾರಾಮ ಪಟವರ್ಧನ್: ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಸ್ಥಾಪಕರು. ಇವರು ಅಹಮದ್ ನಗರದಲ್ಲಿ 5.2.1905ರಲ್ಲಿ ಜನಿಸಿದರು. ಚಿತ್ಪಾವನ ಬ್ರಾಹ್ಮಣ ವಂಶದವರು. ಇವರ ತಂದೆ ಹರಿಕೇಶವ ಪಟವರ್ಧನರು, ನ್ಯಾಯವಾದಿಯಾಗಿದ್ದರು (ಲಾಯರ್). ಪಟವರ್ಧನ್ ಅವರ ಆರು ಮಕ್ಕಳಲ್ಲಿ ಅಚ್ಯುತ್ ಪಟವರ್ಧನ್ ಎರಡನೆಯವರು. ಇವರು ನಾಲ್ಕು ವರ್ಷದವರಾಗಿದ್ದಾಗ, ನಿವೃತ್ತ ಶಿಕ್ಷಣಾಧಿಕಾರಿಯಾಗಿದ್ದ ಸೀತಾರಾಮ ಅವರು, ಅಚ್ಚುತ ಪಟವರ್ಧನ್‌ರನ್ನು ದತ್ತು ತೆಗೆದುಕೊಂಡರು. ಇದರಿಂದಾಗಿ ಇವರ ಹೆಸರು ಅಚ್ಚುತ ಸೀತಾರಾಮ ಪಟವರ್ಧನ ಎಂದಾಯಿತು.

ಪಟವರ್ಧನರು ಪ್ರಾಥಮಿಕ ಹಾಗೂ ಹೈಸ್ಕೂಲು ಶಿಕ್ಷಣವನ್ನು ಅಹಮದ್ ನಗರದ ಶಾಲೆಯಲ್ಲಿ ಮುಗಿಸಿದರು. ಇವರು ವಾರಣಾಸಿಯ ಸೆಂಟ್ರಲ್ ಹಿಂದೂ ಕಾಲೇಜಿನಲ್ಲಿ ಅರ್ಥಶಾಸ್ತ್ರವನ್ನು ಮುಖ್ಯ ವಿಷಯವಾಗಿ ತೆಗೆದುಕೊಂಡು ಓದಿ, ಪ್ರಥಮ ದರ್ಜೆಯಲ್ಲಿ ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಗಳಿಸಿದರು. ಇವರ ದತ್ತು ತಂದೆ, ಕಾಲೇಜಿನ ಪ್ರಾಚಾರ್ಯ (ಪ್ರಾಂಶುಪಾಲ) ಡಾ. ಜಿ.ಎಸ್. ಅರುಂಡೇಲ್, ಡಾ. ಆನಿಬೆಸೆಂಟ್ ಪ್ರಾಧ್ಯಾಪಕ ತೆಲಂಗ್ ಮುಂತಾದವರ ಪ್ರಭಾವ ಪಟವರ್ಧನ್‌ರ ಮೇಲೆ ಉಂಟಾಯಿತು. ಈ ಪ್ರಭಾವ ಪಟವರ್ಧನ್‌ರನ್ನು ವ್ಯಾಸಂಗ, ಚಿಂತನೆ ಹಾಗೂ ವೈರಾಗ್ಯಪ್ರಿಯರನ್ನಾಗಿ ಮಾಡಿತು. ಪಟವರ್ಧನರು ಬ್ರಹ್ಮಚಾರಿಯಾಗಿಯೇ ಉಳಿದು ದೇಶ ಸೇವೆ ಹಾಗೂ ಬಡವರ ಸೇವೆಯನ್ನು ಮಾಡಲು ನಿರ್ಧರಿಸಿದರು.

ಇವರು (ಪಟವರ್ಧನ್) ವಾರಾಣಾಸಿಯ ಕಾಲೇಜಿನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಮೂರು ಸಾರಿ ಇಂಗ್ಲೆಂಡ್ ಮತ್ತು ಇತರ ಯೂರೋಪಿಯನ್ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿದರು. ಇವರಿಗೆ ಅನೇಕ ಸಮಾಜವಾದಿ ಮುಖಂಡರ ಮತ್ತು ವಿದ್ವಾಂಸರ ಪರಿಚಯವಾಯಿತು. ಇವರು ಸಮಾಜವಾದವನ್ನು ಕುರಿತು ಅಭ್ಯಾಸ ಮಾಡಿದರು. ಅಧ್ಯಾಪಕ ವೃತ್ತಿಗೆ ರಾಜೀನಾಮೆಯನ್ನು ಕೊಟ್ಟು ಗಾಂಧೀಜಿಯವರ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದರು. 1942 ರವರೆಗೆ ಅನೇಕ ಬಾರಿ ಕಾರಾಗೃಹ ವಾಸಮಾಡಬೇಕಾಗಿ ಬಂದಿತು.



ಸೀತಾರಾಮ ಪಟವರ್ಧನ್

ತಮ್ಮ ಸಂಗಡಿಗರಾದ, ಆಚಾರ್ಯ ನರೇಂದ್ರ ದೇವ್, ಜಯಪ್ರಕಾಶ್ ನಾರಾಯಣ್ ಮೊದಲಾದವರಂತೆ ಕಾಂಗ್ರೆಸ್ ಪಕ್ಷ, ಸಮಾಜವಾದಿ ಪಕ್ಷಕ್ಕೆ ಸೇರ್ಪಡೆಯಾಗುವಂತೆ ಮಾಡುವುದೇ ಪಟವರ್ಧನ್‌ರ ಮುಖ್ಯ ಉದ್ದೇಶವಾಗಿತ್ತು. ಪಟವರ್ಧನ್ ಅವರು ದೇಶದ ತರುಣರಿಗೆ ಸಮಾಜವಾದದ ತತ್ವಗಳನ್ನು ತಿಳಿಸುವುದಕ್ಕಾಗಿ ಅನೇಕ ಶಿಬಿರಗಳನ್ನು ಏರ್ಪಡಿಸಿದರು.

1942ರಲ್ಲಿ ಸತ್ಯಾಗ್ರಹದಲ್ಲಿ ಇವರು ಪ್ರಮುಖ ಪಾತ್ರವನ್ನೂ ವಹಿಸಿದರು. 1945–46ರಲ್ಲಿ ಇವರು ಭೂಗತರಾಗಿ (ಯಾರಿಗೂ ಕಾಣಿಸಿಕೊಳ್ಳದೆ) ಸಾತಾರಾ ಜಿಲ್ಲೆಯಲ್ಲಿ ಸತ್ಯಾಗ್ರಹವನ್ನು ಮಾಡಿದರು. ಸತ್ಯಾಗ್ರಹದಲ್ಲಿ ಇವರ ಪಾತ್ರವನ್ನು ಗಮನಿಸಿ ಅನೇಕರು ಇವರನ್ನು ಸಾತಾರೆಯ ಸಿಂಹ ಎಂದು ಕರೆದರು. ಸತ್ಯಾಗ್ರಹದ ಸಮಯದಲ್ಲಿ ಪಟವರ್ಧನ್ ಅವರು, ತಮ್ಮ ಸ್ನೇಹಿತರ ಬಟ್ಟೆ ಒಗೆಯುವುದು, ಅವರಿಗೆ ಅಡಿಗೆ ಮಾಡುವುದು ಮುಂತಾದ ವೈಯಕ್ತಿಕ ಸೇವೆಗಳನ್ನು ತಾವೇ ಮಾಡಿತೋರಿಸಿದರು.

ನಿರಂತರವಾಗಿ ಸಮಾಜವಾದಿ ಪಕ್ಷದ ವಾರ್ಷಿಕ ಸಮ್ಮೇಳನಗಳು ನಡೆಯುತ್ತಿದ್ದವು. 1947 ರಲ್ಲಿ ಕಾಂಗ್ರೆಸ್‌ನಿಂದ ಬೇರೆಯಾಗಿ (ರಾಜೀನಾಮೆ ಕೊಟ್ಟು) ಭಾರತೀಯ ಸಮಾಜವಾದಿ ಪಕ್ಷವನ್ನು ಇವರು ಸ್ಥಾಪಿಸಿದರು. 1966ರಲ್ಲಿ ಇವರು ಬೆಂಗಳೂರಿನ ಸೆಂಟ್ರಲ್ ಹಿಂದೂ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು. ಅಂದಿನಿಂದ ಇವರು ಯಾವ ಬಾಹ್ಯ ಸಂಪರ್ಕವನ್ನೂ ಇಟ್ಟುಕೊಳ್ಳದೆ ಏಕಾಂತ ಜೀವನ ನಡೆಸಲು ಆರಂಭಿಸಿದರು. ಇವರು ಮೊದಲಿನಿಂದಲೂ ಸರಳ ಜೀವನ ನಡೆಸುತ್ತಿದ್ದರು. ಇವರ ಮರಾಠೀ, ಹಿಂದಿ ಮತ್ತು ಇಂಗ್ಲಿಷ್ ಭಾಷಣಗಳು ತರ್ಕಬದ್ಧವಾಗಿರುತ್ತಿದ್ದವು. ಅಶೋಕ ಮೆಹತಾ ಅವರೊಂದಿಗೆ ಸೇರಿ ಇವರು ಬರೆದ 'ಕಮ್ಯೂನಲ್ ಟ್ರಿಯಾಂಗಲ್ ಆಫ್ ಇಂಡಿಯಾ' 1942 ರಲ್ಲಿ ಪ್ರಕಟವಾಯಿತು. ಸೀತಾರಾಮ ಪಟವರ್ಧನ್‌ರು 1992ರಲ್ಲಿ ನಿಧನರಾದರು.

ನೀಲಕಂಠರಾವ್ ರಾಮಚಂದ್ರ ಪಟವರ್ಧನ್

ಇವರು ಜನಿಸಿದ್ದು ಜನವರಿ ತಿಂಗಳು, 1881ರಲ್ಲಿ ಬನವಾಸಿಯಲ್ಲಿ. ಇವರ ತಂದೆ ರಾಮಚಂದ್ರರಾವ್. ಪಟವರ್ಧನ್ ಇವರ ಎರಡನೆಯ ಮಗ. ಇವರ ಬಹುಭಾಗದ ಶಿಕ್ಷಣ ಮನೆಯಲ್ಲಿಯೇ ಇವರ ತಂದೆಯವರಿಂದಲೇ ನಡೆಯಿತು. ವೈದ್ಯ ವೃತ್ತಿಯು ಅನುವಂಶಿಕವಾಗಿ ಬಂದಿತು. ಪಟವರ್ಧನ್ ಅವರಿಗೆ ಸಂಶೋಧನೆಯಲ್ಲಿ ಹೆಚ್ಚಿನ ಆಸಕ್ತಿ. 1912ರಲ್ಲಿ ಶಿರಸಿಗೆ ಬಂದು ಇವರು ಆಸ್ಪತ್ರೆಯನ್ನು ಆರಂಭಿಸಿದರು. ವಿದ್ಯೆಯೊಂದಿಗೆ ಇವರ ಕೈಗುಣವೂ ಸೇರಿ ಇವರ ಕೀರ್ತಿ ಬೇಗನೆ ಹರಡಿತು. ಆಯುರ್ವೇದ ಜ್ಯೋತಿಷ್ಯವನ್ನು ಓದಿದರು. ಪಟವರ್ಧನ್ ಅವರೇ ವನಸ್ಪತಿಗಳಿಂದ (ಬೇರು–ನಾರು) ಔಷಧಿಯನ್ನು ತಯಾರಿಸಿದರು. ಹೊರಗಿನ ವೈದ್ಯರುಗಳಿಂದಲೂ ಇವರ ಔಷಧಿಗಳಿಗೆ ಭಾರೀ ಬೇಡಿಕೆಗಳು ಬರತೊಡಗಿದವು. ವನಸ್ಪತಿಗಳಿಂದ ಅನೇಕ ಔಷಧಿಗಳನ್ನು ಇವರು ತಯಾರಿಸುತ್ತಿದ್ದರು. ರಾಮಚಂದ್ರ ಪಟವರ್ಧನ್ ಅವರು ತಮ್ಮ ಆಸ್ಪತ್ರೆಯ ಮುಂದೆ ಇದ್ದ ನಾಲ್ಕು ಎಕರೆ ಪ್ರದೇಶ ನಾನಾ ಔಷಧಿ ಗಿಡ ಹಾಗೂ ಎರಡು ಸಾವಿರಕ್ಕೂ ಮೇಲ್ಪಟ್ಟ ವಿವಿಧ ವನಸ್ಪತಿಗಳಿಂದ ಕೂಡಿತ್ತು.

ಅಲ್ಲದೆ ಶೆಣೈ ಎಂಬ ಚಿತ್ರಕಾರರಿಂದ ಸಾವಿರಾರು ವನಸ್ಪತಿಗಳ ಬೇರು, ಕಾಂಡ, ಎಲೆ, ಹೂವು, ಕಾಯಿ ಮತ್ತು ಅದರ ಉಪಯೋಗ ಮೊದಲಾದ ವಿವರಗಳನ್ನು ಬೇರೆ ಭಾಷೆಗಳಲ್ಲಿ ಕೊಟ್ಟಿರುವುದು ಇವರ ಮುಖ್ಯವಾದ ಕಾರ್ಯ. ನಾಡಿನ ವಿವಿಧ ಭಾಗಗಳಲ್ಲಿ ಸಂಗ್ರಹಿಸಿ ಸಮಾನವಾದ ಸಂಸ್ಕೃತ, ಮರಾಠೀ ಹೆಸರುಗಳನ್ನು ಕೊಟ್ಟು ಪಟವರ್ಧನರು ಉತ್ತಮವಾದ ಒಂದು ವನಸ್ಪತಿ ಕೋಶವನ್ನೇ ರಚಿಸಿದ್ದಾರೆ.

1939ರಲ್ಲಿ ಹನ್ನೊಂದನೆ ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನ ಶಿರಸಿಯಲ್ಲಿ ಏರ್ಪಟ್ಟಾಗ ಪಟವರ್ಧನರು ಮುಂದಾಳತ್ವವನ್ನು ವಹಿಸಿ, ಅದನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ್ದರು.

ಪಟವರ್ಧನರ ಕೀರ್ತಿ ಕರ್ನಾಟಕದಲ್ಲಿ ಮಾತ್ರವಲ್ಲದೆ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಿಗೂ ಹಬ್ಬಿತ್ತು. ಮಹಾರಾಷ್ಟ್ರದ ಆಯುರ್ವೇದ ಪಂಡಿತರು 1953ರಲ್ಲಿ ಇವರ ಗೌರವಾರ್ಥವಾಗಿ ಆಯುರ್ವೇದ ಸ್ಮರಣ ಸಂಚಿಕೆಯನ್ನೂ ಪ್ರಕಟಿಸಿದ್ದಾರೆ. ಬಾಲಗಂಗಾಧರ ತಿಲಕರಿಂದ ಸ್ಫೂರ್ತಿ ಪಡೆದ ಪಟವರ್ಧನ್ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಕುಟುಂಬ ಸಹಿತ ಭಾಗವಹಿಸಿದರು. ಇವರು ವಿದೇಶಿ ವಸ್ತ್ರಗಳನ್ನು ತ್ಯಜಿಸಿದರು. ಅಸ್ಪೃಶ್ಯರು ಹಾಗೂ ನಿರ್ಗತಿಕರಿಗೆ (ಹಣ ತೆಗೆದುಕೊಳ್ಳದೆ) ಔಷಧಿಯನ್ನು ನೀಡುತ್ತಿದ್ದರು. ಸೀತಾರಾಮ ಪಟವರ್ಧನ್ ಅವರು ರೋಗಿಗಳ ಸಲುವಾಗಿ ಧರ್ಮಶಾಲೆಯನ್ನು ಕಟ್ಟಿಸಿದರು. ಹೀಗೆ ನಿಸ್ವಾರ್ಥ ಜೀವನಕ್ಕೆ ಹಾಗೂ ಶ್ರಮಜೀವನಕ್ಕೆ ಇವರು ಉತ್ತಮ ವ್ಯಕ್ತಿಯಾದರು. ಸೀತಾರಾಮ ಪಟವರ್ಧನ್ 1958 ರಲ್ಲಿ ಬನವಾಸಿಯಲ್ಲಿ ನಿಧನರಾದರು.

ಪುರುಷರ ಹಾಕಿ ವಿಶ್ವಕಪ್‌ನ ಜನನ





ಕಳೆದ ಜನವರಿಯಲ್ಲಿ ನಡೆದ ವಿಶ್ವಕಪ್ ಹಾಕಿ ಟೂರ್ನಿಮೆಂಟ್‌ನಲ್ಲಿ ಕಪ್ ಗೆದ್ದು ಸಂಭ್ರಮಿಸುತ್ತಿರುವ ಜರ್ಮನಿ ತಂಡ.



ಡಾ.ಕಲ್ಯಾಟಂಡ ಬಿ.ಚಿಣ್ಣಪ್ಪ,
ಗೋಣಿಕೊಪ್ಪ,
ಮೊ: 95350 68766
(ಆಧಾರ: ಅವರ ಪಿಹೆಚ್.ಡಿ ವಿದ್ವತ್ ಪ್ರಬಂಧ)

> "ಕಳೆದ ಜನವರಿ 13ರಿಂದ 29ರವರೆಗೆ ಒಡಿಸ್ಸಾದ ರೂರ್ಕೆಲಾದಲ್ಲಿ ನಡೆದ ವಿಶ್ವ ಕಪ್ ಹಾಕಿ ಟೂರ್ನಮೆಂಟ್‌ಗೆ ಒಂದು ರೋಚಕ ಇತಿಹಾಸವಿದೆ. ಜೊತೆಗೆ ವಿಶ್ವ ಕಪ್ ರೂಪಿತವಾದ ಸಂಗತಿಯೂ ಅತ್ಯಂತ ಆಸಕ್ತಿದಾಯಕ. ಈ ವಿಚಾರವನ್ನು ಡಾ. ಕಲ್ಯಾಟಂಡ ಬಿ.ಚಿಣ್ಣಪ್ಪ ಅವರು ತಮ್ಮ ಈ ಲೇಖನದಲ್ಲಿ ಸಮಗ್ರವಾಗಿ ವಿವರಿಸಿದ್ದಾರೆ.

ಭಾರತವು ಹನ್ನೆರಡು ಬಾರಿ ಒಲಂಪಿಕ್ ಹಾಕಿ ಟೂರ್ನಿಯ ಭಾಗಿತ್ವದಲ್ಲಿ (1928 ರಿಂದ 1980ರವರೆಗೆ) ಎಂಟು ಬಾರಿ ಗೋಲ್ಡ್ (ಚಿನ್ನ), ಒಮ್ಮೆ ಸಿಲ್ವರ್ (ಬೆಳ್ಳಿ), ಎರಡು ಬಾರಿ ಬ್ರಾಂಜ್ (ಕಂಚು) ಮೆಡಲ್‌ಗಳನ್ನು ಗೆದ್ದಿತ್ತು. ಒಮ್ಮೆ (1976) ಹೀನಾಯ ಸೋಲುಂಡು ಏಳನೆಯ ಸ್ಥಾನಕ್ಕೆ ಇಳಿಯಿತು. ಪಾಕಿಸ್ತಾನವು ಒಂಬತ್ತು ಬಾರಿಯ ಒಲಂಪಿಕ್ ಭಾಗಿತ್ವದಲ್ಲಿ (1948ರಿಂದ 1980ರವರೆಗೆ) ಎರಡು ಬಾರಿ ಗೋಲ್ಡ್, ಮೂರು ಬಾರಿ ಸಿಲ್ವರ್, ಒಮ್ಮೆ ಬ್ರಾಂಜ್, ಎರಡು ಬಾರಿ ನಾಲ್ಕನೆಯ ಸ್ಥಾನ ಗಳಿಸಿತು. ಒಮ್ಮೆ (1980) ಒಲಂಪಿಕ್‌ನಲ್ಲಿ ಭಾಗವಹಿಸಲೇ ಇಲ್ಲ. 1928 ರಿಂದ 1936ರ ಒಲಂಪಿಕ್ಸ್‌ನಲ್ಲಿ ಅವಿಭಾಜ್ಯ ಇಂಡಿಯಾ ಗೋಲ್ಡ್ ಮೆಡಲ್ ಪಡೆಯಿತು.

1980ರ ನಂತರದ ಒಲಂಪಿಕ್ ಹಾಕಿ ಟೂರ್ನಿ ಮತ್ತು 1982ರ ನಂತರದ ಪುರುಷರ ವಿಶ್ವಕಪ್ ಹಾಕಿ ಟೂರ್ನಿಗಳಲ್ಲಿ ಭಾಗವಹಿಸಿದ ಭಾರತ ಮತ್ತು ಪಾಕಿಸ್ತಾನ ತಮ್ಮ ತಮ್ಮ ಹಾಕಿ ಆಟದ ಗುಣಮಟ್ಟ ಇಳಿಮುಖವಾಗಿದೆಯೆಂಬುದನ್ನು ಮನವರಿಕೆ ಮಾಡಿಕೊಳ್ಳಲೇ ಇಲ್ಲ.

ಭಾರತ ಹಾಗೂ ಪಾಕಿಸ್ತಾನ ಹಾಕಿ ಆಟದ ಗುಣಮಟ್ಟ ಇಳಿಕೆಯ ಸೂಚನೆ ಯಾದರೆ ಮತ್ತೊಂದು ದಿಶೆಯಲ್ಲಿ ಇತರ ಕೆಲವು ರಾಷ್ಟ್ರಗಳು (ಪ್ರಮುಖ ಆಸ್ಟ್ರೇಲಿಯಾ, ನೆದರ್‌ಲ್ಯಾಂಡ್, ಜರ್ಮನಿ ಮೊದಲಾದವು) ಹಾಕಿ ಆಟದಲ್ಲಿ ತಮ್ಮ ಸಾಮರ್ಥ್ಯ ಇಮ್ಮಡಿಗೊಳಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ಭಾರತ ಮತ್ತು ಪಾಕಿಸ್ತಾನ ಎಚ್ಚೆತ್ತು ತಮ್ಮ ತಮ್ಮ ರಾಷ್ಟ್ರಗಳ ಹಾಕಿಯ ಗುಣಮಟ್ಟವನ್ನು ಜಾಗತಿಕ ಮಟ್ಟಕ್ಕೆ ಏರಿಸಿ, ಈ ಮಹತ್ವದ ಕ್ರೀಡೆಯ ಸುವರ್ಣ ಯುಗ (ಗೋಲ್ಡನ್ ಇರಾ)ವನ್ನು ಮರು ಸ್ಥಾಪಿಸಬೇಕು. ಆ ಮೂಲಕ ಒಲಂಪಿಕ್ ಮೆಡಲ್ ತಮ್ಮಿಬ್ಬರಲ್ಲೇ ಅಥವಾ ಏಷ್ಯಾ ಉಪಖಂಡದಲ್ಲೇ ಇರಬೇಕೆಂಬ ಇಚ್ಛಾಶಕ್ತಿ ಹೊಂದಬೇಕಿದೆ.

ಜನನ: ಒಲಂಪಿಕ್ ಹಾಕಿ ಟೂರ್ನಿ ನಾಲ್ಕು ವರ್ಷಕ್ಕೊಮ್ಮೆ ನಡೆಯುತ್ತಿದೆ. ಇದು ಬಹು ವಿಸ್ತೃತ ಕಾಲಾವಧಿಯದ್ದಾಗಿದೆ. ಮಧ್ಯೆ ಮತ್ತೊಂದು ಜಾಗತಿಕ ಮಟ್ಟದ ಹಾಕಿ ಪಂದ್ಯಾಟವನ್ನು ಅಂತರ ರಾಷ್ಟ್ರೀಯ ಹಾಕಿ ಸಂಸ್ಥೆ (Federation of International de hockey FIH) ಮೂಲಕ ಆಯೋಜಿಸಿದರೆ ಸಾಂಪ್ರದಾಯಿಕ ಕ್ರೀಡೆಗೆ ಮಹತ್ವ ಹೆಚ್ಚಿ ಹಾಕಿಯ ಗುಣಮಟ್ಟ ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಸುಧಾರಿಸಬಹುದೆಂಬ ನಿಟ್ಟಿನಲ್ಲಿ 30ನೇ ಮಾರ್ಚ್ 1967 ರಲ್ಲಿ ನಡೆದ ಎಫ್‌ಐಹೆಚ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಈ ಎರಡೂ ರಾಷ್ಟ್ರಗಳು ಜಂಟಿಯಾಗಿ ಪುರುಷರ ವಿಶ್ವ ಕಪ್ ಹಾಕಿ ಟೂರ್ನಿಯ ಪ್ರಸ್ತಾಪವನ್ನು ಮಂಡಿಸಿದ್ದವು.

ಈ ಪ್ರಸ್ತಾಪವನ್ನು ಗಣನೆಗೆ ತೆಗೆದುಕೊಂಡ ಕೌನ್ಸಿಲ್, ನಂತರ ಎಂಟು ಸದಸ್ಯರ ಒಂದು ಆಯೋಗ (ಕಮೀಷನ್) ರಚಿಸಿ ಈ ಪ್ರಸ್ತಾಪದ ಸಾಧಕ ಬಾಧಕಗಳ ಅಧ್ಯಯನ ನಡೆಸಿ, ವರದಿ ನೀಡಲು ಸೂಚಿಸಿತು. ಅದರಂತೆ ಈ ಆಯೋಗ ಒಮ್ಮತದ ವರದಿಯನ್ನು ಕೌನ್ಸಿಲ್‌ಗೆ 26ನೇ ಅಕ್ಟೋಬರ್ 1969ರಲ್ಲಿ ಮಂಡಿಸಿತು. ಅದರಂತೆ ಪುರುಷರ ವಿಶ್ವಕಪ್ ಹಾಕಿ ಟೂರ್ನಿಯನ್ನು ಎರಡು ವರ್ಷಗಳಿಗೊಮ್ಮೆ ನಡೆಸುವಂತೆ ಶಿಫಾರಸ್ಸು ಮಾಡಿತ್ತು.

ಈ ವರದಿಯನ್ನು ಎಫ್‌ಐಹೆಚ್ ಸರ್ವಾನುಮತದಿಂದ ಅಂಗೀಕರಿಸಿ, ಅದೇ ಆಯೋಗವು ಈ ಟೂರ್ನಿಯ ತತ್ಸಂಬಂಧಿತ ಕಾನೂನು, ಕಾಯ್ದೆ ಮತ್ತು ಅರ್ಹತೆಗಳನ್ನು ರೂಪಿಸಲು ಸೂಚಿಸಿತು. ಅದರಂತೆ ಆಯೋಗ ಸಂಪೂರ್ಣ ವಿವರವನ್ನು ಕೌನ್ಸಿಲ್‌ಗೆ ಸಲ್ಲಿಸಿತು. ಈ ವರದಿಯನುಸಾರ ಎಫ್‌ಐಹೆಚ್ ಏಪ್ರಿಲ್ 1971ರಲ್ಲಿ ಪ್ರಾರಂಭಿಕ ಟೂರ್ನಿ ನಡೆಸಲು ತೀರ್ಮಾನಿಸಿತು.

ಪಾಕಿಸ್ತಾನ ಈ ಟೂರ್ನಿಗೆ ಆಕರ್ಷಕ ವಿಶ್ವಕಪ್ ಅನ್ನು ಎಫ್‌ಐಹೆಚ್ ಸುಪರ್ದಿಗೆ ಡೊನೇಟ್ ಮಾಡಲು ಸ್ವಇಚ್ಛೆಯಿಂದ ಒಪ್ಪಿತು. ಆ ದೇಶವು ಟ್ರೋಫಿಯನ್ನು ಮೊದಲು ಒಂದು ಹಾಕಿ ಸ್ಟಿಕ್ ಮಾದರಿಯಲ್ಲಿ ರೂಪಿಸಿ ಬಂಗಾರ ಮತ್ತು ಬೆಳ್ಳಿಯಿಂದ ಕೃತ್ರಿಮ ಸೃಷ್ಟನೆ ಮಾಡುವ ಕಲ್ಪನೆಯಿತ್ತು. ಆದರೆ ಆಗಿನ ಪಾಕಿಸ್ತಾನದ ಅಧ್ಯಕ್ಷರಾಗಿದ್ದ ಲೆಫ್ಟಿನೆಂಟ್ ಜನರಲ್ ಕೆ.ಯಂ. ಅಜೀರ್ ಖಾನ್ ಅವರ ಕಲ್ಪನೆಯಂತೆ ಪಾಕಿಸ್ತಾನದ ಹಾಕಿ ಫೆಡರೇಷನ್ ಮತ್ತು ಮೇಧಾವಿ ನಕ್ಷೆಗಾರ ಬಷೀರ್ ಮಸ್ಜೀದ್, ಹಾಗೂ ಪಾಕಿಸ್ತಾನ ಸೇನೆಯ ವಿದ್ಯುತ್ ವಿಭಾಗ ಮತ್ತು ಮೆಕ್ಯಾನಿಕ್ ವಿಭಾಗಗಳಲ್ಲಿದ್ದ ಕೆಲವು ಇಂಜಿನಿಯರ್ ಶಿಲ್ಪಿಗಳ ಸಾಮೂಹಿಕ ಪರಿಶ್ರಮದಿಂದ ಟ್ರೋಫಿಯು ಅತ್ಯಂತ ಕಲಾತ್ಮಕ ಮತ್ತು ಸುಂದರವಾಗಿ ರೂಪಿಸಲ್ಪಟ್ಟಿತು.

ಈ ವಿಶ್ವಕಪ್ 120.85 ಮಿ.ಮಿ. ಎತ್ತರದ ಪೀಠದಲ್ಲಿ ರೂಪಿಸಿದ್ದು, ದಂತದಿಂದ ಕುಂದಣ ಕೆಲಸ ಮಾಡಲ್ಪಟ್ಟಿದೆ. ಇದು ಒಂದು ಬೆಳ್ಳಿಯ ಬಟ್ಟಲಿನಲ್ಲಿ ಅಡಕಗೊಂಡು ಸುತ್ತಲೂ ಕಲಾನೈಪುಣ್ಯದ ಪುಷ್ಪಗಳ ಕಲಾಕೃತಿಯಿಂದ ಅತೀ ಸುಂದರವಾಗಿ ಮೂಡಿಬಂದಿದೆ. ಇವುಗಳ ಮೇಲೆ ಬಂಗಾರ ಮತ್ತು ಬೆಳ್ಳಿಯ ಭೂಮಂಡಲ (ಗ್ಲೋಬ್)ವಿದ್ದು, ಇದರ ಮೇಲೆ ಚೆಂಡು ಮತ್ತು ಹಾಕಿ ಸ್ಟಿಕ್ಕನ್ನು ಪರಿಪೂರ್ಣತೆಯ ಸಂಕಲ್ಪ ಹಾಗೂ ಒಪ್ಪುವಂತೆಯೂ ಅಳವಡಿಸಲಾಗಿದೆ.

ಈ ವಿಶ್ವಕಪ್ ಟ್ರೋಫಿಯು 650 ಮಿ.ಮಿ. ಎತ್ತರವಿದ್ದು, 11,560 ಗ್ರಾಂ ತೂಕವಿದ್ದು, 895 ಗ್ರಾಂ ಬಂಗಾರ, 6815 ಗ್ರಾಂ ಬೆಳ್ಳಿ, 350 ಗ್ರಾಂ ದಂತ ಮತ್ತು 3500 ಗ್ರಾಂ ಟೀಕ್ ಮರದ ಕಲಾಕೃತಿಗಳಿಂದ ಕೂಡಿದ್ದು, 75,000 ಪೌಂಡ್ಸ್ ಮೌಲ್ಯವುಳ್ಳದ್ದು. ಮಾತ್ರವಲ್ಲ ಅತೀ ಮೋಹಕವಾಗಿದೆ.

ಈ ಟ್ರೋಫಿಯನ್ನು ಬೆಲ್ಜಿಯಮ್‌ನಲ್ಲಿದ್ದ ಪಾಕಿಸ್ತಾನದ ಆಗಿನ ರಾಯಭಾರಿ ಹೆಚ್.ಇ. ಮಸೂದ್, ಬ್ರೆಜಿಲ್‌ನಲ್ಲಿ 27ನೇ ಮಾರ್ಚ್ 1971 ರಲ್ಲಿ ಏರ್ಪಡಿಸಿದ್ದ ಸರಳ ಸಮಾರಂಭದಲ್ಲಿ ಎಫ್‌ಐಹೆಚ್‌ನ ಅಂದಿನ ಅಧ್ಯಕ್ಷ ರೆನ್‌ಫ್ರೆಂಕ್ ಅವರಿಗೆ ಒಪ್ಪಿಸಿದರು.

ಹೌದು! ಇಂತಹ ಅದ್ಭುತ ಕಲಾಕೃತಿಯಿಂದ ಕೂಡಿದ ಬೆಲೆ ಬಾಳುವ ಸುಂದರ ಟ್ರೋಫಿಯು ಪುರುಷರ ವಿಶ್ವ ಮಟ್ಟದ ಟೂರ್ನಿಯ ಅತ್ಯಂತ ಚಾಕಚಕ್ಯತೆಯ ಹೊಂದಾಣಿಕೆಯಿಂದ ಕೂಡಿದ ಕಲಾತ್ಮಕ ಆಟಗಾರರಿರುವ ಟೀಂನ ಕೈಸೇರುವುದು ಔಚಿತ್ಯವೇ ಸರಿ. ಈ ವಿಶ್ವಕಪ್ ಟೂರ್ನಿಯು ಎಫ್‌ಐಹೆಚ್ ಮೊದಲು ತೀರ್ಮಾನಿಸಿದಂತೆ 1971ರಿಂದ 1975 ರವರೆಗೆ ಎರಡು ವರ್ಷಗಳಿಗೆ ಒಮ್ಮೆ ನಡೆಯಿತು. ನಂತರ ಈ ಟೂರ್ನಿಯನ್ನು ಒಲಂಪಿಕ್‌ನ ನಾಲ್ಕು ವರ್ಷಗಳ ಮಧ್ಯೆ ಬರುವಂತೆ ನಾಲ್ಕು ವರ್ಷಗಳಿಗೆ ಒಂದು ಸಾರಿ ನಡೆಸುವಂತೆ ಎಫ್‌ಐಹೆಚ್ ತೀರ್ಮಾನಿಸಿದ್ದರಿಂದ ನಾಲ್ಕನೆಯ ವಿಶ್ವಕಪ್ ಟೂರ್ನಿಯು 1978 ರಲ್ಲಿ ನಡೆಸಲಾಯಿತು. ಇದರ ನಂತರದ ಹಾಕಿ ಟೂರ್ನಿಯು ಮುಂಬೈಯಲ್ಲಿ ಡಿಸೆಂಬರ್ 29, 1981 ರಿಂದ 12ನೇ ಜ.1982 ರವರೆಗೆ ನಡೆಯಿತು.

ಫೇರ್‌ಪ್ಲೇ ಟ್ರೋಫಿ ಹಾಕಿ ಕ್ರೀಡೆಯನ್ನು ಸೌಮ್ಯ ಹಾಗೂ ಸುರಕ್ಷಿತವಾಗಿ ಆಡುವ ಮಲೇಷ್ಯಾನ್ ಹಾಕಿ ಫೆಡರೇಷನ್ನಿನ ಆಗಿನ ಪ್ರೆಸಿಡೆಂಟ್‌ರಾಗಿದ್ದ ರೈಟ್ ಹಾನರೆಬಲ್ ಟುನ್ ಹಾಜಿ ಅಬ್ದುಲ್ ರಸಾಕೆಬಿನ್ ಡಾಟೋ ಹುಸೇನ್, ಫೇರ್ ಪ್ಲೇ ಟ್ರೋಫಿಯನ್ನು ಕೊಡುಗೆ ನೀಡಿದರು. ಇದು ಈಗಲೂ ಎಫ್‌ಐಹೆಚ್‌ನ ಸುಪರ್ದಿಯಲ್ಲಿದ್ದು ಇದರ ರೆಪ್ಲಿಕಾವನ್ನು ಟೂರ್ನಿಯ ಫೇರ್ ಪ್ಲೇಯ್ಡ್ ಟೀಮಿಗೆ ನೀಡುವಂತೆ ಒಪ್ಪಿಗೆಯಾಯಿತು.

ವಿಶ್ವಕಪ್ ಟೂರ್ನಿಯನ್ನು ಬೇರೆ ಬೇರೆ ರಾಷ್ಟ್ರಗಳು ನಡೆಸಿ 15ನೇ ಬಾರಿ ಈ ವರ್ಷ ಭಾರತದಲ್ಲಿ ನಡೆಸುವ ಅವಕಾಶವನ್ನು ಕಲ್ಪಿಸಲಾಗಿತ್ತು. ಈ ಜವಾಬ್ದಾರಿಯನ್ನು ಭಾರತ ಅತ್ಯಂತ ಯಶಸ್ವಿಯಾಗಿ ನಿರ್ವಹಣೆ ಮಾಡಿದ್ದು, ಒಡಿಸ್ಸಾದ ರೂರ್ಕೆಲಾದಲ್ಲಿ ನೂತನವಾಗಿ ನಿರ್ಮಿಸಿರುವ ಬಿರ್ಸಾ ಮುಂಡಾ ಹಾಕಿ ಸ್ಟೇಡಿಯಂನಲ್ಲಿ 20,000 ವೀಕ್ಷಕ ಆಸನವಿರುವ ಅಂತರರಾಷ್ಟ್ರೀಯ ಮಟ್ಟದ ಹಾಕಿ ಸ್ಟೇಡಿಯಂ ಹಾಗೂ ಭುವನೇಶ್ವರದ ಕಳಿಂಗಾ ಕ್ರೀಡಾಂಗಣದಲ್ಲಿ ಟೂರ್ನಿ ಜ.13ರಿಂದ 29ರವರೆಗೆ ನಡೆಯಿತು. ಇದರಲ್ಲಿ 16 ತಂಡಗಳು ಪಾಲ್ಗೊಂಡಿದ್ದು, 44 ಪಂದ್ಯಗಳು ನಡೆದವು. ಇದರಲ್ಲಿ ಜರ್ಮನಿ ಚಾಂಪಿಯನ್ ಆಗಿ ಹೊರಹೊಮ್ಮಿ 3ನೇ ಬಾರಿ ವಿಶ್ವ ಕಪ್ ತನ್ನ ಮಡಿಲಿಗೆ ಹಾಕಿಕೊಂಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಪೌರ ಕಾರ್ಮಿಕರ ನೌಕರಿ ಖಾಯಂಗೊಳಿಸುವುದಾಗಿ ಭರವಸೆ: ಧರಣಿ ಅಂತ್ಯ



ಬೆಂಗಳೂರು: ರಾಜ್ಯ ವಿಧಾನಸಭಾ ಚುನಾ ವಣೆ ಹತ್ತಿರಬರುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಬಿಬಿಎಂಪಿ ಪೌರಕಾರ್ಮಿಕರ ಬೇಡಿಕೆಗೆ ಮನ್ನಣೆ ನೀಡಿದ್ದು, ಅವರ ಉದ್ಯೋಗಗಳನ್ನು ಕಾಯಂಗೊಳಿಸಲು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಪೌರಕಾರ್ಮಿಕರು ಪ್ರತಿಭಟನೆಯನ್ನು ಅಂತ್ಯಗೊಳಿಸಿದ್ದಾರೆ. 16,000 ಪೌರಕಾರ್ಮಿಕರ ನೇಮಕಾತಿಗೆ ಹಣಕಾಸು ಇಲಾಖೆ ಅನುಮೋದನೆ ವಿರುದ್ಧ ಬಿಬಿಎಂಪಿ 3,673 ಪೌರಕಾರ್ಮಿಕರಿಗೆ ನೇಮಕಾತಿ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಅಖಿಲ ಭಾರತ ಕೇಂದ್ರೀಯ ಕಾರ್ಮಿಕ ಸಂಘಗಳ (ಎಐಸಿಸಿಟಿಯು) ಸಂಯೋಜಿತ ಕರ್ನಾಟಕ ಪೌರಕಾರ್ಮಿಕ ಸಂಘ ಮತ್ತು ಬಿಬಿಎಂಪಿ ಪೌರಕಾರ್ಮಿಕರ ಸಂಘದ ಸದಸ್ಯರು ಪ್ರತಿಭಟನೆ ನಡೆಸುತ್ತಿದ್ದರು.

ಇದಲ್ಲದೆ, ನಕಲಿ ದಾಖಲೆಗಳನ್ನು ಸಲ್ಲಿಸಿ ಲಂಚ ನೀಡಿ ಬಿಬಿಎಂಪಿಗೆ ಹಲವು ಪೌರ ಕಾರ್ಮಿಕರನ್ನು ಅಕ್ರಮವಾಗಿ ನೇಮಿಸ ಲಾಗಿದೆ ಎಂದು ಕಾರ್ಮಿಕರು ಆರೋಪಿಸಿದ್ದರು. ಈ ನೇಮಕಾತಿ ಆದೇಶವನ್ನು ರದ್ದು ಗೊಳಿಸಬೇಕೆಂದು ಆಗ್ರಹಿಸಿದ್ದರು. ಎಲ್ಲ ಪೌರಕಾರ್ಮಿಕರ ಉದ್ಯೋಗ ಗಳನ್ನು ಕಾಯಂಗೊಳಿಸಬೇಕೆಂಬ ಬಿಬಿಎಂಪಿ ಪೌರಕಾರ್ಮಿಕರ ಸಂಘದ ಬೇಡಿಕೆಗೆ ಸರಕಾರ ಮನ್ನಣೆ ನೀಡಿದ್ದು, ಈ ಸಂಬಂಧ ಕ್ರಮಕೈಗೊಳ್ಳಲಾಗುವುದು. ಒಂದು ಅಥವಾ ಎರಡು ವಾರಗಳಲ್ಲಿ ಅಧಿಸೂಚನೆ ಹೊರಡಿಸಲಾಗುವುದು ಎಂದು ಭರವಸೆ ನೀಡಿದೆ.


ಮಂಗಳವಾರ ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ ರಾಯಪುರ ಅವರು, ಪ್ರತಿಭಟನಾ ನಿರತ ಪೌರಕಾರ್ಮಿಕರನ್ನುದ್ದೇಶಿಸಿ ಮಾತನಾಡಿ, ಎಲ್ಲ ಪೌರಕಾರ್ಮಿಕರ ನೌಕರಿಯನ್ನು ಖಾಯಂ ಮಾಡುವ ಕಡತ ಮುಖ್ಯ ಮಂತ್ರಿಗಳ ಮುಂದಿದ್ದು, ಎರಡು ದಿನಗಳಲ್ಲಿ ಅನುಮೋದನೆ ನೀಡಲಾಗುವುದು ಎಂದು ಭರವಸೆ ನೀಡಿದರು. ಎರಡು ವಾರಗಳ ಅವಧಿಯಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗುವುದು ಎಂದು ಹೇಳಿದರು. ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ 16,000 ಪೌರಕಾರ್ಮಿಕರ ಉದ್ಯೋಗಗಳನ್ನು ಏಕಕಾಲಕ್ಕೆ ಖಾಯಂಗೊಳಿಸಲಾಗುವುದು ಮತ್ತು ಅಲ್ಲಿಯವರೆಗೆ 3,673 ಕಾರ್ಮಿಕರಿಗೆ ಸಂಬಂಧಿಸಿದಂತೆ ಪ್ರಸ್ತುತ ನಡೆಯುತ್ತಿರುವ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಸರ್ಕಾರದ ಭರವಸೆ ಹಿನ್ನೆಲೆಯಲ್ಲಿ ಧರಣಿ ಹಿಂಪಡೆಯಲಾಗಿದೆ. ಪೌರ ಕಾರ್ಮಿಕರನ್ನು ಕಾಯಂ ಮಾಡದಿದ್ದರೆ ಬೀದಿಗಿಳಿಯದೇ ನಮಗೆ ಬೇರೆ ದಾರಿಯಿಲ್ಲ ಎಂದು ಎಐಸಿಸಿಟಿಯು ರಾಜ್ಯ ಸಮಿತಿ ಸದಸ್ಯೆ ಮೈತ್ರೇಯಿ ಹೇಳಿದ್ದಾರೆ.

ಮನೆಯ ಹಿಂಬಾಗಿಲು ಮುರಿದು ಚಿನ್ನಾಭರಣ ಕಳವು

ಮೈಸೂರು, ಮಾ. 1– ಮನೆಯ ಹಿಂಬಾಗಿಲ ಮೂಲಕ ಒಳನುಗ್ಗಿದ ಖದೀಮರು, ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಮೈಸೂರಿನ ಜಯಲಕ್ಷ್ಮಿಪುರಂನ ಚಿನ್ಮಯ ಶಾಲೆ ಹಿಂಭಾಗ ನಡೆದಿದೆ. ಅಲ್ಲಿನ ನಿವಾಸಿ ಹೆಚ್.ಆರ್. ಪುರುಷೋತ್ತಮ್ (63) ಅವರು ಫೆಬ್ರವರಿ 26ರಂದು ಬೆಳಗ್ಗೆ 9 ಗಂಟೆಗೆ ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಬಸವ ಭವನದಲ್ಲಿ ನಡೆದ ಸತ್ಸಂಗ ಕಾರ್ಯಕ್ರಮಕ್ಕೆ ಕುಟುಂಬ ಸಮೇತ ತೆರಳಿದ್ದಾರೆ. ಮಧ್ಯಾಹ್ನ 3.40ಕ್ಕೆ ಹಿಂತಿರುಗಿದಾಗ ಮುಂದಿನ ಬಾಗಿಲು ಒಳಗಿನಿಂದ ಚಿಲಕ ಹಾಕಿ ಹಿಂಬದಿ ಹೋಗಿ ನೋಡಿದಾಗ ಹಿಂದಿನ ಬಾಗಿಲು ತೆರೆದಿದ್ದು ಮನೆಯ ರೂಂನ ವಾರ್ಡ್‌ರೋಬ್‌ನಲ್ಲಿಟ್ಟಿದ್ದ 10 ಗ್ರಾಂ ತೂಕದ ಚಿನ್ನದ ಉಂಗುರ, 60 ಗ್ರಾಂ ತೂಕದ ಬೆಳ್ಳಿ ಕಾಲುಚೈನು ಮತ್ತು ಲಕ್ಷ ರೂ. ನಗದು ಕಳವು ಮಾಡಲಾಗಿದೆ. ಈ ಸಂಬಂಧ ಜಯಲಕ್ಷ್ಮಿಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಟ ಅಮಿತಾಬ್ ಬಚ್ಚನ್, ಧರ್ಮೇಂದ್ರ ಬಂಗಲೆಗಳನ್ನು ಸ್ಫೋಟಿಸುವುದಾಗಿ ಬೆದರಿಕೆ!





ಮುಂಬೈ: ಅಮಿತಾಬ್ ಬಚ್ಚನ್ ಮತ್ತು ಧರ್ಮೇಂದ್ರ ಅವರ ಮನೆಯನ್ನು ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದ ವ್ಯಕ್ತಿಯಿಂದ ನಾಗ್ಪುರ ಪೊಲೀಸ್ ನಿಯಂತ್ರಣಕ್ಕೆ ಅನಾಮಧೇಯ ಕರೆ ಬಂದಿದೆ. ಮೂಲಗಳ ಪ್ರಕಾರ, ಮುಖೇಶ್ ಅಂಬಾನಿಯವರ ಅದ್ದೂರಿ ಮನೆಯಾದ ಆಂಟಿಲಿಯಾದಲ್ಲಿಯೂ ಸ್ಫೋಟ ಸಂಭವಿಸಲಿದೆ ಎಂದು ಕರೆ ಮಾಡಿದವರು ಹೇಳಿಕೊಂಡಿದ್ದಾರೆ. ಈ ಕರೆ ಮಾಡಿದ ಕೂಡಲೇ ನಾಗ್ಪುರ ಪೊಲೀಸ್ ಕಂಟ್ರೋಲ್ ರೂಂ ಮುಂಬೈ ಪೊಲೀಸರಿಗೆ ಮಾಹಿತಿ ನೀಡಿದೆ. ಮುಂಬೈ ಪೊಲೀಸರು ಕರೆ ಮಾಡಿದವರನ್ನು ಪತ್ತೆಹಚ್ಚಲು ಪ್ರಯತ್ನಿಸುತ್ತಿದ್ದಾರೆ. ಮುಂಬೈ ಪೊಲೀಸರಿಗೆ ಇದು ಹುಸಿ ಕರೆಯೇ ಎಂದು ಸಹ ಹೇಳಲು ಸದ್ಯಕ್ಕೆ ಸಾಧ್ಯವಾಗುತ್ತಿಲ್ಲ.

ಅಮಿತಾಬ್ ಬಚ್ಚನ್ ಮುಂಬೈನಲ್ಲಿ ಐದು ಐಷಾರಾಮಿ ಮನೆಗಳನ್ನು ಹೊಂದಿದ್ದಾರೆ. ಅವರ ಮನೆಗಳ ಹೆಸರು– ಜಲ್ಸಾ, ಜನಕ್, ವತ್ಸಾ ಮತ್ತು ಪ್ರತೀಕ್ಷಾ. ಪ್ರತೀಕ್ಷಾ ಮುಂಬೈನಲ್ಲಿ ಬಚ್ಚನ್‌ಗಳು ಖರೀದಿಸಿದ ಮೊದಲ ಮನೆಯಾಗಿದೆ. ಇದು ಅಮಿತಾಭ್ ಅವರ ದಿವಂಗತ ಪೋಷಕರು ವಾಸಿಸುತ್ತಿದ್ದ ಮನೆ. ಸದ್ಯ, ಇಡೀ ಬಚ್ಚನ್ ಕುಟುಂಬ ಜಲ್ಸಾದಲ್ಲಿ ನೆಲೆಸಿದೆ. ಮತ್ತೊಂದೆಡೆ, ಧರ್ಮೇಂದ್ರ ಜುಹುದಲ್ಲಿನ ಬಂಗಲೆಯಲ್ಲಿ ವಾಸಿಸುತ್ತಿದ್ದಾರೆ.

ಅಂಬಾನಿ ಕುಟುಂಬಕ್ಕೆ Z+ ಭದ್ರತೆ: ಉದ್ಯಮಿ ಮುಖೇಶ್ ಅಂಬಾನಿ ಮತ್ತು ಅವರ ಕುಟುಂಬಕ್ಕೆ Z+ ಭದ್ರತೆ ಒದಗಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರವನ್ನು ಕೇಳಿದೆ. ಮುಂಬೈನಲ್ಲಿ ಮಾತ್ರವಲ್ಲದೆ ದೇಶ ಮತ್ತು ವಿದೇಶಗಳಲ್ಲಿಯೂ ಅವರಿಗೆ ಭದ್ರತೆಯನ್ನು ಒದಗಿಸಬೇಕು ಎಂದು ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ ಹೇಳಿದೆ. ಈ ಭದ್ರತಾ ವ್ಯವಸ್ಥೆಯ ಎಲ್ಲಾ ವೆಚ್ಚವನ್ನು ಕೈಗಾರಿಕೋದ್ಯಮಿ ಮುಖೇಶ್ ಅಂಬಾನಿ ಭರಿಸಲಿದ್ದಾರೆ ಎಂದೂ ನ್ಯಾಯಾಲಯ ಹೇಳಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬ್ರಾಹ್ಮಣ ವಧು ಬೇಕಾಗಿದ್ದಾರೆ
49 ವರ್ಷದ ಬೆಂಗಳೂರಿನಲ್ಲಿ MNC ಕಂಪನಿಯಲ್ಲಿ ಉದ್ಯೋಗದಲ್ಲಿರುವ ತಿಂಗಳಿಗೆ ಒಂದು ಲಕ್ಷ ವೇತನ ಪಡೆಯುತ್ತಿರುವ ವಿಚ್ಛೇದಿತ ಬ್ರಾಹ್ಮಣ ವರನಿಗೆ ಕಡುಬಡತನದ ಅನಾಥ ನಿರ್ಗತಿಕ ಯಾವುದೇ ಬ್ರಾಹ್ಮಣ ವಿಧವೆ ಅಥವಾ ವಿಚ್ಛೇದಿತ ವಧು ಬೇಕಾಗಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಮದುವೆಯ ಸಂಪೂರ್ಣ ಖರ್ಚು ವೆಚ್ಚಗಳನ್ನು ವರನ ಮನೆಯಿಂದಲೇ ಭರಿಸಲಾಗುತ್ತದೆ. ವಿಧವೆ ಹಾಗೂ ವಿಚ್ಛೇದಿತೆ ವಧು ಮಾತ್ರ ನೇರವಾಗಿ ಸಂಪರ್ಕಿಸತಕ್ಕದ್ದು.
6366125016

COMMERCIAL SPACE FOR RENT
Ground Floor (1400 Sq.ft) MIG 1st No.11, Dr.Rajkumar Road, Kalyangiri, Mysore. Contact No.:
9880364464

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರು, ಪಾರ್ಶವಾಯು ಪೀಡಿತರು, ಹಾಗೂ ಕೈಯಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ ವಸತಿಯೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297

WANTED
ಹೆಲ್ಪರ್ಸ್ ಹುಡುಗರು ಬೇಕಾಗಿದ್ದಾರೆ
99011 63200
97435 65907

30x40 E/F ಸೈಟು @ Rs. 23 ಲಕ್ಷ
MUDA Approved Layout
90% ಬ್ಯಾಂಕ್ ಲೋನ್ ಲಭ್ಯ, ಚಾಮುಂಡಿ ಬೆಟ್ಟದ ಹಿಂಭಾಗ. ಲಾಲ್ ಬಹುದ್ದೂರ್ ಶಾಸ್ತ್ರಿ ನಗರದ ನಂತರ,
9538583377

ಬೇಕಾಗಿದ್ದಾರೆ
ಬೋಗಾದಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹೌಸ್ ಕೀಪಿಂಗ್ ಸೂಪರ್ ವೈಸರ್ ಹಾಗೂ ಮಹಿಳಾ ಹೌಸ್ ಕೀಪಿಂಗ್ ಸಿಬ್ಬಂದಿ ಕೆಲಸಕ್ಕೆ ಬೇಕಾಗಿದ್ದಾರೆ. ದೂರವಾಣಿ ಸಂಖ್ಯೆ
9845131848
9538886328

ಉದ್ಯೋಗ ಅವಕಾಶ
ಒಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ಬೇಕಾಗಿದ್ದಾರೆ
ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. (ಮೈಸೂರಿನವರಿಗೆ ಆದ್ಯತೆ) ವಯೋಮಿತಿ 20–30 ವರ್ಷ
(O) 0821-2434507
(M) 9972016272

ಶ್ರೀ ಮೂರ್ತಿ ಟೂರಿಸ್ಟ್
12–3–23 ಭಾನುವಾರ – ಗೊರವನಹಳ್ಳಿ ಮಹಾಲಕ್ಷ್ಮಿ, ಎಡಿಯೂರು, ಹುಲ್ಲೂರು, ದೇವರಾಯನ ದುರ್ಗ ಪ್ರವಾಸ.
19–3–23 ಭಾನುವಾರ – ಊಟಿ (ಬಟಾನಿಕಲ್ ಗಾರ್ಡನ್, ಲೇಕ್ ಮಾರ್ಕೆಟ್). ಬೆಳಗಿನ ತಿಂಡಿ, ಕಾಫೀ, 1 ಊಟ ಸೇರಿದೆ. ಬೆಳಗ್ಗೆ 5.30ಕ್ಕೆ ಹೊರಟು ಅದೇ ರಾತ್ರಿ ವಾಪಸ್ ಬರುವುದು.
Mob: 94807 33069
Tickets at your doorstep.

ಹೊಸ ಮನೆ ಮಾರಾಟಕ್ಕಿದೆ
ಮೈಸೂರಿನ ಸಿದ್ದಿ ವಿನಾಯಕ ಬಡಾವಣೆ ಡಾ|| ರಾಜ್‌ಕುಮಾರ್ ರೋಡ್, ಜೆ.ಎಸ್.ಎಸ್ ಪಬ್ಲಿಕ್ ಸ್ಕೂಲ್ ಹಿಂಭಾಗ, 1560 ಅಡಿ ಅಳತೆಯ ನಿವೇಶನದಲ್ಲಿ ನೂತನವಾಗಿ ಕಟ್ಟಿರುವ ನೆಲ ಅಂತಸ್ತು (2BHK) ಹಾಗೂ ಮೊದಲ (2BHK) ಅಂತಸ್ತಿನ ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ. ಶಿವಕುಮಾರ್.ಎಂ.ಎಸ್
9448275540 / 9449823540

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಹುದ್ದೆ :- ಸೇಲ್ಸ್ ಎಕ್ಸಿಕ್ಯೂಟಿವ್ ಮೆಕ್ಯಾನಿಕ್ / ಫ್ರಂಟ್ ಆಫೀಸ್ ನಂಜನಗೂಡು, ಹೆಚ್.ಡಿ.ಕೋಟೆ ಅನುಭವವುಳ್ಳವರು ಮತ್ತು ಫ್ರೆಶರ್ಸ್‌ಗಳು ಅನ್ವಯಿಸಬಹುದು.
ಭಗತ್ ಟ್ರಾಕ್ಟರ್ಸ್, ನಂಜನಗೂಡು
ಮೊ: 9844686609

HOUSE FOR SALE
30X40 HOUSE IN RAJARAJESHWARI NAGAR EAST FACING FOR SALE
CONTACT
9916283454 | 9900388667

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಸೋಲಾರ್ ವಾಟರ್ ಹೀಟರ್ Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ.
ಡಾ. ಗುರೂಜಿ
9448229184, 7899625268

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡ್ಡಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

WANTED
FEMALE ACCOUNTANT
B.com (Fresher) Taly Must & Should
FLEX MACHINE OPERATOR
4 Years Exp. in field
SIGN BOARD MAKER
5 Years Exp. in field
HELPER
8105406141
7338336464

ಬೇಕಾಗಿದ್ದಾರೆ
ಎಲ್.ಇ.ಡಿ. ವ್ಯಾನ್ ನಲ್ಲಿ ಕರ್ನಾಟಕದಾದ್ಯಂತ ಸಂಚರಿಸಲು 40 ಪುರುಷ ಅಭ್ಯರ್ಥಿಗಳು / ಪ್ರವರ್ತಕರು ಬೇಕಾಗಿದ್ದಾರೆ
ಸಂಬಳ: ವಸತಿ ಸಹಿತ ತಿಂಗಳಿಗೆ 14,000/– ಪ್ರತಿದಿನ ರೂ. 200/– ಆಹಾರಕ್ಕೆ
ಆಸಕ್ತ ಅಭ್ಯರ್ಥಿಗಳು ಸಂಪರ್ಕಿಸಿ
72045 03775

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

S.K. Constructions
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Loan ಸಹಿತ ಹೊಸ ಮನೆ ಕಟ್ಟಿಕೊಡುತ್ತೇವೆ. Plan, 3D Elevation ಉಚಿತವಾಗಿ ಮಾಡಿಕೊಡುತ್ತೇವೆ.
Mob: 9620528490

GAS PIPELINE
(New or Old Houses)
Mob: 9686594241, 9019094163
www.gaspipelinemysore.com

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

HOUSE FOR LEASE
3 BHK house for lease with car parking in 40x60 dimension in K.C. Layout.
Mob: 9008123567

SITE FOR SALE
40x60 East facing 40 feet Road, Vijayanagar 4th Stage, 2nd Phase, near Marimallappa School.
Mob: 9845809369

CHANGE OF NAME
I, Hemalatha Melkote Ramashastry, R/a No. 1262, 2nd Cross, 1st Main, Krishnamurthypuram, Mysore-570 004, have changed my name from Hemalatha Melkote Ramashetty to Hemalatha Melkote Ramashastry in front of Notary A.M. Sumithra vide affidavit dtd. 27-2-2023 at Mysuru.
Sd/- Hemalatha Melkote Ramashastry

JOB VACANCY
COUNSELLOR,
Fresher, female, Graduate preferred. Communication skills, English, Kannada.
CADDCENTRE
V.V. Mohalla, Gokulam Road, Mysore-570 002
0821-4006323, 9880908444

ಬೇಕಾಗಿದ್ದಾರೆ
DATA Operator + D.T.P. Operator + Photoshop Designer. Male - Female (Mysore City). ಸಂಪರ್ಕಿಸಿ: ಹೇಮಂತ್ ಪ್ರಸಾದ್.
9591036371

ಬೇಕಾಗಿದ್ದಾರೆ
(Consultancy ಅಲ್ಲ) ಮೈಸೂರಿನಲ್ಲಿರುವ A.W.G ಕಂಪನಿಗೆ SSLC (Pass), PUC, ITI, JOC, Any Degree ಆದಂತಹ 197 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ:– 18 ರಿಂದ 28 ವರ್ಷಗಳು, ತಿಂಗಳಿಗೆ :– 20,000 – 27,000 ಗಳಿಸಬಹುದು. (ಉಚಿತ ವಸತಿ) Freshers ಮೊದಲ ಆದ್ಯತೆ. ನವ್ಯಶ್ರೀ
9844219943 / 7349699460

ತಕ್ಷಣ ಬೇಕಾಗಿದ್ದಾರೆ
RBI ಮೇಟಗಳ್ಳಿ ಮತ್ತು ಹೆಬ್ಬಾಳು ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸಂಬಳ: 15,500/– (8Hours, 26 days), ವಿದ್ಯಾರ್ಹತೆ: SSLC ಮೇಲ್ಪಟ್ಟು, ವಯೋಮಿತಿ : 45 ವರ್ಷದೊಳಗೆ. ESI, PF ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9620667819

HOME LOAN / MORTGAGE LOANS
House, Site, Commercial site and Buildings School - Colleges and Educational Trusts and Function Hall Loans. MUDA, KHB, Nagarasabhe, Purasabhe Katha and 9 & 11a, 11B Revenue Property and Ext. Loan Services. Unnathi Financial Services. Raghavendra :
9986977667

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಮತ್ತು ಹೆಬ್ಬಾಳ್ ಏರಿಯಾದಲ್ಲಿ ಕಂಪ್ಯೂಟರ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್ ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ:Supervisor 18,500+W/o (8hrs), ಗಾರ್ಡ್: 17,000+W/o (8hrs), ಸಂಪರ್ಕಿಸಬೇಕಾದ ಸಂಖ್ಯೆಗಳು:
9880727819 / 9620667819

ಸುವರ್ಣಯಾತ್ರ
ಕಾಶಿ ಪ್ರವಾಸ 2, ಜ್ಯೋತಿರ್ಲಿಂಗ ಪ್ರವಾಸ ಸೇರಿ 7 ದಿನಗಳು 25/03/2023. ಪುರಿ ಜಗನ್ನಾಥ ಪ್ರವಾಸ, ಶಕ್ತಿ ಪೀಠ, ಇತರೆ 4 ದಿನಗಳು 25/03/2023 ಗುಜರಾತ್ ಪ್ರವಾಸ ಸೋಮನಾಥ್. ನಾಗೇಶ್ವರ ಇತರೆ 8 ದಿನಗಳು 06/04/2023
9019462508 / 9008381022

MYTHRI TRAVELS
24/03/23, 3 ಜ್ಯೋತಿರ್ಲಿಂಗ ಸಹಿತ ಶಿರಡಿ ಯಾತ್ರೆ. 4 ದಿನಗಳು ಶನಿಸಿಂಗಪುರ, ಎಲ್ಲೋರ, ಗೃಷ್ಣೇಶ್ವರ ಜ್ಯೋತಿರ್ಲಿಂಗ, ಶಿರಡಿ, ನಾಸಿಕ್, ತ್ರಯಂಬಕೇಶ್ವರ ಜ್ಯೋತಿರ್ಲಿಂಗ, ಭೀಮಾಶಂಕರ ಜ್ಯೋತಿರ್ಲಿಂಗ
9482421499 / 8660756131

AGRICULTURE LAND FOR SALE / LEASE
From Nanjangud 12 km, Highway - Ooty Road with all Facilities. Contact:
9739096168

ತಕ್ಷಣ ಬೇಕಾಗಿದ್ದಾರೆ
ನಂಜನಗೂಡು, ಕಡಕೊಳ ಏರಿಯಾದ ಟಿವಿಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸಂಬಳ: 15,600/– (8Hours, 26 days), ವಯೋಮಿತಿ 45 ವರ್ಷದೊಳಗೆ, ವಿದ್ಯಾರ್ಹತೆ: SSLC ಮೇಲ್ಪಟ್ಟು, ESI, PF ಮತ್ತು ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9538567819 / 9620777819

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40ರವರೆಗೆ ವಿದ್ಯಾರ್ಹತೆ– ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ :– 12,818, ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು : ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ:
8453408502 / 9035269781

ಗುತ್ತಿಗೆಗೆ / ಕೃಷಿ ಕಾರ್ಮಿಕರು ಬೇಕಾಗಿದ್ದಾರೆ
ತೋಟವನ್ನು ನೋಡಿಕೊಳ್ಳಲು ಕೃಷಿ ಕಾರ್ಮಿಕರು ಬೇಕಾಗಿದ್ದಾರೆ. ಕೃಷಿ ಅನುಭವವಿರಬೇಕು ಹಾಗೂ ಗುತ್ತಿಗೆಗೆ ನೀಡಲಾಗುವುದು. ಬೋರ್ ವೆಲ್ ನೀರಿನ ಸೌಲಭ್ಯ, ಮನೆ, ಜಮೀನಿನ ಸುತ್ತ ಬೇಲಿ ಮತ್ತು ಗೇಟ್ ಹಾಕಲಾಗಿದೆ. (ಬಿಳಿಕೆರೆ ಹತ್ತಿರ ಕುಪ್ಪೆ ಗ್ರಾಮ).
Mob: 9972837203

ಬೇಕಾಗಿದ್ದಾರೆ
ಸಲೂನ್ ಮೆನ್ಸ್ ಪಾರ್ಲರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಸಂಬಳ: 15000 ದಿಂದ 25000 ವಿಳಾಸ; ಸಾತಗಳ್ಳಿ, ಮೈಸೂರು ಸಂಪರ್ಕಿಸಿ: ಶಿವು
9844341652, 9880467652

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed. ವಿವಾಹ ನೋಂದಣಿಗೆ ಕರೆ ಮಾಡಿ (2nd Marriage also)
9164743059

ತಕ್ಷಣವೇ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳು ಪ್ರದೇಶದ ಕಂಪನಿಗಳಿಗೆ ಸೆಕ್ಯೂರಿಟಿ ಗಾರ್ಡುಗಳು, ಡ್ರೈವರ್‌ಗಳು, ಹೆಲ್ಪರ್‌ಗಳು, ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು ಬೇಕಾಗಿದ್ದಾರೆ. ಸಂಪರ್ಕಿಸಿ:
7795285485, 8105249880

FOR SALE
1) 30x40 - 13 Lakhs, sites in Defence Apartment, near Kote Road.
2) 30x40 - 12 Lakhs Elwala.
3) Bannur Road commercial 50x80.
4) 17x60 - 3 BHK Kamakshi Hospital, Near Saraswathipuram.
5) 30x40 Duplex house, Srirampura.
6) 40x60, N/E Corner Aravind Nagar.
9035990359, 9538690359

ಬೇಕಾಗಿದ್ದಾರೆ
ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 12000-15000/-
Ph.9380142144
ಶಿವರಾಂಪೇಟೆ, ಮೈಸೂರು

ಟೆಲಿಕಾಮ್ ಲೇಔಟ್ 30x40 ಸೈಟು N/F @ Rs. 25 ಲಕ್ಷ
ತಕ್ಷಣ ಮನೆ ಕಟ್ಟಬಹುದು, ಬ್ಯಾಂಕ್ ಲೋನ್ ಲಭ್ಯ, ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರೋಡ್, ಮೈಸೂರು
9538583377

SITES AVAILABLE

20 x 30	26.20 within Ring Road
30 X 40	E/F - 18 Lakhs, Hunsur Road
40 X 60	N/F - 36 Lakhs, Hunsur Road
40 X 60	N/F - 48 Lakhs, Shanthaveri Gopal Gowda Nagar

98800 65122 / 77956 09173

ಸೈಟು ಮಾರಾಟಕ್ಕಿದೆ ಮೂಡ ಅಪ್ರೂವ್ಡ್
30x40 - N/F, 30x40 - W/F
40x60 - W/F, 40x60 - N/F
30x60 - N/E/F Corner
58x60 - N/E/F Corner ರಿಂಗ್ ರೋಡ್ ಹತ್ತಿರ ಯುನಿವರ್ಸಿಟಿ ಬಡಾವಣೆ ಎದುರು, 30x50 - E/F ವರಕೋಡ್ ಹತ್ತಿರ
40x60 - W/F ವರಕೋಡ್ ಹತ್ತಿರ
9900372792

COMMERCIAL (100X30) 80 FEET ROAD
@ Bramin's Layout MUDA Approved (Near Srirampura Ring Road) 60 Lakhs
9538839926

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೊರಿಯರ್ ಸೌಲಭ್ಯವಿದೆ)
87490 98879

ಸೈಟು ಮಾರಾಟಕ್ಕಿವೆ
ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
8050345574

ಬೇಕಾಗಿದ್ದಾರೆ
ನಜರ್‌ಬಾದ್‌ನಲ್ಲಿರುವ ಸಂಭ್ರಮ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ವಾಚ್‌ಮನ್ ಹಾಗೂ ಕ್ಲೀನರ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
7411164808
9945108109

ಯುವಕರು ಬೇಕಾಗಿದ್ದಾರೆ
ಮೈಸೂರಿನ ಟ್ರಾನ್ಸ್‌ಪೋರ್ಟ್ ಆಫೀಸಿನಲ್ಲಿ ಪಾರ್ಟ್ ಟೈಮ್ ಕೆಲಸಕ್ಕೆ ಎಸ್.ಎಸ್.ಎಲ್.ಸಿ. ಓದಿರುವ ಯುವಕರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ:
9945694237
0821-2428722

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
#2921/A, ಸರಸ್ವತಿಪುರಂ, ಮೈಸೂರು
ನಾವು ರೆವಿನ್ಯೂ ಮನೆಗಳಿಗೆ ಮಾರ್ಟ್‌ಗೇಜ್ ಲೋನ್ ಮಾಡಿಕೊಡುತ್ತೇವೆ. ಈ ಕೆಳಗಿನ ಸ್ಥಳಗಳಿಗೆ, ರಾಘವೇಂದ್ರ ನಗರ, ಕನಕಗಿರಿ, ಜನತನಗರ, ಲೋಕನಾಯಕ ನಗರ, ಗಣೇಶನಗರ, ಮಹದೇವಪುರ. Loan Amount 5,00,000 to 20,00,000.
8088647887

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary : 13,000 - 21,000 + ESI, PF ವಿದ್ಯಾರ್ಹತೆ - 10th, PUC, ITI, Diploma and Any Degree. ಇಂದೇ ಸಂಪರ್ಕಿಸಿ:
9035734821

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 30 ವರ್ಷ, ವಿದ್ಯಾರ್ಹತೆ: 7 ರಿಂದ PUC, ITI, Fitter ಮತ್ತು Diploma in Mach., ರಿಯಾಯಿತಿ ದರದಲ್ಲಿ ಊಟ ಮತ್ತು ರೂಂಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:
9035381989

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಆಸ್ಪತ್ರೆ, ವೇರ್‌ಹೌಸ್, ಫಾರ್ಮ್ ಹೌಸ್‌ಗಳಿಗೆ ಸೆಕ್ಯೂರಿಟಿ ಗಾರ್ಡ್ಸ್, ಹೌಸ್ ಕೀಪಿಂಗ್ ಮಹಿಳೆಯರು ಮತ್ತು ವಾರ್ಡ್ ಬಾಯ್ ಕೆಲಸಕ್ಕೆ ಪುರುಷರು ಹೋಟೆಲ್‌ಗೆ ರೂಂ ಬಾಯ್ಸ್, ಆಸ್ಪತ್ರೆಯ ರೋಗಿಗಳನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ. (ಊಟ ಮತ್ತು ವಸತಿ ಉಚಿತ) (ESI+PF ಉತ್ತಮ ಸಂಬಳ) ಯಾವುದೇ ಶುಲ್ಕ ಇಲ್ಲ. ಸಂಪರ್ಕಿಸಿ:
8884286123 / 8884286321
8884339446

ತಕ್ಷಣ ಬೇಕಾಗಿದ್ದಾರೆ
ಮಹಿಳಾ House Keeping ಸಿಬ್ಬಂದಿ – 04 No's ಆಕರ್ಷಕ ಸಂಬಳ ಸಾಯಿ ಗುರುಕುಲ ಫ್ರೀ ಸ್ಕೂಲ್, ಹೆಬ್ಬಾಳ್. Contact:
7373969663

WANTED
* ಸೆಕ್ಯೂರಿಟಿ ಗಾರ್ಡ್‌ಗಳು Salary 12 ರಿಂದ 15 ಸಾವಿರ
* Experienced Field Officer Salary - 20,000/-
* ಹೌಸ್ ಕೀಪಿಂಗ್ (Female) (J.P.Nagar).
9901453272 / 9945291877

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಕೆಮಿಕಲ್ ಫ್ರೀ ಬೆಲ್ಲದ ತಯಾರಿಕಾ ಘಟಕ ಉದ್ಘಾಟನೆ



ಮಂಡ್ಯ, ಮಾ.1– ಪ್ರಾಯೋಗಿಕವಾಗಿ ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯಡಿ (ಆರ್ಗ್ಯಾನಿಕ್) ಕೆಮಿಕಲ್ ಫ್ರೀ ಬೆಲ್ಲವನ್ನು ತಯಾರು ಮಾಡುವ ಘಟಕವನ್ನು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎಸ್. ವಿ. ಸುರೇಶ್ ವಿ.ಸಿ ಫಾರಂನಲ್ಲಿ ಉದ್ಘಾಟಿಸಿದರು.

ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು, ವಲಯ ಕೃಷಿ ಸಂಶೋಧನ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರ, ಕೃಷಿ ಮಹಾವಿದ್ಯಾನಿಲಯ, ವಿ.ಸಿ.ಫಾರಂ, ಮಂಡ್ಯ ತಾಲೂಕು ಹಾಗೂ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಬೆಂಗಳೂರು, ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆದ ಕೃಷಿ ಯಂತ್ರೋಪಕರಣಗಳ ಮೇಳ 2023 ಹಾಗೂ ಜಾಗರಿ ಪಾರ್ಕ್‌ನ ಇನ್ಕ್ಯುಬೇಷನ್ ಕೇಂದ್ರದ ಪ್ರಾರಂಭೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಖಾಸಗಿಯವರ ಸಹಭಾಗಿತ್ವದಲ್ಲಿ ರಾಸಾಯನಿಕ ಮುಕ್ತ ಬೆಲ್ಲದ ಉತ್ಪಾದನೆಯನ್ನು ಮಾಡಲಾಗುವುದು. ಇದಕ್ಕಾಗಿ ಸುತ್ತಮುತ್ತಲಿನ ರೈತರು ಮತ್ತು ವಿ.ಸಿ ಫಾರಂ ಅವರು ಉತ್ತಮ ಗುಣಮಟ್ಟದ ಕಬ್ಬು ಉತ್ಪನ್ನ ಮಾಡಿ ನೀಡಬೇಕು. ರಾಸಾಯನಿಕ ಮುಕ್ತ ಬೆಲ್ಲವನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಬೇಕೆಂದು ಕೃಷಿ ವಿಶ್ವವಿದ್ಯಾನಿಲಯದ ಅಭಿಲಾಷೆಯಾಗಿದೆ.

ಈ ಘಟಕ ಉತ್ತಮವಾದ ಕೆಲಸ ನಿರ್ವಹಿಸಿ ರೈತ ಸಮುದಾಯಕ್ಕೆ ಕಬ್ಬು ಬೆಳೆಗಾರರಿಗೆ ವರದಾನವಾಗಲಿ ಎಂದರು. ಕೃಷಿ ಯಂತ್ರೋಪಕರಣಗಳ ಬಹಳ ಉಪಯುಕ್ತತೆಯನ್ನು ಪಡೆದಿದ್ದು ರೈತ ಬಾಂಧವರಿಗೆ ಕೃಷಿಯಲ್ಲಿ ಹಾಗೂ ಬೆಳೆದ ಫಸಲನ್ನು ನಂತರದ ದಿನಗಳಲ್ಲಿ ಕುಯ್ಯುವ ತಂತ್ರಜ್ಞಾನಕ್ಕೆ ಬೇಕಾಗುವಂತಹ ಸಾಕಷ್ಟು ಯಂತ್ರೋಪಕರಣಗಳ ಮಾಹಿತಿ ಕಾರ್ಯಕ್ರಮದಲ್ಲಿ ಲಭ್ಯವಿದೆ. ರೈತರು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಯಂತ್ರೋಪಕರಣಗಳು ಇಲ್ಲದಿದ್ದರೆ ಕೃಷಿ ಮಾಡುವುದು ತುಂಬಾ ಕಠಿಣದ ಪರಿಸ್ಥಿತಿ ಇಂದಿನ ದಿನಗಳಲ್ಲಿ ಕಂಡು ಬರುತ್ತಿದೆ. ಹೊಸ ತಂತ್ರಜ್ಞಾನ ಹಾಗೂ ಯಂತ್ರೋಪಕರಣಗಳ ಬಳಕೆಗೆ ಹೆಚ್ಚು ಒತ್ತು ನೀಡಬೇಕೆಂದು ಹೇಳಿದರು. ಯುವ ಸಮೂಹ ಪಟ್ಟಣಗಳತ್ತ ವಲಸೆ ಹೋಗುತ್ತಿರುವುದನ್ನು ತಡೆಯಬೇಕು. ಕೃಷಿ ಯಂತ್ರೋಪಕರಣಗಳಿಂದ ರೈತರಿಗೆ ಸಮಯದ ಉಳಿತಾಯ ಸಹ ಕೂಡ ಆಗುತ್ತದೆ ಎಂದರು. ಪ್ರಸ್ತುತದ ದಿನಗಳಲ್ಲಿ ಕೃಷಿ ರಂಗದಲ್ಲಿ ಆಗುವಂತಹ ಅನೇಕ ತೊಂದರೆಗಳ ಬಗ್ಗೆ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಸಂಶೋಧನೆ ನಡೆಸಲಾಗುತ್ತಿದೆ. ಕೃಷಿ ವಿಜ್ಞಾನ ಕೇಂದ್ರದಲ್ಲಿ ರೈತರಿಗೆ ನೆರವಾಗುವಂತೆ ಅನೇಕ ಮಾಹಿತಿಗಳನ್ನು ಕೃಷಿ ವಿವಿ ಮೂಲಕ ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಕೃಷಿ ವಿ.ವಿ ಸದಸ್ಯರುಗಳಾದ ಡಾ. ಪಿ.ಎಚ್ ರಾಮಾಂಜನಿಗೌಡ, ಡಾ. ಟಿ.ಎಂ ಅರವಿಂದ್. ಡಾ. ಓ.ಎಸ್ ದಯಾನಂದ, ಡಾ. ಆರ್ ಶ್ರೀರಾಮು, ಹಾಸನ ಜಿಲ್ಲೆಯ ಮಹಾವಿದ್ಯಾನಿಲಯದ ಡೀನ್ ಡಾ. ಎಸ್.ಎನ್ ವಾಸುದೇವನ್, ವಿಸಿ ಫಾರ್ಮ್‌ನ ಮಹಾವಿದ್ಯಾನಿಲಯದ ಡಾ.ಎಸ್.ಎಸ್ ಪ್ರಕಾಶ್, ವಲಯ ಕೃಷಿ ಸಂಶೋಧನ ಕೇಂದ್ರದ ನಿರ್ದೇಶಕ ಡಾ. ಶಿವಕುಮಾರ್, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಎನ್.ಟಿ ನರೇಶ್, ಕೃಷಿ ಯಂತ್ರೋಪಕರಣಗಳ ಪ್ರಯೋಜನ ಮುಖ್ಯಸ್ಥ ಡಾ. ಎಂ.ಎಸ್ ಶ್ರೀದೇವಿ, ಜಾಗರಿ ಪಾರ್ಕ್‌ನ ಮುಖ್ಯಸ್ಥ ಡಾ. ಕೆ.ವಿ ಕೇಶವಯ್ಯ, ಸಹ ವಿಸ್ತರಣಾ ನಿರ್ದೇಶಕ ಡಾ. ಡಿ ರಘುಪತಿ ಹಾಗೂ ಇನ್ನಿತರರಿದ್ದರು.

ಮಂಡ್ಯದಲ್ಲೂ ಸರ್ಕಾರಿ ನೌಕರರ ಮುಷ್ಕರ ವಾಪಸ್

ಮಧ್ಯಾಹ್ನದವರೆಗೂ ಕಚೇರಿಗೆ ಗೈರಾಗಿದ್ದ ನೌಕರರು



ಸರ್ಕಾರಿ ನೌಕರರ ಮುಷ್ಕರದಿಂದಾಗಿ ಬುಧವಾರ ಮಧ್ಯಾಹ್ನದವರೆಗೂ ತಾಲೂಕು ಕಚೇರಿ ಬಿಕೋ ಎನ್ನುತ್ತಿತ್ತು.

ಮಂಡ್ಯ, ಮಾ.1– ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸರ್ಕಾರಿ ನೌಕರರು ಕರೆ ನೀಡಿದ್ದ ಮುಷ್ಕರ ಮಂಡ್ಯ ನಗರ ಸೇರಿದಂತೆ ಜಿಲ್ಲೆಯಲ್ಲಿ ಮಧ್ಯಾಹ್ನದವರೆಗೂ ಯಶಸ್ವಿಯಾಗಿದ್ದು, ಸರ್ಕಾರ ಶೇ.17ರಷ್ಟು ವೇತನ ಹೆಚ್ಚಳ ಮಾಡಿ ಆದೇಶಿಸಿದ್ದರಿಂದ ಮುಷ್ಕರ ಹಿಂಪಡೆಯಲಾಯಿತು.

ಮಂಡ್ಯ ನಗರದಲ್ಲಿ ಮಿಮ್ಸ್ ಆಸ್ಪತ್ರೆ ಹೊರತುಪಡಿಸಿದರೆ ಉಳಿದೆಲ್ಲಾ ಸರ್ಕಾರಿ ಕಚೇರಿಗಳು, ಶಿಕ್ಷಣ ಸಂಸ್ಥೆಗಳು, ಇನ್ನಿತರೆ ಯಾವುದೇ ಇಲಾಖೆಯಲ್ಲಿ ಕೆಲಸ ನಡೆಯಲಿಲ್ಲ.

ಇಂದು ಬೆಳಗ್ಗೆ ಕೆಲ ಇಲಾಖೆಗಳಿಗೆ ಹೊರಗುತ್ತಿಗೆ ನೌಕರರು ಕೆಲಸಕ್ಕೆ ಹಾಜರಾದರೂ 10 ಗಂಟೆ ಬಳಿಕ ಮಂಡ್ಯ ನಗರದ ಜಿಲ್ಲಾಧಿಕಾರಿ ಕಚೇರಿ ಬಳಿಗೆ ಜಮಾವಣೆಗೊಂಡ ಸರ್ಕಾರಿ ನೌಕರರ ಸಂಘದವರು ಅಧ್ಯಕ್ಷ ಶಂಭುಗೌಡ ನೇತೃತ್ವದಲ್ಲಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ, ಬಳಿಕ ಬೈಕ್ ರ್‍ಯಾಲಿ ಹೊರಟರು. ಕೆಲ ಇಲಾಖೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸರ್ಕಾರಿ ನೌಕರರು ಹಾಗೂ ಹೊರಗುತ್ತಿಗೆ ನೌಕರರನ್ನು ಮನೆಗೆ ಕಳುಹಿಸುವ ಮೂಲಕ ಅಸಹಕಾರ ಚಳವಳಿ ಮಾಡಿದರು.

ಸದಾ ಗಿಜಿಗುಡುತ್ತಿದ್ದ ಮಂಡ್ಯ ನಗರದ ಸಬ್ ರಿಜಿಸ್ಟ್ರಾರ್ ಕಚೇರಿ ಜನರಿಲ್ಲದೇ ಬಿಕೋ ಎನ್ನುತ್ತಿತ್ತು. ಕೆಲ ಗ್ರಾಮೀಣ ಪ್ರದೇಶದ ಜನರು ಮುಷ್ಕರ ಗೊತ್ತಿಲ್ಲದೇ ಸಬ್‌ರಿಜಿಸ್ಟ್ರಾರ್ ಕಚೇರಿಗೆ ಆಗಮಿಸಿ, ವಿಧಿ ಇಲ್ಲದೇ ವಾಪಸ್ ಹೋಗುತ್ತಿದ್ದ ದೃಶ್ಯಗಳು ಕಂಡು ಬಂದವು. ಇನ್ನು ಮಂಡ್ಯ ನಗರಸಭೆಯೂ ಸಹ ಬಿಕೋ ಎನ್ನುತ್ತಿತ್ತು. ಕಚೇರಿ ತೆರೆದಿತ್ತಾದರೂ ಆಯುಕ್ತರು ಮತ್ತು ಸದಸ್ಯರು ಹೊರತುಪಡಿಸಿ ಉಳಿದೆಲ್ಲಾ ನೌಕರರು ಕೆಲಸಕ್ಕೆ ಗೈರು ಹಾಜರಾಗಿದ್ದರು.

ಇನ್ನು ಜಿಲ್ಲಾ ಪಂಚಾಯಿತ್ ಕಚೇರಿಯಲ್ಲೂ ಇದೇ ಕಥೆಯಾಗಿತ್ತು. ಸಿಇಓ ಸೇರಿದಂತೆ ಪ್ರಮುಖ ಅಧಿಕಾರಿಗಳು ಹೀಗೆ ಬಂದು ಹಾಗೆ ಹೋಗಿದ್ದು ಬಿಟ್ಟರೆ, ಇನ್ಯಾರು ಸಹ ಜಿಲ್ಲಾ ಪಂಚಾಯತ್ ಬಳಿಗೆ ಸುಳಿಯಲಿಲ್ಲ. ತಾಲೂಕು ಪಂಚಾಯತ್ ಕಚೇರಿಗೆ ಬೀಗವೇ ಜಡಿದಿತ್ತು. ಅದಲ್ಲದೇ ತಹಸೀಲ್ದಾರ್ ಹಾಗೂ ಎಸಿ ಕಚೇರಿಗಳಿಗೂ ಸಹ ಬೀಗ ಜಡಿಯಲಾಗಿತ್ತು.

ಸದಾ ವೈದ್ಯ ಹಾಗೂ ನರ್ಸಿಂಗ್ ವಿದ್ಯಾರ್ಥಿಗಳಿಂದ ಗಿಜಿಗುಡುತ್ತಿದ್ದ ಮಂಡ್ಯ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಲ್ಲದೇ ಬೃಹತ್ ಕಟ್ಟಡ ಬಿಕೋ ಎನ್ನುತ್ತಿದ್ದರೆ, ಮಂಡ್ಯ ವಿಶ್ವವಿದ್ಯಾನಿಲಯ, ಮಹಿಳಾ ಕಾಲೇಜು, ಐಟಿಐ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಅಧ್ಯಾಪಕರಿಲ್ಲದೇ ಕಾಲೇಜಿನ ಆವರಣದಲ್ಲಿ ಕುಳಿತರೆ, ಕೆಲ ವಿದ್ಯಾರ್ಥಿಗಳು ಮನೆ ಕಡೆಗೆ ಹೋಗುತ್ತಿದ್ದ ದೃಶ್ಯ ಕಂಡು ಬಂತು. ಸರ್ಕಾರಿ ಶಾಲೆಗಳಲ್ಲೂ ಸಹ ಇದೇ ಕಥೆಯಾಗಿತ್ತು.

ಚುನಾವಣೆ ಕೆಲ ದಿನಗಳು ಮಾತ್ರ ಇರುವುದರಿಂದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಾತ್ರ ಕೆಲ ಸಿಬ್ಬಂದಿಗಳು ಕೆಲಸಕ್ಕೆ ಹಾಜರಾಗಿದ್ದರೆ, ಜಿಲ್ಲಾಧಿಕಾರಿಗಳು ಎಂದಿನಂತೆ ಕಚೇರಿಗೆ ಬಂದು ಕಾರ್ಯನಿರ್ವಹಿಸುತ್ತಿದ್ದ ದೃಶ್ಯ ಕಂಡು ಬಂತು. ಇನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ವೈದ್ಯಕೀಯ ಸಿಬ್ಬಂದಿಗಳು ಕಪ್ಪು ಪಟ್ಟಿ ಧರಿಸಿ ಎಂದಿನಂತೆ ಕಾರ್ಯ ನಿರ್ವಹಿಸಿದರು. ತಾಲೂಕು ಕೇಂದ್ರಗಳಲ್ಲೂ ಇದೇ ರೀತಿ ಪರಿಸ್ಥಿತಿ ಇತ್ತು. ಒಟ್ಟಾರೆ ಮಂಡ್ಯ ಜಿಲ್ಲೆಯಲ್ಲಿ ಸರ್ಕಾರಿ ನೌಕರರ ಮುಷ್ಕರ ಯಶಸ್ವಿಯಾಯಿತು.

ಎತ್ತಿನಗಾಡಿಗೆ ಲಾರಿ ಡಿಕ್ಕಿ: ಎತ್ತು ಸಾವು, ರೈತನಿಗೆ ಗಾಯ

ಪಾಂಡವಪುರ, ಮಾ.1– ಸಿಮೆಂಟ್ ತುಂಬಿದ ಲಾರಿಯೊಂದು ಎತ್ತಿನಗಾಡಿಗೆ ಡಿಕ್ಕಿ ಹೊಡೆದ ಪರಣಾಮ ಒಂದು ಎತ್ತು ಮೃತಪಟ್ಟು ಮತ್ತೊಂದು ಎತ್ತು ಹಾಗೂ ಎತ್ತಿನಗಾಡಿ ಮಾಲೀಕ ಗಾಯಗೊಂಡಿರುವ ಘಟನೆ ತಾಲೂಕಿನ ಬನಘಟ್ಟ ಗ್ರಾಮದಲ್ಲಿ ಬುಧವಾರ ನಡೆದಿದೆ. ತಾಲೂಕಿನ ಬೇವುನಕುಪ್ಪೆ ಗ್ರಾಮದ ಕೃಷ್ಣೇಗೌಡ ಎಂಬುವರ ಪುತ್ರ ಪ್ರಜ್ವಲ್ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಕೃಷ್ಣೇಗೌಡರ ಪುತ್ರ ಪ್ರಜ್ವಲ್ ಬುಧವಾರ ಬೆಳಿಗ್ಗೆ ತಮ್ಮ ಜಮೀನಿಗೆ ಹೋಗಿ ಕಬ್ಬು ಸಾಗಾಣಿಕೆ ಮಾಡಿ ಮನೆಗೆ ವಾಪಸ್ಸಾಗುತ್ತಿದ್ದ ವೇಳೆ ನಾಗಮಂಗಲ ಕಡೆಯಿಂದ ವೇಗವಾಗಿ ಬಂದ ಸಿಮೆಂಟ್ ಲಾರಿ ಎತ್ತಿನಗಾಡಿಗೆ ಮುಖಾಮುಖಿ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ಒಂದು ಎತ್ತು ಸ್ಥಳದಲ್ಲಿಯೇ ಸಾವನ್ನಪಿದೆ. ಮತ್ತೊಂದು ಎತ್ತು ಗಂಭೀರವಾಗಿ ಗಾಯಗೊಂಡಿದೆ. ಎತ್ತಿನಗಾಡಿಯ ಮೇಲಿದ್ದ ಪ್ರಜ್ವಲ್‌ಗೂ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಶಾಸಕರು ಭೇಟಿ, ಪರಿಹಾರ: ವಿಷಯ ತಿಳಿದ ಶಾಸಕ ಸಿ.ಎಸ್.ಪುಟ್ಟರಾಜು, ಎತ್ತು ಸಾವನ್ನಪ್ಪಿರುವುದನ್ನು ಕಂಡು ವಿಷಾದ ವ್ಯಕ್ತಪಡಿಸಿ, ಎತ್ತಿನಗಾಡಿ ಮಾಲೀಕರಿಗೆ ಸಾಂತ್ವನ ಹೇಳಿ ವೈಯಕ್ತಿಕವಾಗಿ 50 ಸಾವಿರ ಪರಿಹಾರ ನೀಡಿದರು.

ಅಲ್ಲದೆ ಲಾರಿ ಮಾಲೀಕನಿಗೆ ದೂರವಾಣಿ ಕರೆ ಮಾಡಿ ಹಿಗ್ಗಾಮುಗ್ಗ ತರಾಟೆಗೆ ತೆಗೆದುಕೊಂಡರು. ಘಟನೆಯಿಂದ ಎತ್ತಿನಗಾಡಿ ನೆಚ್ಚಿಕೊಂಡು ಜೀವನ ನಡೆಸುತ್ತಿದ್ದ ರೈತನ ಸ್ಥಿತಿ ಬೀದಿಗೆ ಬಂದಿದೆ. ಮೊದಲು ಎತ್ತಿನಗಾಡಿ ಮಾಲೀಕನಿಗೆ 20ಲಕ್ಷ ಪರಿಹಾರ ಹಣ ನೀಡಬೇಕು ಎಂದು ತಾಕೀತು ಮಾಡಿದರು. ಲಾರಿ ಮಾಲೀಕ ರೈತರಿಗೆ ಪರಿಹಾರ ನೀಡುವರೆಗೂ ಲಾರಿ ಬಿಡಬೇಡಿ ಎಂದು ಪೊಲೀಸರಿಗೂ ತಾಕೀತು ಮಾಡಿದರು. ಇದೇ ವೇಳೆ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಮುಖಂಡ ಚೇತನ್ ತಿಮ್ಮೇಗೌಡ ಸೇರಿದಂತೆ ಹಲವರು ಇದ್ದರು. ಘಟನೆ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಹಿತ್ಯ ಸಮ್ಮೇಳನಾಧ್ಯಕ್ಷರಿಗೆ ಶಾಸಕ ತಮ್ಮಣ್ಣ ಆಹ್ವಾನ



ಮದ್ದೂರು, ಮಾ.1– ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಮಾ.2 ರಂದು ನಡೆಯುವ 9 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಗೊಂಡಿರುವ ಡಾ.ಬೆಳ್ಳೂರು ಸಿ ವೆಂಕಟಪ್ಪ ಅವರನ್ನು ಶಾಸಕ ಡಿ.ಸಿ.ತಮ್ಮಣ್ಣ ಸಮ್ಮೇಳನಕ್ಕೆ ಆಹ್ವಾನಿಸಿದರು.

ತಾಲೂಕಿನ ಕೊಕ್ಕರೆಬೆಳ್ಳೂರು ಗ್ರಾಮದ ಡಾ.ಬೆಳ್ಳೂರು ಸಿ.ವೆಂಕಟಪ್ಪ ಅವರ ನಿವಾಸಕ್ಕೆ ಭೇಟಿ ಕೊಟ್ಟು ಆಹ್ವಾನಿಸಿದ ನಂತರ ಮಾತನಾಡಿದ ಶಾಸಕ ಡಿ.ಸಿ.ತಮ್ಮಣ್ಣ, ಸಮ್ಮೇಳನಾಧ್ಯಕ್ಷರಾಗಿ ಡಾ.ಬೆಳ್ಳೂರು ಸಿ. ವೆಂಕಟಪ್ಪ ಅವರು ಆಯ್ಕೆಗೊಂಡಿರುವುದು ನಮ್ಮೆಲ್ಲರಿಗೂ ಸಂತಸದ ವಿಷಯವಾಗಿದ್ದು, ಸಮ್ಮೇಳನವನ್ನು ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಮೂಲಕ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಕಸಾಪ ತಾಲೂಕು ತಾಲೂಕು ಸಮ್ಮೇಳನ ಯಶಸ್ವಿಯಾಗಿ ನಡೆಸಲು ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದು, ಜಾನಪದ ಕಲಾತಂಡಗಳ ಮೆರವಣಿಗೆ, ಪುಸ್ತಕ ಮಳಿಗೆಗಳು, ಸಾಹಿತ್ಯಾಸ್ತಕರಿಗೆ ಊಟ, ಕವಿಗೋಷ್ಠಿ, ವಿಚಾರಗೋಷ್ಠಿ ಸೇರಿದಂತೆ ಇನ್ನಿತರರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಸಪಾ ಜಿಲ್ಲಾಧ್ಯಕ್ಷ ರವಿಕುಮಾರ್ ಚಾಮಲಾಪುರ ತಾಲೂಕು ಅಧ್ಯಕ್ಷ ವಿ.ಸಿ. ಉಮಾಶಂಕರ್, ಮುಖಂಡರಾದ ಮಾದನಾಯಕನಹಳ್ಳಿ ರಾಜಣ್ಣ, ಕೂಳಗೆರೆ ಶೇಖರ್, ಪುಟ್ಟಸ್ವಾಮಿ, ಕ್ರಾಂತಿ ಸಿಂಹ, ಸೋಂಪುರದ ಉಮೇಶ್, ಸಬ್ಬನಹಳ್ಳಿಕುಮಾರ್ ಇದ್ದರು.

ಅರ್ಜಿ ಆಹ್ವಾನ

ಮಂಡ್ಯ, ಮಾ.1– 2022–23ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯದ 6 ನೇ ತರಗತಿಗೆ 120 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ದಾಖಲಾತಿ ಮಾಡಿಕೊಳ್ಳಲು ಪ್ರವೇಶ ಪರೀಕ್ಷೆ ನಡೆಸುವ ಪ್ರಕ್ರಿಯೆ ಸಮಗ್ರ–ಶಿಕ್ಷಣ ಕರ್ನಾಟಕ ಹಾಗೂ ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತಿನ ವತಿಯಿಂದ ಜಂಟಿಯಾಗಿ ನಡೆಯಲಿದೆ. ಆಯಾ ತಾಲೂಕಿನ ಸರ್ಕಾರಿ, ಅನುದಾನಿತ ಮತ್ತು ಅನುದಾನಿತ ರಹಿತ ಶಾಲೆಗಳಲ್ಲಿ 5ನೇ ತರಗತಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಮಾ.4ರವರೆಗೆ www.schooleducation.kar.nic.in ಮತ್ತು www.vidyavahini.karnataka.gov.in ಆನ್‌ಲೈನ್ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಮ ದೇವತೆ ಶ್ರೀ ಹೋಣಿ ಮಾರಮ್ಮ ದೇವಸ್ಥಾನದ ಅನ್ನ ದಾಸೋಹ ಕಟ್ಟಡದ ಭೂಮಿ ಪೂಜೆ ನೆರವೇರಿಸಲಾಯಿತು.ಈ ಸಂದರ್ಭದಲ್ಲಿ ಭೂಮಿ ದಾನಿಗಳಾದ ಗುಂಡಪ್ಪನವರು, ಮಾದಣ್ಣ, ಚಂದ್ರಣ್ಣ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಕೃಷ್ಣಪ್ಪ ನಿಧನ



ಮದ್ದೂರು, ಮಾ.1– ತಾಲೂಕಿನ ಕೊಪ್ಪ ಹೋಬಳಿ ಕೊತ್ತನಹಳ್ಳಿ ಗ್ರಾಮದ ಕೆ.ಜಿ.ಕೃಷ್ಣಪ್ಪ (54) ಬುಧವಾರ ನಿಧನರಾದರು. ಮೃತರು ಪತ್ನಿ ಭಾಗ್ಯ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಗುರುವಾರ ಬೆಳಗ್ಗೆ 10 ಗಂಟೆಗೆ ಸ್ವಗ್ರಾಮದಲ್ಲಿ ಮೃತರ ಅಂತ್ಯಸಂಸ್ಕಾರ ನಡೆಯಲಿದೆ.

ಒಂದನೇ ಪುಟದಿಂದ

ವಿಜಯ ಸಂಕಲ್ಪ ಯಾತ್ರೆ ನೇತೃತ್ವ ನೀಡದ್ದಕ್ಕೆ ಕೆರಳಿದ ಸಚಿವ ಸೋಮಣ್ಣ

ಸೋಮಣ್ಣ ವರಿಷ್ಠರಿಗೆ ಸ್ಪಷ್ಟ ಸಂದೇಶ ನೀಡಿದ್ದಾರೆ. ಚಾಮರಾಜನಗರ ಜಿಲ್ಲೆಯ ಉಸ್ತುವಾರಿ ಸಚಿವರೂ ಆಗಿರುವ ವಸತಿ ಮತ್ತು ಮೂಲಸೌಕರ್ಯ ಖಾತೆ ಸಚಿವ ವಿ.ಸೋಮಣ್ಣ ಅವರಿಗೆ ಸಹಜವಾಗಿಯೇ ಮಲೆಮಹದೇಶ್ವರ ಬೆಟ್ಟದಿಂದ ಇಂದು ಆರಂಭವಾದ ವಿಜಯ ಸಂಕಲ್ಪ ರಥ ಯಾತ್ರೆಯ ನೇತೃತ್ವ ವಹಿಸಬೇಕಿತ್ತು.

ಜಿಲ್ಲಾ ಉಸ್ತುವಾರಿಯನ್ನು ಅತ್ಯುತ್ತಮವಾಗಿ ನಿರ್ವಹಿಸಿದ ಸಚಿವರೆಂದು ಪಕ್ಷದ ವರಿಷ್ಠರಿಂದಲೇ ಶಭಾಷ್‌ಗಿರಿ ಪಡೆದುಕೊಂಡಿದ್ದ ವಿ.ಸೋಮಣ್ಣ ಅವರಿಗೂ ವಿಜಯ ಸಂಕಲ್ಪ ಯಾತ್ರೆಯ ನೇತೃತ್ವವನ್ನು ತಮಗೆ ವಹಿಸಲಾಗುತ್ತದೆ ಎಂಬ ನಿರೀಕ್ಷೆ ಇತ್ತು.

ಆದರೆ ಮಲೆ ಮಹದೇಶ್ವರ ಬೆಟ್ಟದಿಂದ ಆರಂಭವಾಗುವ ಬಿಜೆಪಿಯ ವಿಜಯ ಸಂಕಲ್ಪ ರಥ ಯಾತ್ರೆಯ ನೇತೃತ್ವವನ್ನು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರಿಗೆ ವಹಿಸುವ ನಿರ್ಧಾರ ಪ್ರಕಟವಾಗಿದ್ದು, ಸೋಮಣ್ಣ ಅವರನ್ನು ಕೆರಳಿಸಿತು.

ಈ ಹಿನ್ನೆಲೆಯಲ್ಲಿಯೇ ಅವರು ಮಲೆ ಮಹದೇಶ್ವರ ಬೆಟ್ಟದಲ್ಲಿ ಬುಧವಾರ ನಿಗದಿಯಾದ ವಿಜಯ ಸಂಕಲ್ಪ ಯಾತ್ರೆಗೆ ಬರುವುದಿಲ್ಲ ಎಂದು ತಿರುಗೇಟು ನೀಡಿದರು. ಸೋಮಣ್ಣ ಅವರು ಕೈಗೊಂಡ ಈ ನಿರ್ಧಾರದಿಂದ ವಿಚಲಿತರಾದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಯಾತ್ರೆಗೆ ಬರುವಂತೆ ಒತ್ತಾಯಿಸಿದರಾದರೂ ಸೋಮಣ್ಣ ಅವರು ಬಿಲ್‌ಕುಲ್ ಒಪ್ಪಲಿಲ್ಲ.

ನಿಮ್ಮ ಬಗ್ಗೆ ನನಗೆ ಗೌರವವಿದೆ. ಆದರೆ ಸಚಿವ ಸಂಪುಟದ ಹಿರಿಯನಾದರೂ, ಜಿಲ್ಲಾ ಉಸ್ತುವಾರಿ ಸಚಿವನಾದರೂ, ಈಶ್ವರಪ್ಪ ಅವರ ನೇತೃತ್ವದಲ್ಲಿ ತಂಡ ರಚಿಸಿ, ಈ ತಂಡದೊಂದಿಗೆ ಹೋಗುವಂತೆ ನನಗೆ ಸೂಚಿಸಲಾಗಿದೆ. ಇದು ನನ್ನನ್ನು ಅಪಮಾನಿಸುವ ಕೆಲಸ. ಇದರ ಹಿಂದಿರುವ ಸೂತ್ರಧಾರರು ಯಾರು ಎಂಬುದು ನನಗೆ ಗೊತ್ತು.ನಿಮ್ಮ ಬಗ್ಗೆ ನನಗೆ ಅಪಾರ ಗೌರವವಿದೆ. ಆದರೆ ನನಗೆ ಆಗಿರುವ ಅಪಮಾನವನ್ನು ನೋಡಿಕೊಂಡು ವಿಜಯಸಂಕಲ್ಪ ಯಾತ್ರೆಯಲ್ಲಿ ಭಾಗವಹಿಸಲಾರೆ ಎಂದು ಸೋಮಣ್ಣ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ.

ಒಂದು ಹಂತದಲ್ಲಿ ನೋವಿನಿಂದ ಮಾತನಾಡಿದ ಸಚಿವ ಸೋಮಣ್ಣ ನನ್ನ ಈ ನಿಲುವಿಗಾಗಿ ನೀವು ನನ್ನನ್ನು ಸಚಿವ ಸಂಪುಟದಿಂದ ಕಿತ್ತು ಹಾಕಿದರೂ ಪರವಾಗಿಲ್ಲ.ಆದರೆ ಆಗಿರುವ ಅವಮಾನವನ್ನು ಸಹಿಸಿಕೊಂಡು ಸುಮ್ಮನಿರಲು ಸಾಧ್ಯವಿಲ್ಲ ಎಂದರೆನ್ನಲಾಗಿದೆ.

ಉನ್ನತ ಮೂಲಗಳ ಪ್ರಕಾರ, ಇದಾದ ನಂತರ ಸಂಘ ಪರಿವಾರದ ರಾಷ್ಟ್ರೀಯ ನಾಯಕರಾದ ಬಿ.ಎಲ್.ಸಂತೋಷ್ ಅವರೂ ಸಚಿವ ಸೋಮಣ್ಣ ಅವರನ್ನು ಸಮಾಧಾನಿಸುವ ಪ್ರಯತ್ನ ಮಾಡಿದ್ದಾರೆ.ಆದರೆ ಸೋಮಣ್ಣ ಅದಕ್ಕೂ ಬಗ್ಗಿಲ್ಲ.

ಇದಾದ ನಂತರ ವಿಜಯ ಸಂಕಲ್ಪ ಯಾತ್ರೆಯಲ್ಲಿ ಪಾಲ್ಗೊಳ್ಳಲು ಸಜ್ಜಾಗಿದ್ದ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರೂ ಸಚಿವ ಸೋಮಣ್ಣ ಅವರಿಗೆ ದೂರವಾಣಿ ಕರೆ ಮಾಡಿ, ಮಲೆಮಹದೇಶ್ವರ ಬೆಟ್ಟದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಹೇಳಿದ್ದಾರೆ. ಆದರೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಮಾತಿಗೂ ಒಪ್ಪದ ಸೋಮಣ್ಣ, ಇದು ನನ್ನನ್ನು ಉದ್ದೇಶಪೂರ್ವಕವಾಗಿ ಅವಮಾನಿಸುವ ಕೆಲಸ. ಹೀಗಾಗಿ ಯಾವ ಕಾರಣಕ್ಕೂ ಈ ಯಾತ್ರೆಯಲ್ಲಿ ನಾನು ಪಾಲ್ಗೊಳ್ಳಲಾರೆ ಎಂದು ಖಡಾಖಂಡಿತವಾಗಿ ಹೇಳಿದರೆನ್ನಲಾಗಿದೆ. ಹೀಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು, ಸಂಘ ಪರಿವಾರದ ಪ್ರಮುಖರು ಮತ್ತು ಮುಖ್ಯಮಂತ್ರಿಗಳು ತಮ್ಮ ಮನವೊಲಿಸಲೆತ್ನಿಸಿದರೂ ಸಮಾಧಾನಿತರಾಗದ ವಸತಿ ಸಚಿವ ವಿ.ಸೋಮಣ್ಣ ಬುಧವಾರ ತಮ್ಮ ಸ್ವಕ್ಷೇತ್ರ ಗೋವಿಂದರಾಜನಗರದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು.

ಉನ್ನತ ಮೂಲಗಳ ಪ್ರಕಾರ, ವಿ.ಸೋಮಣ್ಣ ಮತ್ತು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ನಡುವೆ ಹಲವು ಕಾಲದಿಂದ ಮುಸುಕಿನ ಗುದ್ದಾಟ ನಡೆಯುತ್ತಿದ್ದು, ಅದೀಗ ಬಹಿರಂಗವಾಗಿದೆ. ಸೋಮಣ್ಣ ಅವರು ಲಿಂಗಾಯತ ಸಮುದಾಯದ ಪ್ರಮುಖ ನಾಯಕರಾಗಿ ಬೆಳೆದು ನಿಂತಿದ್ದಲ್ಲದೆ, ಸಂಘ ಪರಿವಾರದ ಪ್ರಮುಖ ನಾಯಕ ಬಿ.ಎಲ್.ಸಂತೋಷ್ ಅವರ ಜತೆ ಗುರುತಿಸಿಕೊಂಡಿದ್ದು ಯಡಿಯೂರಪ್ಪ ಅವರ ಅಸಮಾಧಾನಕ್ಕೆ ಕಾರಣ ಎಂಬುದು ಮೂಲಗಳ ಹೇಳಿಕೆ.

ಇದೇ ಕಾರಣಕ್ಕಾಗಿ ತಾವು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ನೋಡಿಕೊಂಡಿದ್ದ ಸೋಮಣ್ಣ ಅವರನ್ನು ರಾತ್ರೋರಾತ್ರಿ ಮೈಸೂರು ಜಿಲ್ಲೆಯ ಉಸ್ತುವಾರಿಯಿಂದ ವಿಮುಕ್ತಿಗೊಳಿಸಿ, ಚಾಮರಾಜನಗರ ಜಿಲ್ಲೆಗೆ ಎತ್ತಂಗಡಿ ಮಾಡಿದ್ದರು. ಈ ಬೆಳವಣಿಗೆಯಿಂದ ನೊಂದರೂ ಬಹಿರಂಗವಾಗಿ ಏನನ್ನೂ ಹೇಳದ ವಿ.ಸೋಮಣ್ಣ ಅವರು, ಚಾಮರಾಜನಗರ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡಿದ್ದರು. ಆದರೆ ಇದೀಗ ತಾವು ಉಸ್ತುವಾರಿ ವಹಿಸಿಕೊಂಡ ಜಿಲ್ಲೆಯಲ್ಲೂ ತಮ್ಮನ್ನು ನಿರ್ಲಕ್ಷ್ಯ ಮಾಡಿ ವಿಜಯ ಸಂಕಲ್ಪ ರಥಯಾತ್ರೆ ಮಾಡುವ ನಿರ್ಧಾರ ಸೋಮಣ್ಣ ಅವರನ್ನು ಕೆರಳಿಸಿದೆ.

ಇದೇ ಮೂಲಗಳ ಪ್ರಕಾರ, ಪಕ್ಷದಲ್ಲಿ ಪುನಃ ಬಿ.ಎಸ್.ಯಡಿಯೂರಪ್ಪ ಅವರಿಗೆ ಆದ್ಯತೆ ನೀಡಲು ವರಿಷ್ಠರು ನಿರ್ಧರಿಸಿದ್ದು, ಪ್ರತಿಯೊಂದಕ್ಕೂ ಅವರ ಸಲಹೆಯನ್ನು ಪಡೆಯತೊಡಗಿದ್ದಾರೆ. ಪರಿಣಾಮವಾಗಿ ರಾಜ್ಯ ಬಿಜೆಪಿಯಲ್ಲಿ ಆದ್ಯತೆ ಪಡೆದಿರುವ ಯಡಿಯೂರಪ್ಪ ಅವರು, ಮಲೆಮಹದೇಶ್ವರ ಬೆಟ್ಟದ ರಥಯಾತ್ರೆಗೆ ಈಶ್ವರಪ್ಪ ನೇತೃತ್ವದ ತಂಡ ರಚನೆಯಾಗುವಂತೆ ನೋಡಿಕೊಂಡಿದ್ದಾರೆ. ಆ ಮೂಲಕ ತಮ್ಮನ್ನು ಅವಮಾನಿಸಿದ್ದಾರೆ ಎಂಬುದು ಸೋಮಣ್ಣ ಅವರ ನೋವು. ಅವರ ಈ ನೋವು ಇದೀಗ ಆಕ್ರೋಶವಾಗಿ ಪರಿವರ್ತನೆಯಾಗಿದ್ದು ಯಾತ್ರೆಗೆ ಬಹಿಷ್ಕಾರ ಹಾಕುವ ಹಂತಕ್ಕೆ ತಂದು ನಿಲ್ಲಿಸಿದೆ. ಈ ಬೆಳವಣಿಗೆ ರಾಜಕೀಯ ವಲಯಗಳಲ್ಲಿ ಸಂಚಲನ ಸೃಷ್ಟಿಯಾಗುವಂತೆ ಮಾಡಿದೆ.

ದಿಗ್ವಿಜಯ ಸಾಧನೆ

ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ನಡ್ಡಾಜಿ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ಮತ್ತೆ ಕಮಲ ಅರಳಲಿದೆ. ಬಹುಮತದೊಂದಿಗೆ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕಾಡಂಚಿನಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳ ಬಗ್ಗೆ ಸರ್ಕಾರದಿಂದ ವಿಶೇಷ ಗಮನ ನೀಡಲಾಗುವುದು. ನಿಮ್ಮ ಸ್ಥಿತಿ ನಮಗೆ ಅರಿವಾಗಿದೆ. ಜಮೀನಿನ ಹಕ್ಕು ನಿಮಗಿಲ್ಲ. ಇತರೆ ಸೌಲಭ್ಯಗಳಿಲ್ಲ. ಇದನ್ನು ಕಲ್ಪಿಸಲು ಅರಣ್ಯ ಹಕ್ಕು ಕಾಯ್ದೆ ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದರು. ಮಹದೇಶ್ವರ ಬೆಟ್ಟದ ಕಾಡಂಚಿನ ಗ್ರಾಮಗಳಿಗೆ ಆರೋಗ್ಯ ಸೌಲಭ್ಯಗಳು ಸಮರ್ಪಕವಾಗಿ ದೊರಕುತ್ತಿಲ್ಲ ಎಂಬುದು ಗೊತ್ತಾಗಿದೆ. ಆದ್ದರಿಂದ ಕಾಡಂಚಿನ ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗುವುದು. ಮಹಿಳೆಯರ ಅಭಿವೃದ್ಧಿಗಾಗಿ ಸ್ತ್ರೀ ಸಾಮರ್ಥ್ಯ ಯೋಜನೆ ಆರಂಭಿಸಲಾಗಿದೆ. ಗ್ರಾಮಗಳಲ್ಲಿರುವ ಎರಡು ಸ್ವಸಹಾಯ ಸಂಘಗಳಿಗೆ ತಲಾ ಐದು ಲಕ್ಷ ರೂ. ನೆರವು ನೀಡಲಾಗುವುದು. ಕಾಡಂಚಿನ ಗ್ರಾಮಗಳನ್ನು ವಿಶೇಷವಾಗಿ ಪರಿಗಣಿಸಿ, ಎಲ್ಲ ಸ್ವಸಹಾಯ ಸಂಘಗಳಿಗೂ ಐದು ಲಕ್ಷ ರೂ. ನೆರವು ನೀಡುತ್ತೇವೆ. ಇದಲ್ಲದೇ, ಸ್ತ್ರೀ ಶಕ್ತಿ ಸಂಘಗಳು ಮುಂದೆ ಬಂದರೆ ಕೌಶಲ್ಯ ತರಬೇತಿ ನೀಡಿ, ಸ್ಥಳೀಯ ಗುಡಿ ಕೈಗಾರಿಕೆ ಉತ್ಪನ್ನಗಳನ್ನು ತಯಾರಿಸಲು ಪ್ರೋತ್ಸಾಹ ನೀಡುತ್ತೇವೆ ಎಂದು ಬೊಮ್ಮಾಯಿ ಭರವಸೆ ನೀಡಿದರು. ಬೇಡಗಂಪಣ ಜನರನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲು ಹಿಂದುಳಿದ ವರ್ಗಗಳ ಆಯೋಗದಿಂದ ವರದಿ ಪಡೆಯಲಾಗುವುದು ಎಂದು ತಿಳಿಸಿದರು. ಈ ವೇಳೆ ಯಾತ್ರೆಯ ಸಂಚಾಲಕ ಡಾ.ಎ.ಆರ್. ಬಾಬು, ಕಾಡಾ ಅಧ್ಯಕ್ಷ ನಿಜಗುಣರಾಜು, ಜಿ.ಪಂ. ಮಾಜಿ ಅಧ್ಯಕ್ಷೆ ನಾಗಶ್ರೀಪ್ರತಾಪ್, ಪ್ರಧಾನ ಕಾರ್ಯದರ್ಶಿ ಮಂಗಲ ಶಿವಕುಮಾರ್, ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್, ಮಾಜಿ ಅಧ್ಯಕ್ಷ ಆರ್. ಸುಂದರ್, ಹನುಮಂತಶೆಟ್ಟಿ, ಪ್ರೀತನ್ ನಾಗಪ್ಪ, ದತ್ತೇಶ್ ಕುಮಾರ್, ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್‌ಗೆ ಅಂತಿಮ ಮೊಳೆ ಹೊಡೆಯುವ ಚುನಾವಣೆ ಇದು

ಕಂದಾಯ ಸಚಿವ ಆರ್.ಅಶೋಕ್ ಲೇವಡಿ



ಬೆಂಗಳೂರು, ಮಾ.1(ಕೆಎಂಶಿ)–ರಾಜ್ಯದಲ್ಲಿ ಕಾಂಗ್ರೆಸ್ ಇನ್ನು ಯಾವತ್ತೂ ತಲೆ ಎತ್ತದಂತೆ ಅಂತಿಮ ಮೊಳೆ ಹೊಡೆಯುವ ಚುನಾವಣೆ ಇದಾಗಲಿದೆ ಎಂದು ರಾಜ್ಯದ ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಂಪೇಗೌಡರು ಕಟ್ಟಿಸಿದ ಆವಟಿಯ ಚನ್ನಕೇಶವ ದೇವಾಲಯದಲ್ಲಿ ಇದೇ 3ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪೂಜೆ ಬಳಿಕ 4ನೇ ರಥ ಉದ್ಘಾಟನೆ ಆಗಲಿದೆ. ಬಳಿಕ ದೇವನಹಳ್ಳಿ ಶಾಲಾ ಮೈದಾನದಲ್ಲಿ 4ನೇ ರಥ ಉದ್ಘಾಟಿಸಲಿದ್ದಾರೆ. ಸಾರ್ವಜನಿಕ ಸಭೆ ಇದ್ದು, 30–40 ಸಾವಿರ ಜನರು ಸೇರುವ ನಿರೀಕ್ಷೆ ಇದೆ ಎಂದು ವಿವರ ನೀಡಿದರು.

ಡಬಲ್ ಎಂಜಿನ್ ಸರಕಾರ ಮರುಸ್ಥಾಪನೆಗೆ ಗೆಲ್ಲುವಂಥ ಹಲವಾರು ಸೂತ್ರಗಳನ್ನು ಪಕ್ಷ ಸಿದ್ಧಪಡಿಸಿದೆ. ಜನತೆಗೆ ಮುಟ್ಟಿರುವ ಕಾರ್ಯಕ್ರಮಗಳು ಜನರಿಗೆ ತಿಳಿಯಬೇಕೆಂದು ವಿಜಯ ಸಂಕಲ್ಪ ಯಾತ್ರೆ 4 ರಥಗಳ ಮೂಲಕ ನಡೆಯಲಿದೆ. ನನ್ನ ನೇತೃತ್ವದ ತಂಡವು 3ರಂದು ರ್‍ಯಾಲಿ ನಡೆಸಲಿದೆ. ಅಶ್ವತ್ಥನಾರಾಯಣ್, ಗೋಪಾಲಯ್ಯ, ಸೋಮಶೇಖರ್, ಡಾ. ಸುಧಾಕರ್, ಇನ್ನೂ ಹಲವಾರು ಎಂಎಲ್‌ಸಿಗಳು, ಲೋಕಸಭಾ ಸದಸ್ಯ ಪಿ.ಸಿ.ಮೋಹನ್, ಇವರೆಲ್ಲರೂ ನಮ್ಮ ತಂಡದಲ್ಲಿದ್ದಾರೆ ಎಂದು ತಿಳಿಸಿದರು.

ಕರ್ನಾಟಕದಲ್ಲಿ ನಮ್ಮ ತಂಡ 17 ಸಾರ್ವಜನಿಕ ಸಭೆಗಳನ್ನು ಮಾಡಲಿದೆ. 7 ಮೋರ್ಚಾಗಳ ಸಭೆಯೂ ನಡೆಯಲಿದೆ. ದಿನಾಂಕಗಳನ್ನು ನಿರ್ಧರಿಸಲಾಗಿದೆ. ಎಲ್ಲ ಕಡೆ ರೋಡ್ ಶೋ, ಸಾರ್ವಜನಿಕ ಸಭೆ ಇರುತ್ತದೆ. ಬೆಂಗಳೂರು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಭಾಗದಲ್ಲಿ ನಮ್ಮ ರಥದ ಮೂಲಕ ಸಂಚರಿಸುತ್ತೇವೆ ಎಂದು ಮಾಹಿತಿ ನೀಡಿದರು.

ಕೊನೆಯಲ್ಲಿ ದಾವಣಗೆರೆಯಲ್ಲಿ 25ರಂದು ನರೇಂದ್ರ ಮೋದಿಜಿ ಅವರು ರಥಗಳ ಸಂಚಾರದ ಸಮಾರೋಪ ನಡೆಯಲಿದೆ. ಬೃಹತ್ ರ್‍ಯಾಲಿ ಮೂಲಕ ಮೋದಿಜಿ ಅವರು ಪಾಂಚಜನ್ಯದ ಶಂಖನಾದ ಮಾಡಲಿದ್ದಾರೆ. ಒಂದು ವಾರದಿಂದ ತಯಾರಿ ನಡೆದಿದೆ. ದೇವನಹಳ್ಳಿಯಲ್ಲಿ ಇವತ್ತು ವೇದಿಕೆ ವೀಕ್ಷಿಸಲಿದ್ದೇನೆ ಎಂದರು.

ಕಳೆದ 3 ತಿಂಗಳಿನಿಂದ ನಡೆದ ಸರ್ವೆಗಳಲ್ಲಿ ಬಿಜೆಪಿ ಮೊದಲ ಸ್ಥಾನದಲ್ಲಿದೆ. ನಾವು ಬಹುಮತ ದಾಟಿ ಅತೀ ಹೆಚ್ಚು ಸ್ಥಾನಗಳೊಂದಿಗೆ ವಿಧಾನಸಭೆಯಲ್ಲಿ ಅಧಿಕಾರ ಪಡೆಯಲಿದ್ದೇವೆ ಎಂದು ತಿಳಿಸಿದರು. ಯಡಿಯೂರಪ್ಪ, ಜನಾರ್ದನ ರೆಡ್ಡಿಯವರು ಜೈಲಿಗೆ ಹೋಗಲು ಕಾಂಗ್ರೆಸ್ ಕಾರಣ ಎಂದು ಅವರು ಆರೋಪಿಸಿದರು.

ಹಳೆ ಮೈಸೂರು ಭಾಗದಲ್ಲಿ ಪಕ್ಷ ಹೆಚ್ಚಿನ ಸಂಖ್ಯೆಯ ಸ್ಥಾನಗಳನ್ನು ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ದಾವಣಗೆರೆಯಲ್ಲಿ ತಾಂಡಾದವರಿಗೆ ಹಕ್ಕುಪತ್ರ ವಿತರಿಸುವ ಕಾರ್ಯ ನಡೆಯಲಿದೆ ಎಂದು ವಿವರಿಸಿದರು.

ಕಾಂಗ್ರೆಸ್ ನಾಯಕತ್ವದ ಕೊರತೆಯಿಂದ ಬಳಲುತ್ತಿದೆ. ಅದು ಬಂಜರು ಭೂಮಿಯ ಪಕ್ಷ. ಮರಳುಗಾಡಿನ ಪಕ್ಷ ಅದು. ಅವರು ಒಯಸಿಸ್‌ಗೆ ಹುಡುಕಾಡುತ್ತಿದ್ದಾರೆ. ಕಾಂಗ್ರೆಸ್ ಇಲ್ಲಸಲ್ಲದ ಆರೋಪ ಮಾಡುತ್ತಿದೆ ಎಂದು ಟೀಕಿಸಿದ ಅವರು, 40 ನಾಯಕರು ವಿವಿಧೆಡೆ ನಮ್ಮ ರಥಯಾತ್ರೆಯಲ್ಲಿ ಭಾಗವಹಿಸುತ್ತಾರೆ ಎಂದು ತಿಳಿಸಿದರು.

ಇನ್ನು ಮುಂದಿನ ಬಿಜೆಪಿ ಸಭೆ, ಸಮಾರಂಭಗಳು ಅತೀ ಹೆಚ್ಚು ಶಾಸಕತ್ವದೊಂದಿಗೆ ಬಿಜೆಪಿ ಗೆಲುವಿಗೆ ಕಾರಣವಾಗಲಿದೆ. ಬಿಜೆಪಿ ಅಶ್ವಮೇಧ ಆರಂಭವಾಗಿದೆ. ರಾಜ್ಯದಾದ್ಯಂತ ಬಿಜೆಪಿ ಹವಾ ಇದೆ. ನಮ್ಮಲ್ಲಿ ಲೀಡರ್‌ಶಿಪ್ ಇದೆ. ಅವರಲ್ಲಿ (ಕಾಂಗ್ರೆಸ್) ಗುಂಪುಗಾರಿಕೆ ಇದೆ ಎಂದು ಆರೋಪಿಸಿದರು.

ನಾವು ಅಧಿಕಾರಕ್ಕೆ ಬಂದ ಮೇಲೆ 7ನೇ ವೇತನ ಆಯೋಗ ಶಿಫಾರಸುಗಳನ್ನು ಜಾರಿಗೆ ತರುತ್ತೇವೆ

ಬೆಳಗಾವಿ: ಬಿಜೆಪಿಯವರು ಮಾಡದಿದ್ದರೆ ನಾವು ಅಧಿಕಾರಕ್ಕೆ ಬಂದಾಗ 7ನೇ ವೇತನ ಆಯೋಗದ ವರದಿಯನ್ನು ಜಾರಿಗೆ ತರುತ್ತೇವೆ ಎಂದು ಕಾಂಗ್ರೆಸ್ ಘೋಷಿಸಿದೆ.

ಕಾಂಗ್ರೆಸ್ ನಾಯಕರ ಭರವಸೆ

7ನೇ ವೇತನ ಆಯೋಗದ ಮಧ್ಯಂತರ ಜಾರಿಗೆ ಆಗ್ರಹಿಸಿ ಇಂದು ಪ್ರತಿಭಟನೆ, ಸರ್ಕಾರ ಶೇಕಡಾ 17ರಷ್ಟು ವೇತನ ಹೆಚ್ಚಳ ಮಾಡುವುದಾಗಿ ಒಪ್ಪಿ ಅಧಿಕೃತ ಆದೇಶ ಹೊರಡಿಸಿರುವ ಮಧ್ಯೆ ಬೆಳಗಾವಿಯಲ್ಲಿಂದು ಮಾತನಾಡಿದ ವಿಪಕ್ಷ ನಾಯಕ ಸಿದ್ದರಾಮಯ್ಯ, ಒಂದು ವೇಳೆ ಬಿಜೆಪಿಯವರು ಮಾಡದೇ ಇದ್ದರೆ, ನಾವು ಅಧಿಕಾರಕ್ಕೆ ಬಂದು 7ನೇ ವೇತನ ಆಯೋಗ ವರದಿ ಜಾರಿ ಮಾಡುತ್ತೇವೆ ಎಂದು ಹೇಳಿದ್ದಾರೆ.

7ನೇ ವೇತನ ಆಯೋಗ ವರದಿ ಜಾರಿಗೆ ಆಗ್ರಹಿಸಿ ರಾಜ್ಯ ಸರ್ಕಾರಿ ನೌಕರರ ಮುಷ್ಕರ ವಿಚಾರವಾಗಿ ಮಾತನಾಡಿದ ಅವರು, ಬಿಜೆಪಿಯವರು ಸುಮ್ಮನೇ ದುಡ್ಡು ಇಟ್ಟಿದ್ದೀವಿ ಅಂತಾ ಹೇಳ್ತಾರೆ. ಎಲ್ಲಿ ದುಡ್ಡು ಇಟ್ಟಿದ್ದಾರೆ 7ನೇ ವೇತನ ಆಯೋಗ ವರದಿ ಜಾರಿಗೆ ಅಗತ್ಯ ಇರುವಷ್ಟು ದುಡ್ಡು ಇಟ್ಟಿಲ್ಲ. ಕೂಡಲೇ ಮಧ್ಯಂತರ ವರದಿ ಪಡೆದು 7ನೇ ವೇತನ ಆಯೋಗ ವರದಿ ಜಾರಿ ಮಾಡಬೇಕಿತ್ತು ಎಂದು ಸರ್ಕಾರದ ವಿರುದ್ಧ ಹರಿಹಾಯ್ದರು.

ಒಂದು ವೇಳೆ ಬಿಜೆಪಿಯವರು ಮಾಡದೇ ಹೋದರೆ, ನಾವು ಬಂದ್ಮೇಲೆ ಮಾಡ್ತೀವಿ. ಐದು ವರ್ಷಗಳ ಹಿಂದೆ ನೌಕರರಿಗೆ ಆರನೇ ವೇತನ ಆಯೋಗ ಜಾರಿ ಮಾಡಿದ್ದೇನೆ. 10,600 ಕೋಟಿ ಹೊರೆಯಾದರೂ ನಾನು ಮಾಡಿದ್ದೆ. 6ನೇ ವೇತನ ಆಯೋಗ ವರದಿ ಅನೌನ್ಸ್ ಮಾಡಿದ್ದೆ. ಎಲೆಕ್ಷನ್‌ಗೂ ಮುನ್ನ ಜಾರಿಗೆ ತಂದಿದ್ದೇನೆ. ರಾಜ್ಯ ಬಿಜೆಪಿ ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲ, ಸುಳ್ಳು ಹೇಳುತ್ತಾರೆ. ಸುಳ್ಳು ಹೇಳಿ ಮೂಗಿಗೆ ತುಪ್ಪ ಸವರೋದು ಇವರ ಕೆಲಸವಾಗಿದೆ ಎಂದು ಟೀಕಿಸಿದರು. ಶೇ.17 ವೇತನ ಹೆಚ್ಚಿಸಿ ಸರ್ಕಾರ ಆದೇಶ ಕುರಿತು ಮಾತನಾಡಿ, ಅವರು ಹೇಳೋದು ಬೇಡ. ಮಧ್ಯಂತರ ವರದಿ ಜನರ ಮುಂದೆ ಇಡಬೇಕು. ಹಳೆಯ ಪಿಂಚಣಿ ವ್ಯವಸ್ಥೆ ನಿನ್ನೆ ಮೊನ್ನೆಯದ್ದಲ್ಲ. ಅದರ ಬಗ್ಗೆ ಚರ್ಚೆ ಮಾಡಬೇಕು. ಹಳೆಯ ಪಿಂಚಣಿ ವ್ಯವಸ್ಥೆ ಬಗ್ಗೆ 7ನೇ ವೇತನ ಆಯೋಗದ ಅಧ್ಯಕ್ಷರು ಎಕ್ಸಾಮಿನ್ ಮಾಡಬೇಕು ಎಂದು ಹೇಳಿದರು.

ನಾವು ವರದಿ ಜಾರಿ ಮಾಡುತ್ತೇವೆ: ನಾವು ಸರ್ಕಾರಿ ನೌಕರರ ಪರವಾಗಿ ಇದ್ದೇವೆ. ಕಾಂಗ್ರೆಸ್ ಖಂಡಿತ ಅಧಿಕಾರಕ್ಕೆ ಬರುತ್ತೆ ಯಾರಿಗೂ ಅನುಮಾನ ಬೇಡ. ನಾವು ಅಧಿಕಾರಕ್ಕೆ ಬಂದ ಕೂಡಲೆ 7ನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿ ಮಾಡುತ್ತೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಏಳನೇ ವೇತನ ಆಯೋಗ ಜಾರಿ ಮಾಡಲು ನಮ್ಮ ಪಕ್ಷ ಬದ್ಧವಾಗಿದೆ. ಇದೊಂದು ಭ್ರಷ್ಟ ಸರ್ಕಾರ, ಎಲ್ಲ ಕಡೆಯೂ ಭ್ರಷ್ಟಾಚಾರ ಹೆಚ್ಚಾಗಿದೆ. ಹೋರಾಟ ನಿಮ್ಮ ಹಕ್ಕು, ನೌಕರರು ಕೇಳುತ್ತಿರುವುದು ಸರಿಯಾಗಿ ಇದೆ ಎಂದು ಹಾಸನದಲ್ಲಿ ಸುದ್ದಿಗಾರರ ಜೊತೆ ಮಾತನಾಡುತ್ತಾ ಹೇಳಿದರು.

ಮೋದಿ ಸಾವು ಯಾರೂ ಬಯಸಿಲ್ಲ; ಭಾವುಕ ಸನ್ನಿವೇಶ ಸೃಷ್ಟಿಯಷ್ಟೇ

ವಿಪಕ್ಷ ನಾಯಕ ಸಿದ್ದರಾಮಯ್ಯ ಪ್ರತಿಕ್ರಿಯೆ



ಬೆಳಗಾವಿ: ಮೋದಿ ಅವರ ಸಾವಿಗೆ ಕಾಂಗ್ರೆಸ್ ಜಪ ಮಾಡುತ್ತಿದೆ ಎಂಬುದು ದೊಡ್ಡ ಸುಳ್ಳು ಈ ರೀತಿ ಯಾರೂ ಎಲ್ಲಿಯೂ ಹೇಳಿಲ್ಲ. ತಮ್ಮಷ್ಟಕ್ಕೆ ತಾವೇ ಇಂಥ ಭಾವುಕ ಸನ್ನಿವೇಶ ಹುಟ್ಟು ಹಾಕುವುದು ಅವರಿಗೆ ಕರಗತ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

ಸಿದ್ದರಾಮಯ್ಯನನ್ನು ಮುಗಿಸಿ ಬಿಡಿ ಎಂದು ಅಶ್ವತ್ಥನಾರಾಯಣ ಬಹಿರಂಗವಾಗಿ ಹೇಳಿದರು. ನಮ್ಮ ಭಾವನೆಗಳು ಅವರಷ್ಟು ಕೆಟ್ಟದಾಗಿಲ್ಲ. ಪ್ರಧಾನಿ ಆರೋಗ್ಯವಾಗಿರಲಿ, ಹೆಚ್ಚು ಕಾಲ ಬದುಕಲಿ ಎಂದು ಅವರು ನಗರದಲ್ಲಿ ಬುಧವಾರ ಮಾಧ್ಯಮದವರ ಮುಂದೆ ಹೇಳಿದರು.

ಪಾಪ, ಯಡಿಯೂರಪ್ಪ ಸದನದಲ್ಲೇ ಕಣ್ಣೀರಿಟ್ಟರು. ಅವರು ಒಳಗೊಳಗೇ ಕುದಿಯುತ್ತಿದ್ದಾರೆ. ಬಿಜೆಪಿ ಸೋತು ಮನೆ ಸೇರಬೇಕು ಎಂದೇ ಬಯಸುತ್ತಿದ್ದಾರೆ ಎಂದೂ ಕುಟುಕಿದರು.

ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಪಂತಬಾಳೇಕುಂದ್ರಿಯಲ್ಲಿ 'ಪ್ರಜಾಧ್ವನಿ' ಯಾತ್ರೆಯಲ್ಲಿ ಮಾತನಾಡಿದ ಅವರು, ಬೆಳಗಾವಿ ಗ್ರಾಮೀಣ ಶಾಸಕಿ ಲಕ್ಷ್ಮೀ ಹೆಬ್ಬಾಳಕರ ಛತ್ರಪತಿ ಶಿವಾಜಿ ಮೂರ್ತಿ ಪ್ರತಿಷ್ಠಾಪಿಸಿದ್ದಾರೆ. ಅದರ ಉದ್ಘಾಟನೆಗೆ ಮುಖ್ಯಮಂತ್ರಿಯೇ ಹಟ ಹಿಡಿದಿದ್ದಾರೆ. ಬೊಮ್ಮಾಯಿ ಅವರಿಗೆ ನಾಚಿಕೆ ಆಗಬೇಕು ಎಂದು ಕಿಡಿಕಾರಿದರು. ಪ್ರಧಾನಿ ಕೊರೊನಾ ಬಂದಾಗ ರಾಜ್ಯಕ್ಕೆ ಬರಲಿಲ್ಲ, ಪ್ರವಾಹ ಬಂದಾಗ ಬರಲಿಲ್ಲ. ಈಗ ಚುನಾವಣೆ ಕಾಲಕ್ಕೆ ವಾರಕ್ಕೊಮ್ಮೆ ಬರುತ್ತಿದ್ದಾರೆ. ಬೆಳಗಾವಿಯಲ್ಲಿ ಬಾಡಿಗೆ ಜನರ ಕರೆತಂದು ರೋಡ್ ಶೋ ಮಾಡಿದರು. ಬೆಳಗಾವಿಗೆ ಏನು ಕೊಟ್ಟರು. ಕಳಸಾ ಬಂಡೂರಿ ಬಗ್ಗೆ ಏಕೆ ಮಾತಾಡಲಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಏಕೆ ಬಾಯಿಬಿಡಲಿಲ್ಲ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ನನ್ನ ಅಧಿಕಾರದ ವೇಳೆ ರೂ. 10,600 ಕೋಟಿ ಹೊರೆಯಾದರೂ ಆರನೇ ವೇತನ ಆಯೋಗ ಜಾರಿ ಮಾಡಿದೆ. ಮುಂದೆ ಕೂಡ ನಾನೇ ಏಳನೇ ವೇತನ ಆಯೋಗ ಜಾರಿ ಮಾಡುತ್ತೇನೆ ಎಂದೂ ಭರವಸೆ ನೀಡಿದರು. ಇದಕ್ಕೂ ಮುನ್ನ ಅವರು ಶಾಸಕಿ ಲಕ್ಷ್ಮೀ ಹೆಬ್ಬಾಳಕರ ಅವರೊಂದಿಗೆ ರೋಡ್ ಶೋ ಕೂಡ ನಡೆಸಿದರು.

ಚಾಮರಾಜನಗರ: ಹುಲ್ಲಿನ ಮೆದೆಗೆ ಬೆಂಕಿ

ಚಾಮರಾಜನಗರ, ಮಾ.1– ಹುಲ್ಲಿನ ಮೆದೆಗೆ ಆಕಸ್ಮಿಕವಾಗಿ ಬೆಂಕಿ ಬಿದ್ದು, ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿರುವ ಘಟನೆ ಚಾಮರಾಜನಗರ ತಾಲೂಕು ಹರವೆ ಹೋಬಳಿ ಮಲೆಯೂರು ಗ್ರಾಮದಲ್ಲಿ ನಡೆದಿದೆ. ಇಲ್ಲಿನ ಸರ್ವೆ ನಂ.294/2ರ ಜಮೀನಿನ ಶೇಖರಿಸಿದ್ದ ಹುಲ್ಲಿನ ಮೆದೆ ರೈತ ಪುಟ್ಟಸ್ವಾಮಿ ಎಂಬುವರಿಗೆ ಸೇರಿದ್ದು, ಫೆ.24 ರಂದು ಹುಲ್ಲಿನ ಮೆದೆಗೆ ಆಕಸ್ಮಿಕವಾಗಿ ಬೆಂಕಿ ಬಿದ್ದು, ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿದೆ.

ಕೊಡಗು ಜಿಲ್ಲೆಯಲ್ಲಿ ಸರ್ಕಾರಿ ಸೇವೆ ಸ್ತಬ್ಧ



ಭಣಗುಟ್ಟ ಜಿಲ್ಲಾಡಳಿತ ಭವನ, ಪರದಾಡಿದ ಸಾರ್ವಜನಿಕರು



ಮಡಿಕೇರಿ, ಮಾ.1– ವೇತನ ಭತ್ಯೆಗಳ ಪರಿಷ್ಕರಣೆಗೆ ಸಂಬಂಧಿಸಿದ 7ನೇ ವೇತನ ಆಂಯೋಗ ಜಾರಿಗೊಳಿಸಬೇಕೆನ್ನುವ ಪ್ರಮುಖ ಬೇಡಿಕೆ ಮುಂದಿಟ್ಟುಕೊಂಡು ರಾಜ್ಯ ಸರ್ಕಾರಿ ನೌಕರರು ಕೆಲಸಕ್ಕೆ ಗೈರು ಹಾಜರಾಗುವ ಮೂಲಕ ನಡೆಸಿದ ಮುಷ್ಕರಕ್ಕೆ ಕೊಡಗಿನ ಎಲ್ಲಾ ಸರ್ಕಾರಿ ಸಂಸ್ಥೆಗಳ ಕಾರ್ಯ ಚಟುವಟಿಕೆ ಸ್ತಬ್ಧಗೊಂಡು, ಒಟ್ಟು ಸರ್ಕಾರಿ ವ್ಯವಸ್ಥೆಕುಸಿದು ಬಿದ್ದ ಪರಿಸ್ಥಿತಿ ನಿರ್ಮಾಣವಾಗಿತ್ತು

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ನೀಡಿದ್ದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಸ್ಪಂದಿಸಿದ ಜಿಲ್ಲಾ ಸರ್ಕಾರಿ ನೌಕರರು ಬುಧವಾರ ತಮ್ಮ ಕೆಲಸ ಕಾರ್ಯಗಳಿಗೆ ಹಾಜರಾಗದೆ, ಸರ್ಕಾರಿ ಕಚೇರಿಗಳ ಕೆಲಸ ಕಾರ್ಯ ಸಂಪೂರ್ಣ ಸ್ಥಗಿತಗೊಂಡಿತ್ತು. ಇದರಿಂದ ಸರ್ಕಾರಿ ಯಂತ್ರದ ಹೃದಯವೇ ಆಗಿರುವ ಜಿಲ್ಲಾಡಳಿತ ಭವನದ ಎಲ್ಲಾ ಕಚೇರಿಗಳು ಭಣಗುಟ್ಟಿತ್ತು. ಅಲ್ಲಲ್ಲಿ ಕೆಲ ಹೊರಗುತ್ತಿಗೆ ನೌಕರರಷ್ಟೆ ಕಾರ್ಯ ನಿರ್ವಹಿಸುತ್ತಿದ್ದುದು ಕಂಡು ಬಂತು.

ಪೆನ್ನು ಕೆಳಗಿಟ್ಟ 5 ಸಾವಿರ ಮಂದಿ: ಕೊಡಗು ಜಿಲ್ಲಾ ವ್ಯಾಪ್ತಿಯ ವಿವಿಧ ಸರ್ಕಾರಿ ಕಚೇರಿಗಳು, ಗ್ರಾಮ ಪಂಚಾಯ್ತಿ ಪಟ್ಟಣ ಪಂಚಾಯ್ತಿ, ನಗರಸಭೆ ಸೇರಿದಂತೆ ಶಾಲಾ ಕಾಲೇಜುಗಳು ಇನ್ನಿತರ ಕಚೇರಿಗಳಲ್ಲಿ 5 ಸಾವಿರ ಮಂದಿ ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದು, ಇಂದು ಮುಷ್ಕರದ ಹಿನ್ನೆಲೆಯಲ್ಲಿ ಕಚೇರಿಗೆ ಗೌರು ಹಾಜಗುವ ಮೂಲಕ ಕಾರ್ಯ ಸ್ಥಗಿತಗೊಳಿಸಿದ್ದರು. ಜಿಲ್ಲಾ ಕೇಂದ್ರ ಮಡಿಕೇರಿಯ ಜಿಲ್ಲಾಡಳಿತ ಭವನ, ಜಿಲ್ಲಾ ಪಂಚಾಯ್ತಿ ಸೇರಿದಂತೆ ಎಲ್ಲಾ ಸರ್ಕಾರಿ ಕಚೇರಿಗಳು, ಸರ್ಕಾರಿ ಶಾಲೆಗಳು ಮುಚ್ಚಲ್ಪಟ್ಟಿದ್ದವು. ಮುಷ್ಕರದ ಅರಿವಿಲ್ಲದೆ ಸರ್ಕಾರಿ ಕಚೇರಿಗಳತ್ತ ಒಂದಷ್ಟು ಸಾರ್ವಜನಿಕರು ಆಗಮಿಸಿ ಹಿಂದಿರುಗುತ್ತಿದ್ದ ದೃಶ್ಯ ಗೋಚರಿಸಿತು.

ನೀರು ಸರಬರಾಜಿಗೆ ವಿನಾಯಿತಿ: ಮಡಿಕೇರಿ ನಗರಸಭೆ ಸೇರಿದಂತೆ ಜಿಲ್ಲೆಯ ಎಲ್ಲಾ ಪಂಚಾಯ್ತಿಗಳಲ್ಲಿ ನೀರು ಸರಬರಾಜು ವ್ಯವಸ್ಥೆಯೊಂದನ್ನು ಹೊರತು ಪಡಿಸಿ, ಉಳಿದ ಎಲ್ಲಾ ಕೆಲಸ ಕಾರ್ಯಗಳಿಂದ ನೌಕರ ಸಿಬ್ಬಂದಿಗಳು ದೂರ ಉಳಿದಿದ್ದರು. ಜಿಲ್ಲಾಡಳಿತ ಭವನದ ಮುಖ್ಯ ದ್ವಾರದಲ್ಲಿ ಸರ್ಕಾರಿ ನೌಕರರ ಸಂಘದ ಹಲ ಸದಸ್ಯರು ಇಂದು ಬೆಳಗ್ಗಿನಿಂದಲೇ ಜಮಾಯಿಸಿ, ಕಚೇರಿಗೆ ಬರುತ್ತಿದ್ದ ಹೊರಗುತ್ತಿಗೆ ನೌಕರರನ್ನು ತಡೆದು ಅವರನ್ನು ಕೆಲಸದಿಂದ ಹೊರಗುಳಿಯುವಂತೆ ಮನವೊಲಿಸುವ ಪ್ರಯತ್ನ ನಡೆಸುತ್ತಿದ್ದುದು ಕಂಡು ಬಂತು. ಕೆಲಸ ಕಾರ್ಯಗಳಿಗೆ ಬರುತ್ತಿದ್ದ ಸಾರ್ವಜನಿಕರಿಗೂ ಮುಷ್ಕರದ ವಿಷಯ ತಿಳಿಸಿ ಹಿಂದಕ್ಕೆ ಕಳುಹಿಸುತ್ತಿದ್ದುದು ಗೋಚರಿಸಿತು.

ಆಸ್ಪತ್ರೆಯಲ್ಲಿ ರೋಗಿಗಳ ಬೀಡು: ಮಡಿಕೇರಿ ಜಿಲ್ಲಾ ಆಸ್ಪತ್ರೆಯ ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳು ಮುಷ್ಕರದ ಹಿನ್ನೆಲೆ ತಮ್ಮ ಕಾರ್ಯ ಸ್ಥಗಿತಗೊಳಿಸಿದ್ದರು. ಆದರೆ ಆರೋಗ್ಯ ಚಿಕಿತ್ಸಾ ಸಿಬ್ಬಂದಿಗಳು ಮಾನವೀಯ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸಿದ್ದರಿಂದ, ಹೊರ ರೋಗಿಗಳ ವಿಭಾಗ ಚಿಕಿತ್ಸೆಗಾಗಿ ಬಂದ ಸಾರ್ವಜನಿಕರಿಂದ ತುಂಬಿಕೊಂಡಿತ್ತು. ಬಳಿಕ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ತೆರಳಿ, ತುರ್ತು ಚಿಕಿತ್ಸಾ ಘಟಕವನ್ನಷ್ಟೆ ಮಾನವೀಯ ನೆಲೆಗಟ್ಟಿನಲ್ಲಿ ನಡೆಸುವಂತೆ ಮನವಿ ಮಾಡಿದ್ದರಿಂದ ಹೊರರೋಗಿಗಳ ವಿಭಾಗ ಕೆಲ ಕಾಲ ಮುಚ್ಚಲ್ಪಟ್ಟಿತ್ತು. ನಂತರ ರಾಜ್ಯ ಸರ್ಕಾರ ಸರ್ಕಾರಿ ನೌಕರರ ಬೇಡಿಕೆಗಳಿಗೆ ಸ್ಪಂದಿಸಿದ ಹಿನ್ನೆಲೆ ಮುಷ್ಕರ ಸ್ಥಗಿತಗೊಂಡು, ಆಸ್ಪತ್ರೆಯ ಚಿಕಿತ್ಸಾ ವಿಭಾಗ ಎಂದಿನಂತೆ ಕಾರ್ಯನಿರ್ವಹಿಸಿತು.

ಕೊಡಗು ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶ್ರೀನಿವಾಸ್ ಮತ್ತು ಪದಾಧಿಕಾರಿಗಳು ಇಂದು ಬೆಳಗ್ಗಿನಿಂದಲೇ ಜಿಲ್ಲಾಡಳಿತ ಭವನ ಸೇರಿದಂತೆ ವಿವಿಧ ಇಲಾಖೆಗಳಿಗೆ ತೆರಳಿ, ಮುಷ್ಕರದ ಬಗ್ಗೆ ಗಮನ ಹರಿಸಿದ್ದರು. ಅತ್ಯವಶ್ಯ ಕೆಲಸ ಕಾರ್ಯಗಳಿಗೆ ಸರ್ಕಾರಿ ಇಲಾಖೆಗಳೆ ಕಾರ್ಯನಿರ್ವಹಿಸದೆ ಸಂಕಷ್ಟಕ್ಕೆ ಸಿಲುಕಿದ್ದ ಸಾರ್ವಜನಿಕರು, ಮುಷ್ಕರ ಮುಂದುವರೆದರೆ ತಮ್ಮ ಕೆಲಸ ಕಾರ್ಯಗಳ ಪರಿಸ್ಥಿತಿ ಏನೆನ್ನುವ ಆತಂಕಕ್ಕೆ ಒಳಗಾಗಿದ್ದರು. ಸರ್ಕಾರಿ ಇಲಾಖಾ ನೌಕರರ ಮುಷ್ಕರ ಅಂತ್ಯಗೊಂಡಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಆತಂಕ ಕಳೆದು ನಿರಾಳರಾಗುವಂತಾಯಿತು.

ಸರಕಾರಿ ನೌಕರರ ಬೇಡಿಕೆಗೆ ಸರಕಾರ ಸ್ಪಂದಿಸಿದ ಹಿನ್ನೆಲೆಯಲ್ಲಿ ಮಧ್ಯಾಹ್ನದ ಬಳಿಕ ಸರಕಾರಿ ನೌಕರರು ಕಚೇರಿಗಳಿಗೆ ಕರ್ತವ್ಯಕ್ಕೆ ಮರಳಿದ್ದು, ಕಂಡು ಬಂತು.

ವಿರಾಜಪೇಟೆಯಲ್ಲಿ ಸರ್ಕಾರಿ ಕಚೇರಿ, ಆಸ್ಪತ್ರೆಗೆ ಬೀಗ



ವಿರಾಜಪೇಟೆ: ರಾಜ್ಯ ಸರ್ಕಾರಿ ನೌಕರರು ವಿವಿಧ ಬೇಡಿಕೆಗಳನ್ನು ಈಡೇರಿ ಸುವಂತೆ ಆಗ್ರಹಿಸಿ ಕರೆ ನೀಡಿದ್ದ ಮುಷ್ಕರಕ್ಕೆ ತಾಲೂಕಿನ ಸರ್ಕಾರಿ ನೌಕರರು ಬೆಂಬಲ ನೀಡಿದ್ದರಿಂದ ವಿರಾಜಪೇಟೆ ತಾಲೂಕಿನ ಸರ್ಕಾರಿ ಕಚೇರಿ ಮತ್ತು ಆಸ್ಪತ್ರೆಗಳಿಗೆ ಬೀಗ ಜಡಿಯಲಾಗಿತ್ತು.

ಸಂತೆ ದಿನವಾದ ಬುಧವಾರ ಆಡಳಿತ ಕೇಂದ್ರ ತಾಲೂಕು ಕಚೇರಿಯ ಕೊಠಡಿಗಳಿಗೆ ಬೀಗಹಾಕಿದ್ದರಿಂದ ಬಿಕೋ ಎನ್ನುತ್ತಿತ್ತು. ಇನ್ನೊಂದೆಡೆ ಸರಕಾರಿ ಆಸ್ಪತ್ರೆಯಲ್ಲಿ ತರ್ತು ಚಿಕಿತ್ಸಾ ವಿಭಾಗ, ಒಳರೋಗಿಗಳ ವಿಭಾಗ, ತೀವ್ರ ನಿಗಾಘಟಕ ಮಾತ್ರ ಕಾರ್ಯನಿರ್ವಹಿಸುತ್ತಿತ್ತು. ಆಸ್ಪತ್ರೆಯ ಮುಂದಿನ ಬಾಗಿಲು ಬೀಗ ಹಾಕಿದ್ದರಿಂದ ಸರ್ಕಾರಿ ಸೇವೆ ಲಭ್ಯವಿಲ್ಲದೆ ಜನರು ಪರದಾಡುವಂತಾಗಿತ್ತು.

7ನೇ ವೇತನ ಆಯೋಗ ಜಾರಿ, ನೂತನ ಪಿಂಚಣಿ ಪದ್ಧತಿ (ಎನ್‌ಪಿಎಸ್) ರದ್ದು ಮಾಡಬೇಕೆಂದು ಮತ್ತು ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಸರಕಾರಿ ನೌಕರರ ಸಂಘದ ನೇತೃತ್ವದಲ್ಲಿ ಸರಕಾರಿ ನೌಕರರು ಮುಷ್ಕರ ನಡೆಸಿದ್ದರಿಂದ ಬಹುತೇಕ ಸರಕಾರಿ ನೌಕರರು ಮುಷ್ಕರ ಬೆಂಬಲಿಸಿ ಕರ್ತವ್ಯಕ್ಕೆ ಗೈರಾಗಿದ್ದರು. ಗ್ರಾಮೀಣ ಪ್ರದೇಶದಿಂದ ಕಚೇರಿಗೆ ಮತ್ತು ಆಸ್ಪತ್ರೆಗೆ ಬರುವ ನಾಗರಿಕರು ಬಾಗಿಲಿಗೆ ಬೀಗ ಹಾಕಿರುವುದನ್ನು ನೋಡಿ ಏನು ಮಾಡಬೇಕೆಂಬುದು ತೋಚದೆ ಪರದಾಡಿದರು. ಸರ್ಕಾರಿ ನೌಕರರ ಮುಷ್ಕರಕ್ಕೆ ಪ್ರೌಢಶಾಲಾ ಶಿಕ್ಷಕರ ಸಂಘ ಬೆಂಬಲ ನೀಡಿ ಸೇವೆಗೆ ಗೈರಾಗಿದ್ದರಿಂದ ಬುಧವಾರ ನಡೆಯಬೇಕಿದ್ದ ಎಸ್‌ಎಸ್‌ಎಲ್‌ಸಿ ಪೂರ್ವಭಾವಿ ಪರೀಕ್ಷೆಯನ್ನು ಮಾ.6ಕ್ಕೆ ಮುಂದೂಡಲಾಗಿದೆ.

ಮನೆ–ಮನೆಗೆ ಕಾಂಗ್ರೆಸ್ ಭರವಸೆಗಳ ಗ್ಯಾರಂಟಿ ಕಾರ್ಡ್ ಅಭಿಯಾನ

ಇಂದು ಮಡಿಕೇರಿಯಲ್ಲಿ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಚಾಲನೆ

ಮಡಿಕೇರಿ, ಮಾ.1– ವಿಧಾನಸಭಾ ಚುನಾವಣೆಯ ಹಿನ್ನೆಲೆ ಕೆಪಿಸಿಸಿ ಘೋಷಿಸಿರುವ ವಿವಿಧ ಭರವಸೆಗಳ 'ಕಾಂಗ್ರೆಸ್ ಗ್ಯಾರಂಟಿ ಕಾರ್ಡ್' ಅನ್ನು ಮನೆ–ಮನೆಗೆ ತಲುಪಿಸುವ ಅಭಿಯಾನ ಮಾ.2ರಿಂದ ಜಿಲ್ಲೆಯಾದ್ಯಂತ ಆರಂಭಗೊಳ್ಳಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ರಾಜ್ಯ ಉಸ್ತುವಾರಿ ರಣ್‌ದೀಪ್ ಸಿಂಗ್ ಸುರ್ಜೇವಾಲ ಗುರುವಾರ ಮಡಿಕೇರಿಯ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

ಕಾಂಗ್ರೆಸ್‌ನ ಮೊದಲ ಗ್ಯಾರಂಟಿ ಕಾರ್ಡ್ 'ಗೃಹಜ್ಯೋತಿ' ಯೋಜನೆ ಮೂಲಕ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ಪೂರೈಕೆ, 2ನೇ ಗ್ಯಾರಂಟಿ ಪ್ರತಿ ಮನೆಯೊಡತಿಗೆ 2 ಸಾವಿರ ರೂ. ಪ್ರೋತ್ಸಾಹ ಧನ ನೀಡಲು 'ಗೃಹಲಕ್ಷ್ಮಿ' ಯೋಜನೆ ಜಾರಿ ಮತ್ತು 3ನೇ ಗ್ಯಾರಂಟಿಯಾಗಿ ಅನ್ನಭಾಗ್ಯ ಯೋಜನೆ ಮೂಲಕ ಬಿಪಿಎಲ್ ಕಾರ್ಡ್‌ದಾರರಿಗೆ 10 ಕೆ.ಜಿ.ಅಕ್ಕಿ ಉಚಿತವಾಗಿ ನೀಡುವ ಭರವಸೆಯ ಕಾರ್ಡ್‌ನ್ನು ಮನೆ–ಮನೆಗೆ ತಲುಪಿಸಲಾಗುವುದು. ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಎಐಸಿಸಿ ಕಾರ್ಯದರ್ಶಿ, ಕೊಡಗು ಉಸ್ತುವಾರಿ ಹಾಗೂ ಕೇರಳ ಶಾಸಕ ರೋಜಿ ಜಾನ್ ಮತ್ತಿತರ ಪ್ರಮುಖರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಪ್ರತ್ಯೇಕ ಪ್ರಣಾಳಿಕೆಯನ್ನು ಸದ್ಯದಲ್ಲಿಯೇ ಹೊರತರಲಾಗುವುದು ಎಂದರು.

ಕುಲಶಾಸ್ತ್ರ ಅಧ್ಯಯನದ ಹೆಸರಿನಲ್ಲಿ ಕೊಡವರಿಗೆ ಅನ್ಯಾಯ

ಕೊಡವರಲ್ಲದವರ ಅಧ್ಯಯನಕ್ಕೆ ಸರ್ಕಾರ ಸಿದ್ಧತೆ: ಎನ್.ಯು. ನಾಚಪ್ಪ ಆರೋಪ

ಮಡಿಕೇರಿ, ಮಾ.1– ಕುಲಶಾಸ್ತ್ರ ಅಧ್ಯಯನದ ಹೆಸರಿನಲ್ಲಿ ನೈಜ ಕೊಡವರನ್ನು ವಂಚಿಸಿ ಕೊಡವರ ಹೆಸರಿನಲ್ಲಿ ಕೊಡವರಲ್ಲದವರ ಅಧ್ಯಯನಕ್ಕೆ ಸರ್ಕಾರ ಮುಂದಾಗಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು. ನಾಚಪ್ಪ ಗಂಭೀರ ಆರೋಪ ಮಾಡಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ಅವರು, ಸರ್ಕಾರದ ನಡೆ ಸಂವಿಧಾನಿಕ ನೈತಿಕತೆಯ ಉಲ್ಲಂಘನೆಯಾಗಿದೆ. ಹುಲಿಯ ಅಧ್ಯಯನ ಹುಲಿಯ ಹೆಸರಿನಲ್ಲೇ ನಡೆಯಲಿ, ಹುಲಿ ಚಿತ್ರ ತೋರಿಸಿ ಕಾಡುಬೆಕ್ಕು ಅಧ್ಯಯನವನ್ನು ಮಾಡಬೇಡಿ. ಮುಖ್ಯಮಂತ್ರಿಗಳು ಕೊಡವ ವಿರೋಧಿ ಎಂಬ ಕಳಂಕ ಹೊತ್ತು ಕೊಳ್ಳಬಾರದು ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕೊಡವರ ಕುಲಶಾಸ್ತ್ರ ಅಧ್ಯಯನಕ್ಕೆ ಸಂಬಂಧಿಸಿದ ಕಡತ ಕಳೆದ ಆಗಸ್ಟ್ ತಿಂಗಳಿನಿಂದ ಮುಖ್ಯಮಂತ್ರಿಗಳ ಬಳಿಯೇ ಉಳಿದಿದೆ. ನೈಜ ಕೊಡವರ ಅಧ್ಯಯನಕ್ಕೆ ತಕ್ಷಣ ಚಾಲನೆ ನೀಡುವ ಮೂಲಕ ಈ ಕಡತಕ್ಕೆ ಜೀವ ತುಂಬಬೇಕು ಎಂದು ಒತ್ತಾಯಿಸಿದ್ದಾರೆ. ಭಾಷಿಕರ ಪ್ರತ್ಯೇಕ ವ್ಯಕ್ತಿತ್ವದ ಹೆಸರಿನಲ್ಲಿ ಕುಲಶಾಸ್ತ್ರದ ಅಧ್ಯಯನ ನಡೆಸಲಿ, ಆದರೆ ಅವರ ಅಸಲಿಯತ್ತನ್ನು ಮರೆಮಾಚಿ(ಕ್ಯಾಮೋಫ್ಲೋಜ್) ಕೊಡವ ಮುಖವಾಡ ತೊಡಿಸುವ ಮೂಲಕ ಸಾಂಸ್ಕೃತಿಕ ವಂಚನೆಯನ್ನು ನಿಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಕೊಡವ ಬ್ರ್ಯಾಂಡ್ ಎಲ್ಲರಿಗೂ ಬೇಕು, ಆದರೇ ಮೂಲ ಕೊಡವರೇಸ್ ಯಾರಿಗೂ ಬೇಡ ಕೊಡವರಿಗೆ ಸಂವಿಧಾನಿಕವಾಗಿ ಯಾವುದೂ ದೊರೆಯಬಾರದು ಎನ್ನುವ ಸಂಚು ನಡೆಯುತ್ತಿದೆ. ಕೊಡವರೇ ಬೇರೆ, ಭಾಷಿಕರೇ ಬೇರೆ. ಕೊಡವ ವಂಶವಾಹಿ ಅಂತರ್ಗತವೇ ಬೇರೆ, ಕೊಡವ ಅನುಕರಣೆಯೇ ಬೇರೆ. ಕೊಡವರ ಹಿರಿಮೆ ಗರಿಮೆಯನ್ನು ಹೊಗಳುತ್ತಾ ರಾಷ್ಟ್ರ ರಕ್ಷಣೆ ಮತ್ತು ದೇಶ ಕಟ್ಟುವ ಕಾರ್ಯಕ್ಕೆ ಅಪರಿಮಿತ ಕಾಣಿಕೆ ನೀಡಿದ ಕೊಡವರನ್ನು ಕೊಂಡಾಡುವ ನಾಟಕವಾಡುತ್ತಾ ಕೊಡವ ಬ್ರ್ಯಾಂಡ್‌ನ ದುರ್ಬಳಕೆ ಮಾಡಲಾಗಿದೆ ಎಂದು ಟೀಕಿಸಿದ್ದಾರೆ.

ಮುಖ್ಯಮಂತ್ರಿಗಳ ಕಚೇರಿಯಲ್ಲಿ ಕಳೆದ 6 ತಿಂಗಳಿನಿಂದ ಕೊಳೆಯುತ್ತಾ ಬಿದ್ದಿರುವ ಕೊಡವರ ಕುಲಶಾಸ್ತ್ರ ಅಧ್ಯಯನದ ಹಕ್ಕನ್ನು ಕಸಿದುಕೊಂಡು ಅಸಲಿ ಮುಖ ಮರೆಮಾಚಿ ಕೊಡವ ಮುಖವಾಡದ ಮೂಲಕ ವಂಚನೆಗೆ ಇಳಿದಿರುವುದು ಸಾಬೀತಾಗುತ್ತಿದೆ. ಕೊಡವ ಹೃದಯ ಭಾಗದ(ಕೊಡವ ಜನಸಂಖ್ಯಾ ಬಾಹುಳ್ಯದ) ಜನಪ್ರತಿನಿಧಿ ಹಾಗೂ ವಕ್ರ ಇತಿಹಾಸ ರಚನೆಯ ಪಂಡಿತರೊಬ್ಬರ ಅಪವಿತ್ರ ಮೈತ್ರಿ ಈ ಬೆಳವಣಿಗೆಗೆ ಕಾರಣ ಎಂದು ನಾಚಪ್ಪ ಆರೋಪಿಸಿದ್ದಾರೆ. ಕಡತ ವಿಲೇವಾರಿ ವಿಚಾರದಲ್ಲಿ ಕಾಲಹರಣ ಮಾಡಲಾಗುತ್ತಿದ್ದು, ನ್ಯಾಯಾಲಯದ ತೀರ್ಪನ್ನೇ ಧಿಕ್ಕರಿಸಿದ ಪ್ರಕರಣ ಇದಾಗಿದೆ. ಇದರಿಂದ ಸರ್ಕಾರ ಈ ನೆಲದ ಕಾನೂನಿಗೆ ಗೌರವ ನೀಡುವುದಿಲ್ಲವೆಂಬ ಸಂದೇಶ ರವಾನೆಯಾದಂತಾಗಿದೆ ಎಂದು ನಾಚಪ್ಪ ಆರೋಪಿಸಿದ್ದಾರೆ.

ಹುಲಿ ದಾಳಿಗೆ ಕಾಡುಕೋಣ ಬಲಿ

ಭಯಭೀತರಾದ ಕಾರ್ಮಿಕರು, ಬೆಳೆಗಾರರು

ಸಿದ್ದಾಪುರ, ಮಾ.1– ಹುಲಿ ದಾಳಿಗೆ ಕಾಡು ಕೋಣವೊಂದು ಬಲಿಯಾಗಿರುವ ಘಟನೆ ವಿರಾಜಪೇಟೆ ತಾಲೂಕಿನ ಪಾಲಿಬೆಟ್ಟ ಸಮೀಪದ ಗೌರಿಬೆಟ್ಟ ಕಾಫಿ ತೋಟದಲ್ಲಿ ನಡೆದಿದೆ.

ಬೆಳಗ್ಗೆ ಕಾರ್ಮಿಕರು ಕೆಲಸಕ್ಕೆಂದು ತೋಟಕ್ಕೆ ತೆರಳಿದ ಸಂದರ್ಭ ಕಾಡುಕಾಣ ಸತ್ತು ಬಿದ್ದಿರುವುದು ಕಂಡು ಭಯಭೀತರಾಗಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಎಸಿಎಫ್ ನೆಹರು, ವಲಯ ಅರಣ್ಯ ಅಧಿಕಾರಿ ದೇವಯ್ಯ ಸೇರಿದಂತೆ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಾಡುಕೋಣದ ಮೇಲೆ ಹುಲಿ ದಾಳಿ ನಡೆಸಿರಬಹುದು ಎಂದು ಶಂಕಿಸಲಾಗಿದ್ದು, ಘಟನಾ ಸ್ಥಳದಲ್ಲಿ ಕ್ಯಾಮರಾ ಅಳವಡಿಸಲು ಮುಂದಾಗಿದ್ದಾರೆ. ಉಪ ವಲಯ ಅರಣ್ಯ ಅಧಿಕಾರಿಗಳಾದ ಮೋನಿಷಾ, ಚಂದ್ರಶೇಖರ್, ಅರುಣ ಸೇರಿದಂತೆ ಮತ್ತಿತರರು ಇದ್ದರು.

ಮಾಲ್ದಾರೆ, ಸಿದ್ದಾಪುರ, ಪಾಲಿಬೆಟ್ಟ ಭಾಗದಲ್ಲಿ ಹುಲಿ ಕಾಣಿಸಿಕೊಳ್ಳುತ್ತಿದ್ದು ಕಾರ್ಮಿಕರು, ಬೆಳೆಗಾರರು, ಶಾಲಾ ವಿದ್ಯಾರ್ಥಿಗಳು ಭಯಭೀತರಾಗಿದ್ದು ಹುಲಿ ಸೆರೆ ಹಿಡಿಯಬೇಕೆಂದು ಕಾರ್ಮಿಕ ಸಂಘಟನೆಯ ಮುಖಂಡ ಮಹದೇವ್ ಒತ್ತಾಯಿಸಿದ್ದಾರೆ.

ಬೊಳ್ಳಮ್ಮ ನಿಧನ

ಕುಶಾಲನಗರ, ಮಾ.1– ಸಮೀಪದ ಮರಡಿಯೂರು ಗ್ರಾಮದ ನಿವಾಸಿ ಬೆಳ್ಯನ ದಿ. ಬೆಳ್ಯಪ್ಪ ಅವರ ಪತ್ನಿ ಬೊಳ್ಳಮ್ಮ (85) ಬುಧವಾರ ನಿಧನರಾದರು.



ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 11 ಗಂಟೆ ನಂತರ ತವರುಮನೆ ಆವಂದೂರು ಪಟ್ಟಡದಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಮೃತರು ಐವರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮುಖ್ಯಮಂತ್ರಿ ಬೊಮ್ಮಾಯಿ, ಯಡಿಯೂರಪ್ಪ ನೇತೃತ್ವದಲ್ಲಿ ಮುಂದಿನ ಚುನಾವಣೆ

ಹನೂರು ಜನಸಂಕಲ್ಪ ಯಾತ್ರೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಘೋಷಣೆ

ಹನೂರು, ಮಾ.1– ಯಶಸ್ವಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದಲ್ಲಿ ಈ ಬಾರಿ ವಿಧಾನ ಸಭಾ ಚುನಾವಣೆ ನಡೆಯಲಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ತಿಳಿಸಿದ್ದಾರೆ.

ಹನೂರು ಗೌರಿಶಂಕರ ಕಲ್ಯಾಣ ಮಂಟಪ ಸಮೀಪದ ಆವರಣದಲ್ಲಿ ಬಿಜೆಪಿ ವತಿಯಿಂದ ಏರ್ಪಡಿಸಲಾಗಿದ್ದ ಜನ ಸಂಕಲ್ಪ ಯಾತ್ರೆ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

8 ಸಾವಿರ ಕಿ.ಲೋ. ಈ ವಿಜಯ ಸಂಕಲ್ಪ ಯಾತ್ರೆ ನಡೆಯಲಿದ್ದು, ಈ ಬಾರಿ 150 ಸ್ಥಾನಗಳನ್ನು ಬಿಜೆಪಿ ಗೆಲ್ಲುವ ಮೂಲಕ ಕರ್ನಾಟಕದಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಪಡೆಯಲಿದೆ. ಮಾದೇಶ್ವರ ಸನ್ನಿಧಿಯಲ್ಲಿ ಕರ್ನಾಟಕ ಸಂಸ್ಕೃತಿ, ಆಚಾರ, ವಿಚಾರ ಎಲ್ಲಾವು ಮಾದರಿಯಾಗಿದೆ. ಈ ಬಾರಿ ಮತದಾರರು ಬಿಜೆಪಿಯನ್ನು ಬೆಂಬಲಿಸಲಿದ್ದಾರೆ ಎಂದು ಅವರು ತಿಳಿಸಿದರು.

ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಬೃಹತ್ ಪ್ರತಿಮೆಯನ್ನು ಅನಾವರಣಗೊಳಿಸಿದ್ದಾರೆ. ಮೈಸೂರು ಮತ್ತು ಚೆನ್ನೈ ಮಾರ್ಗವಾಗಿ ವಂದೇ ಮಾತರಂ ರೈಲು ಮಾರ್ಗವನ್ನು ಆರಂಭ ಮಾಡಿದ್ದಾರೆ. ಕರ್ನಾಟಕದಲ್ಲಿ ಪ್ರತಿಯೊಬ್ಬರು ಶಿಕ್ಷಿತರಾಗಿದ್ದಾರೆ. ದೇಶದಲ್ಲಿ 40ರಷ್ಟು ಡಿಜಿಟಲೀಕರಣವನ್ನು ಮೋದಿಯವರು ಮಾಡಿದ್ದಾರೆ. ಶಿವಮೊಗ್ಗದಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಾಣ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಅತಿ ಹೆಚ್ಚು ವಿಮಾನ ನಿಲ್ದಾಣಗಳನ್ನು ಮಾಡಲು ಮೋದಿಯವರು ಕ್ರಮ ವಹಿಸಿದ್ದಾರೆ ಎಂದು ನಡ್ಡಾ ಹೇಳಿದರು.



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಹಾಗೂ ಬಸವರಾಜ್ ಬೊಮ್ಮಾಯಿ ಅವರ ಸರ್ಕಾರದ ಜನಪ್ರಿಯ ಕಾರ್ಯಕ್ರಮಗಳನ್ನು ಮನೆ ಮನೆಗೆ ತಲುಪಿಸುವ ಮೂಲಕ ಈ ಬಾರಿ ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಭಾರತೀಯ ಜನತಾ ಪಾರ್ಟಿ ಅಭ್ಯರ್ಥಿಯನ್ನು 15–20 ಸಾವಿರ ಮತಗಳ ಅಂತರದಿಂದ ಜಯಶೀಲರನ್ನಾಗಿ ಮಾಡಬೇಕು ಎಂದರು.

ಮುಂದಿನ ದಿನಗಳಲ್ಲಿ 50,000ಕ್ಕೂ ಹೆಚ್ಚು ಕಾರ್ಯಕರ್ತರು ಸೇರಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಜಯೇಂದ್ರ, ನಾನು ಸಹ ಮತ್ತೊಮ್ಮೆ ಕ್ಷೇತ್ರಕ್ಕೆ ಆಗಮಿಸುತ್ತೇವೆ. ನಾನು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ರೈತರು ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆಯನ್ನು ನಿಗದಿ ಮಾಡಿದ್ದೇನೆ. ಪ್ರಧಾನಿ ನರೇಂದ್ರ ಮೋದಿ ಅವರು ಕಿಸಾನ್ ಸಮ್ಮಾನ್ ಯೋಜನೆ ಅಡಿ 6,000ಗಳನ್ನು ನೀಡಿದರೆ ರಾಜ್ಯ ಸರ್ಕಾರ ನಾಲ್ಕು ಸಾವಿರ ರೂ.ಗಳನ್ನು ನೀಡುವ ಮೂಲಕ ರೈತರ ಕಲ್ಯಾಣಕ್ಕೆ ಮುಂದಾಗಿದೆ. ಪರಿಶಿಷ್ಟ ಜಾತಿ ಪಂಗಡದ ಹಿಂದುಳಿದವರ ಕಲ್ಯಾಣಕ್ಕೆ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಹನೂರು ವಿಧಾನಸಭಾ ಕ್ಷೇತ್ರ ಈಗಾಗಲೇ ಸಮಗ್ರ ಅಭಿವೃದ್ಧಿ ಆಗಬೇಕಾಗಿತ್ತು. ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜನ್ನು ನಾವು ಕೊಟ್ಟಿದ್ದು, ಇಂದಿನ ದುಸ್ಥಿತಿ ನೋಡಿದರೆ ಭ್ರಷ್ಟಾಚಾರದ ಗಂಗೋತ್ರಿ ಕಾಂಗ್ರೆಸ್ ಆಗಿದೆ. ಹಾಸಿಗೆ, ದಿಂಬಿನಲ್ಲಿ ಭ್ರಷ್ಟಾಚಾರ, ಬೆಂಗಳೂರು ಬಿಡಿಎ ಭ್ರಷ್ಟಾಚಾರದಲ್ಲಿ ಮುಳುಗಿದೆ. ಕಾಂಗ್ರೆಸ್ ಆ ಭಾಗ್ಯ ಈ ಭಾಗ್ಯ ಕೊಟ್ಟೆವೆಂದು ದೌರ್ಭಾಗ್ಯವನ್ನು ಕೊಟ್ಟಿದೆ. ಈಗಾಗಲೇ ಕಾಂಗ್ರೆಸ್ ರಾಜ್ಯಾದ್ಯಂತ ನೆಲ ಕಚ್ಚಿದೆ. ಚಾಮರಾಜನಗರದಲ್ಲಿ ಉಳಿದುಕೊಂಡಿದ್ದು ಮುಂದಿನ ಚುನಾವಣೆಯಲ್ಲಿ ನಾಲ್ಕೂ ಸ್ಥಾನಕ್ಕೆ ನಾಲ್ಕು ಸ್ಥಾನವನ್ನೂ ಗೆಲ್ಲಲು ಶ್ರಮಿಸಬೇಕು ಎಂದರು.

ಮಾಜಿ ಸಚಿವ ಈಶ್ವರಪ್ಪ ಮಾತನಾಡಿ, ಮೋದಿ, ಅಮಿತ್ ಷಾ ಬಿಟ್ಟರೆ ಯಾರಿದ್ದಾರೆ ಎಂದು ಕಾಂಗ್ರೆಸ್‌ನವರು ಕೇಳುತ್ತಿದ್ದಾರೆ. ನಿಮಗೆ ಯಾರೂ ಇಲ್ಲಾ. ಸಿದ್ದರಾಮಯ್ಯ ಅವರು ನರೇಂದ್ರ ಮೋದಿಯವರನ್ನು ನರಹಂತಕ ಎಂದು ಕರೆದಿದ್ದಾರೆ. ಸರ್ಜಿಕಲ್ ಸ್ಟ್ರೈಕ್ ಮೂಲಕ ಪಾಕಿಸ್ತಾನ ಉಗ್ರಗಾಮಿಗಳನ್ನು ಸದೆ ಬಡಿದವರು. ನರೇಂದ್ರ ಮೋದಿ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ಅವರಿಗೆ ಎಲ್ಲಿ ನಿಲ್ಲಬೇಕೆಂದು ತಿಳಿದಿಲ್ಲ. ಚಾಮುಂಡೇಶ್ವರಿಯಲ್ಲಿ 5 ಬಾರಿ ಗೆದ್ದಿದ್ದರಲ್ಲ, ಯಾಕೇ ಕೋಲಾರಕ್ಕೆ ಹೋಗಬೇಕು. ಅಲ್ಲಿ ದಲಿತರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಡಾ.ಜಿ.ಪರಮೇಶ್ವರ ಸೋಲಿಸಿರುವುದನ್ನು ಮರೆತಿಲ್ಲ. ವರ್ತೂರು ಹುಲಿಯನ್ನು ಕೋಲಾರದಲ್ಲಿ ಮಣಿಸಲು ಸಾಧ್ಯವಿಲ್ಲ ಎಂದು ಕಿಡಿಕಾರಿದರು.

ಇದೇ ಸಂದರ್ಭದಲ್ಲಿ ಸಚಿವರುಗಳಾದ ಸುನೀಲ್ ಕುಮಾರ್, ಆರಗ ಜ್ಞಾನೇಂದ್ರ, ಗೋಪಾಲಯ್ಯ, ಕೋಟಾ ಶ್ರೀನಿವಾಸ ಪೂಜಾರಿ, ಶಾಸಕರು ಗಳಾದ ಎನ್.ಮಹೇಶ್, ನಿರಂಜನ್ ಕುಮಾರ್, ಚಾಮರಾಜನಗರ ಬಿಜೆಪಿ ಜಿಲ್ಲಾಧ್ಯಕ್ಷ ನಾರಾಯಣ್ ಪ್ರಸಾದ್, ಉಪಾಧ್ಯಕ್ಷ ಡಾ. ದತ್ತೇಶ್ ಕುಮಾರ್, ಹನೂರು ಮಂಡಲ ಅಧ್ಯಕ್ಷ ಮಾಲಿಂಗ ಕಟ್ಟೆ ಸಿದ್ದಪ್ಪ, ಮುಖಂಡರುಗಳಾದ ಪ್ರೀತನ್ ನಾಗಪ್ಪ, ಜನಧ್ವನಿ ವೆಂಕಟೇಶ್, ನಿಶಾಂತ್, ಕಾಡಾ ಅಧ್ಯಕ್ಷ ನಿಜಗುಣ ರಾಜು ಇನ್ನಿತರರು ಉಪಸ್ಥಿತರಿದ್ದರು.

ಸಮಾವೇಶಕ್ಕೆ ಜಿ.ಎನ್. ನಂಜುಂಡಸ್ವಾಮಿ ಗೈರು


ಚಾಮರಾಜನಗರ, ಮಾ.1– ರಾಜ್ಯ ಬಿಜೆಪಿಯಿಂದ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ಆಯೋಜಿಸಿದ್ದ ವಿಜಯ ಸಂಕಲ್ಪ ರಥಯಾತ್ರೆ ಚಾಲನಾ ಕಾರ್ಯಕ್ರಮ ಹಾಗೂ ಕೊಳ್ಳೇಗಾಲದಲ್ಲಿ ನಡೆದ ಸಾರ್ವಜನಿಕ ಸಭೆಗೆ ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ ಗೈರು ಹಾಜರಾಗಿದ್ದು ತೀವ್ರ ಚರ್ಚೆಗೆ ಗ್ರಾಸವಾಗಿದೆ.



ಈ ಭಾಗದಲ್ಲಿ ಬಿಜೆಪಿ ಪ್ರಬಲ ನಾಯಕರಾಗಿರುವ ನಂಜುಂಡಸ್ವಾಮಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಬಿಎಸ್‌ಪಿಯಿಂದ ಶಾಸಕ ಎನ್. ಮಹೇಶ್ ಬಿಜೆಪಿ ಸೇರ್ಪಡೆಗೊಂಡ ವೇಳೆಯಿಂದಲೂ ಇವರಿಬ್ಬರ ನಡುವೆ ಮುಸುಕಿನ ಗುದ್ದಾಟ ನಡೆದೇ ಇತ್ತು. ಅಲ್ಲದೆ, ನಂಜುಂಡಸ್ವಾಮಿ ಬೆಂಬಲಿಗರು ಮಹೇಶ್ ವಿರುದ್ಧ ಬಹಿರಂಗವಾಗಿಯೇ ಹೇಳಿಕೆಗಳನ್ನು ನೀಡುತ್ತಿದ್ದರು. ಈ ಮಧ್ಯೆ ನಂಜುಂಡಸ್ವಾಮಿ ಕಾಂಗ್ರೆಸ್ ಸೇರ್ಪಡೆಯಾಗುತ್ತಾರೆ ಎಂಬ ಮಾತುಗಳು ಕೇಳಿ ಬಂದಿತ್ತು. ಇದಕ್ಕೆ ಪೂರಕವೆಂಬಂತೆ ಅವರು ದೆಹಲಿಯಲ್ಲಿ ತಮ್ಮ ರಾಜಕೀಯ ಗುರುಗಳೂ ಆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಅವರನ್ನು ಇತ್ತೀಚೆಗೆ ಭೇಟಿಯಾಗಿದ್ದರು. ಕೊಳ್ಳೇಗಾಲದಲ್ಲಿ ಕಾಂಗ್ರೆಸ್ ಪ್ರಜಾಧ್ವನಿ ಸಮಾವೇಶ ನಡೆದಾಗ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೇ ನಂಜುಂಡಸ್ವಾಮಿ ಕಾಂಗ್ರೆಸ್‌ಗೆ ಬರುತ್ತಾರೆ ಎಂದು ಘೋಷಿಸಿದ್ದರು. ಇಂದು ಬಿಜೆಪಿ ಸಮಾವೇಶಕ್ಕೆ ನಂಜುಂಡಸ್ವಾಮಿ ಗೈರಾಗಿರುವುದು ಅವರು ಕಾಂಗ್ರೆಸ್ ಸೇರುತ್ತಾರೆಯೇ ಎಂಬ ಚರ್ಚೆಗೆ ಎಡೆಮಾಡಿಕೊಟ್ಟಿದೆ.

ಮಾದಪ್ಪನ ದರ್ಶನ ಪಡೆದ ಜೆ.ಪಿ. ನಡ್ಡಾ

ಚಾಮರಾಜನಗರ, ಮಾ.1– ಬಿಜೆಪಿ ವಿಜಯ ಸಂಕಲ್ಪ ಯಾತ್ರೆಗೆ ಚಾಲನೆ ನೀಡಲು ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿದ್ದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ ತೆರಳಿ ಸ್ವಾಮಿಯ ದರ್ಶನ ಪಡೆದರು.



ಮಲೆ ಮಹದೇಶ್ವರ ಬೆಟ್ಟಕ್ಕೆ ಹೆಲಿಕಾಪ್ಟರ್ ಮೂಲಕ ಆಗಮಿಸಿದರು. ನಡ್ಡಾ ಅವರ ಜೊತೆ ಅದೇ ಹೆಲಿಕಾಪ್ಟರ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಆಗಮಿಸಿದರು.

ಅವರನ್ನು ಹೆಲಿಪ್ಯಾಡ್‌ನಲ್ಲಿ ಸಚಿವರಾದ ಆರಗ ಜ್ಞಾನೇಂದ್ರ, ಸುನೀಲ್ ಕುಮಾರ್, ಗೋಪಾಲಯ್ಯ, ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ, ಶಾಸಕರಾದ ಎನ್. ಮಹೇಶ್, ನಿರಂಜನಕುಮಾರ್, ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಜಿಲ್ಲಾಧ್ಯಕ್ಷ ನಾರಾಯಣಪ್ರಸಾದ್ ಸ್ವಾಗತಿಸಿದರು. ನಂತರ ನಡ್ಡಾ ಅವರು ಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ ತೆರಳಿ ಸ್ವಾಮಿಯ ದರ್ಶನ ಪಡೆದರು. ದೇವಾಲಯಕ್ಕೆ ಆಗಮಿಸಿದ ನಡ್ಡಾ ಅವರನ್ನು ಸಾಲೂರು ಶ್ರೀಗಳ ನೇತೃತ್ವದಲ್ಲಿ ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ದೇವಾಲಯದಲ್ಲಿ ಶ್ರೀಗಳು ನಡ್ಡಾ ಅವರಿಗೆ ಆನೆಯ ಮರದ ಕೆತ್ತನೆಯ ಸ್ಮರಣಿಕೆ ನೀಡಿ ಗೌರವಿಸಿದರು.

ವಿಜಯ ಸಂಕಲ್ಪ ಯಾತ್ರೆ ಚಾಲನೆ, ಸಂವಾದ ಕಾರ್ಯಕ್ರಮದ ಬಳಿಕ, ನಡ್ಡಾ ಅವರು ಬೆಟ್ಟದಲ್ಲಿರುವ ಸಾಲೂರು ಮಠಕ್ಕೆ ತೆರಳಿ ಸ್ವಾಮೀಜಿ ಅವರನ್ನು ಭೇಟಿ ಮಾಡಿದರು. ಅಲ್ಲಿ ಭೋಜನ ಸ್ವೀಕರಿಸಿ, ಬಳಿಕ ಹೆಲಿಕಾಪ್ಟರ್ ಮೂಲಕ ಹನೂರಿಗೆ ತೆರಳಿದರು.

ರಾಜ್ಯ ಸರ್ಕಾರಿ ನೌಕರರ ಅನಿರ್ದಿಷ್ಟಾವಧಿ ಮುಷ್ಕರ ಯಶಸ್ವಿ







ಚಾಮರಾಜನಗರ, ಮಾ.1– ರಾಜ್ಯ ಸರ್ಕಾರಿ ನೌಕರರು ಕರೆ ನೀಡಿದ್ದ ಮುಷ್ಕರವನ್ನು ಬೆಂಬಲಿಸಿ ಜಿಲ್ಲೆಯಾದ್ಯಂತ ಸರ್ಕಾರಿ ನೌಕರರು ಗೈರು ಹಾಜರಿಯಾಗುವ ಮೂಲಕ ಮುಷ್ಕರ ಯಶಸ್ವಿಗೊಳಿಸಿದ್ದಾರೆ.

ಸರ್ಕಾರಿ ನೌಕರರು ಕೆಲಸಕ್ಕೆ ಗೈರು ಹಾಜರಾಗದೆ ಮುಷ್ಕರದಲ್ಲಿ ಭಾಗವಹಿಸಿದ್ದರು. ಚಾಮರಾಜನಗರ ಜಿಲ್ಲಾಡಳಿತದ ಮುಂಭಾಗದಲ್ಲಿ ಜಿಲ್ಲಾ ಸರ್ಕಾರಿ ನೌಕರರು ಗೇಟ್ ಮುಂದೆ ನಿಂತು ಕಚೇರಿಗೆ ಯಾರೂ ಹೋಗದೆ ಇರುವ ಹಾಗೆ ತಡೆದು ಮುಷ್ಕರ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘದ ಅಧ್ಯಕ್ಷ ಚಂದ್ರಶೇಖರ್, ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ನ್ಯಾಯಯುತ ಬೇಡಿಕೆಗಳಾದ ವೇತನ–ಭತ್ಯೆಗಳ ಪರಿಷ್ಕರಣೆ ಹಾಗೂ ಹಳೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಸಂಬಂಧ ದಿನಾಂಕ 21–02–2023 ರಂದು ನಡೆದ ರಾಜ್ಯ ಕಾರ್ಯಕಾರಿಣಿ ಮತ್ತು ವೃಂದ ಸಂಘಗಳ ಸಭೆಯಲ್ಲಿ ಕೈಗೊಂಡ ಸರ್ವಾನುಮತದ ತೀರ್ಮಾನದಂತೆ ರಾಜ್ಯದ ಸಮಸ್ತ ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರು ಬುಧವಾರದಿಂದ ಕರ್ತವ್ಯಕ್ಕೆ ಗೈರು ಹಾಜರಾಗಿ ಅನಿರ್ದಿಷ್ಟಾವಧಿ ಮುಷ್ಕರವನ್ನು ನಡೆಸುತ್ತಿದ್ದೇವೆ. ನಮ್ಮ ಮುಷ್ಕರಕ್ಕೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸದಸ್ಯರು, ರಾಜಕಾರಣಿಗಳು ಸಂಘ ಸಂಸ್ಥೆಗಳು ಬೆಂಬಲ ನೀಡಿವೆ ಎಂದರು.

ರಾಜ್ಯ ಸರ್ಕಾರಿ ನೌಕರರ ನ್ಯಾಯಯುತವಾದ ಬೇಡಿಕೆಯಾದ ವೇತನ ಪರಿಷ್ಕರಣೆಗೆ ಸಂಬಂಧಿಸಿದ ಮಧ್ಯಂತರ ವರದಿಯನ್ನು 7ನೇ ವೇತನ ಆಯೋಗದಿಂದ ಶೀಘ್ರವಾಗಿ ಪಡೆದು ದಿನಾಂಕ 01–07–2022 ರಿಂದ ಜಾರಿಗೆ ಬರುವಂತೆ ಶೇ.40ರಷ್ಟು ವೇತನ ಹೆಚ್ಚಳ ಸೌಲಭ್ಯವನ್ನು ಸರ್ಕಾರಿ ಆದೇಶ ಹೊರಡಿಸುವ ಮೂಲಕ ಅನುಷ್ಠಾನಗೊಳಿಸುವುದು. ಇಲ್ಲದಿದ್ದರೆ ರಾಜ್ಯ ಸಂಘದ ಆದೇಶದಂತೆ ಮುಷ್ಕರವನ್ನು ಮುಂದುವರೆಸಲಾಗುವುದು ಎಂದು ಜಿಲ್ಲಾಧ್ಯಕ್ಷ ಚಂದ್ರಶೇಖರ್ ತಿಳಿಸಿದರು.

ಚಾಮರಾಜನಗರ ಜಿಲ್ಲೆ ಎಲ್ಲಾ ಸರ್ಕಾರಿ ಇಲಾಖೆಯ ನೌಕರರು ಮುಷ್ಕರದಲ್ಲಿ ಭಾಗಿಯಾಗಿದ್ದರು. ಸರ್ಕಾರಿ ಇಲಾಖೆಗಳಲ್ಲಿ ನೌಕರರು ಕೆಲಸ ಮಾಡದೇ ಹೊರಗುಳಿದಿದ್ದರು.

ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಖಜಾಂಚಿ ಮಹದೇವಯ್ಯ, ರಾಜ್ಯ ಪರಿಷತ್ ಸದಸ್ಯ ಮಲ್ಲಿಕಾರ್ಜುನ್ ಕುಂಟೋಜಿ, ಗೌರವಾಧ್ಯಕ್ಷ ಶಿವಮೂರ್ತಿ, ಸದಸ್ಯರಾದ ಸಿದ್ದರಾಜು, ಮಲ್ಲಿಕಾರ್ಜುನ್, ಕೃಷ್ಣಮೂರ್ತಿ, ಶೈಲೇಂದ್ರ, ಯೋಗೇಶ್‌ಗೌಡ, ಸೈಮನ್ ಹಾಗೂ ಸಂಘದ ಪದಾಧಿಕಾರಿಗಳು ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಾದಪ್ಪ, ಮಹದೇವಸ್ವಾಮಿ, ಕೃಷ್ಣಮೂರ್ತಿ, ಎಂ.ಡಿ.ಮಹದೇವಯ್ಯ, ರಾಮಸ್ವಾಮಿ ಹಾಜರಿದ್ದರು.

ಇಂದು ಚಾಮರಾಜನಗರ ತಾಲೂಕು 7ನೇ ಕನ್ನಡ ಸಾಹಿತ್ಯ ಸಮ್ಮೇಳನ

ಚಾಮರಾಜನಗರ, ಮಾ.1– ಚಾಮರಾಜನಗರ ತಾಲೂಕು 7ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಾ.2ರಂದು ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಮಾ.2ರಂದು ಬೆಳಿಗ್ಗೆ 8.30 ಗಂಟೆಗೆ ತಹಶೀಲ್ದಾರ್ ಐ.ಇ. ಬಸವರಾಜು ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸುವರು. ವೃತ್ತ ನಿರೀಕ್ಷಕರಾದ ಶ್ರೀಕಾಂತ್ ಅವರು ನಾಡಧ್ವಜ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸುರೇಶ್ ಎನ್. ಋಗ್ವೇದಿ ಅವರು ಪರಿಷತ್ತಿನ ಧ್ವಜಾರೋಹಣ ನೆರವೇರಿಸುವರು.

ಬೆಳಿಗ್ಗೆ 10 ಗಂಟೆಗೆ ಸಮ್ಮೇಳನಾಧ್ಯಕ್ಷರಾದ ಕೊತ್ತಲವಾಡಿ ಶಿವಕುಮಾರ್ ಅವರನ್ನು ಪೇಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಿಂದ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದವರೆಗೆ ಕಲಾತಂಡಗಳ ಭವ್ಯ ಮೆರವಣಿಗೆಯಲ್ಲಿ ಕರೆತರಲಾಗುವುದು.

ಮೆರವಣಿಗೆಯನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ ಅವರು ಉದ್ಘಾಟಿಸುವರು. ತಾಪಂ ಇಓ ಪೂರ್ಣಿಮಾ, ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಣ್ಣೇಗೌಡ, ನಗರಸಭೆ ಆಯುಕ್ತ ಎಸ್.ವಿ. ರಾಮದಾಸ್, ವೃತ್ತ ನಿರೀಕ್ಷಕ ಮಂಜಪ್ಪ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಪ್ರಾಚಾರ್ಯ ಡಾ. ವೆಂಕಟೇಶ್, ಕೊಳ್ಳೇಗಾಲ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಗರಾಜು ಕೊಂಗರಹಳ್ಳಿ, ಯಳಂದೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಯರಿಯೂರು ನಾಗೇಂದ್ರ ಅತಿಥಿಗಳಾಗಿ ಭಾಗವಹಿಸುವರು.

ಒಂದನೇ ಪುಟದಿಂದ

ರಾಜ್ಯ ಸರ್ಕಾರಿ ನೌಕರರ ಮುಷ್ಕರ ಅಂತ್ಯ

ಮಾತನಾಡಿ, ಮಧ್ಯಂತರ ಪರಿಹಾರ ಹಾಗೂ ಹಳೆಯ ಪಿಂಚಣಿ ಪದ್ಧತಿ ಮರು ಜಾರಿ ಕುರಿತು ಅಧ್ಯಯನಕ್ಕೆ ಉನ್ನತ ಮಟ್ಟದ ಸಮಿತಿ ನೇಮಿಸಲು ಸರ್ಕಾರ ಆದೇಶ ಹೊರಡಿಸಿರುವುದರಿಂದ ಮುಷ್ಕರ ಅಂತ್ಯಗೊಳಿಸಿದ್ದೇವೆ ಎಂದು ಪ್ರಕಟಿಸಿದರು.

ಶೇಕಡ 40ರಷ್ಟು ವೇತನ ಹೆಚ್ಚಳ ಸೇರಿದಂತೆ ಎಲ್ಲಾ ಬೇಡಿಕೆಗಳು ಈಡೇರಬೇಕು. ಈಗ ತಾತ್ಕಾಲಿಕವಾಗಿ ಮುಷ್ಕರ ಸ್ಥಗಿತವಾಗಿದೆ. ಮುಂದಿನ ದಿನಗಳಲ್ಲಿ ಬೇಡಿಕೆ ಈಡೇರದಿದ್ದರೆ, ಮತ್ತೆ ಹೋರಾಟ ಆರಂಭಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮೈಸೂರಲ್ಲೂ ಸರ್ಕಾರಿ ನೌಕರರು ದಿಲ್‌ಖುಷ್

ಸೂಚನೆ ಮೇರೆಗೆ ಎಲ್ಲಾ ನೌಕರರು ಮುಷ್ಕರ ಹಿಂಪಡೆದಿದ್ದಾರೆ ಎಂದರು. ಸರ್ಕಾರಿ ನೌಕರರ ಮುಷ್ಕರದ ಹಿನ್ನೆಲೆಯಲ್ಲಿ ಇಂದು ಮಧ್ಯಾಹ್ನದವರೆಗೆ ಮೈಸೂರಿನ ಕೆ.ಆರ್., ಚೆಲುವಾಂಬ, ಪಿಕೆಟಿಬಿ, ಜಿಲ್ಲಾಸ್ಪತ್ರೆ, ಜಿಲ್ಲಾದ್ಯಂತ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ತಾಲೂಕು ಆಸ್ಪತ್ರೆಗಳು ಹಾಗೂ ಹೆರಿಗೆ ಆಸ್ಪತ್ರೆಗಳಲ್ಲಿ ಹೊರ ರೋಗಿ ವಿಭಾಗವನ್ನು ಬಂದ್ ಮಾಡಿದ್ದರಿಂದ ರೋಗಿಗಳು ತೊಂದರೆ ಅನುಭವಿಸಬೇಕಾಯಿತು. ಒಳ ರೋಗಿ ವಿಭಾಗ, ತುರ್ತು ವೈದ್ಯಕೀಯ ಸೇವೆ ಲಭ್ಯವಿದ್ದವು.

ಸಚಿವಾಲಯ ಸಿಬ್ಬಂದಿ ಅಪಸ್ವರ

ನಾವು ಈ ಆದೇಶವನ್ನು ಒಪ್ಪಲು ಸಾಧ್ಯವಿಲ್ಲ. ನಾಳೆ ನಾವು ಕರ್ತವ್ಯಕ್ಕೆ ಹಾಜರಾಗುವುದಿಲ್ಲ. ರಾಜ್ಯ ಸರ್ಕಾರಿ ನೌಕರರು ನೂರಕ್ಕೆ ನೂರರಷ್ಟು ಮೋಸಹೋಗಿದ್ದೇವೆ. ಶೇಕಡಾ 17ರಷ್ಟು ಮಧ್ಯಂತರ ವೇತನ ಹೆಚ್ಚಳವನ್ನು ಏಪ್ರಿಲ್‌ನಿಂದ ಹೆಚ್ಚಿಸುತ್ತೇವೆ ಎನ್ನುವುದು ಮೂಗಿಗೆ ತುಪ್ಪ ಸವರಿದಂತೆ. ಇದನ್ನು ವಿಧಾನಸಭೆ, ವಿಧಾನಪರಿಷತ್, ಸಚಿವಾಲಯ ಸಿಬ್ಬಂದಿ ಒಪ್ಪಲು ಸಾಧ್ಯವಿಲ್ಲ ಎಂದಿದ್ದಾರೆ. ಸರ್ಕಾರದ ಮುಂದೆ ವೇತನ ಹೆಚ್ಚಳಕ್ಕಿಂತ ಒಪಿಎಸ್ ಜಾರಿ ನಮ್ಮ ಮುಖ್ಯ ಬೇಡಿಕೆಯಾಗಿತ್ತು. ನೂತನ ಪಿಂಚಣಿ ಸರ್ಕಾರಿ ನೌಕರರಿಗೆ ಮಾರಕವಾಗಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿರುವ ನೌಕರರ ಸಂಘ ಅಧ್ಯಕ್ಷ ಷಡಕ್ಷರಿ, ಗುರುಸ್ವಾಮಿ ಸಚಿವಾಲಯ ನೌಕರರ ಸಂಘದ ಅಧ್ಯಕ್ಷರಲ್ಲ, ಅವರು ಹಂಗಾಮಿ ಅಧ್ಯಕ್ಷರಷ್ಟೆ ಎಂದರು. ರಾಜ್ಯ ಸರ್ಕಾರಿ ನೌಕರರಿಗೆ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಮೂಲ ವೇತನದ ಶೇ.17ರಷ್ಟು ಮಧ್ಯಂತರ ಪರಿಹಾರವನ್ನು ಮಂಜೂರು ಮಾಡಿ ರಾಜ್ಯ ಸರ್ಕಾರ ಅಧಿಕೃತವಾಗಿ ಆದೇಶ ಹೊರಡಿಸಿದೆ. ಅದರಂತೆ ನಿಮ್ಮ ಮೂಲ ವೇತನ, ಪ್ರಸ್ತುತ ತುಟ್ಟಿ ಭತ್ಯೆ ಸೇರಿ ಶೇ.17ರಷ್ಟು ಮಧ್ಯಂತರ ಪರಿಹಾರ ಸಿಗಲಿದೆ.

ವಾಣಿಜ್ಯ 360 ರೂ. ಹೆಚ್ಚಳ

ಎಳೆದಂತಾಗಿದೆ. ಭಾರತದಲ್ಲಿ LPG ಬೆಲೆಯನ್ನು ಸರ್ಕಾರಿ–ಚಾಲಿತ ತೈಲ ಕಂಪನಿಗಳು ಮಾಸಿಕ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ಮತ್ತು ಬದಲಾವಣೆಗೆ ಒಳಪಟ್ಟಿರುತ್ತದೆ. 2014 ರಲ್ಲಿ 19 ಕೆಜಿ ತೂಕದ ಪ್ರತಿ ಸಿಲಿಂಡರ್‌ಗೆ 350 ರೂಪಾಯಿಗಳಷ್ಟು ಹೆಚ್ಚಿಸಿದ ನಂತರ ಇದು ಎರಡನೇ ಅತಿದೊಡ್ಡ ಒಂದೇ ಬಾರಿ ಬೆಲೆ ಏರಿಕೆಯಾಗಿದೆ. ಜೂನ್ 2022 ರಿಂದ ಮೊದಲ ಬಾರಿಗೆ ವಾಣಿಜ್ಯ ಎಲ್‌ಪಿಜಿ ಪ್ರತಿ ಸಿಲಿಂಡರ್ ಬೆಲೆ ಹೆಚ್ಚಳವಾಗುತ್ತಿದೆ.

ತೂಕದ ಆಧಾರದ ಮೇಲೆ ಪರಿಷ್ಕೃತ ಬೆಲೆಗಳು: 19–ಕೆಜಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಶೇಕಡಾ 19.8 ರಷ್ಟು ಏರಿಕೆ, 14.2–ಕೆಜಿ ಎಲ್‌ಪಿಜಿ ಸಿಲಿಂಡರ್ ಬೆಲೆ ಶೇಕಡಾ 4.7 ರಷ್ಟು ಏರಿಕೆಯಾಗಿದೆ **ರಾಜ್ಯದಿಂದ ರಾಜ್ಯಕ್ಕೆ ಬೆಲೆಯಲ್ಲಿ ವ್ಯತ್ಯಾಸ:** ಸ್ಥಳೀಯ ತೆರಿಗೆಗಳಿಂದಾಗಿ ದೇಶೀಯ ಅಡುಗೆ ಅನಿಲದ ಬೆಲೆಗಳು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಬದಲಾಗುತ್ತವೆ. ಇಂಧನ ಚಿಲ್ಲರೆ ವ್ಯಾಪಾರಿಗಳು ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು ಪ್ರತಿ ತಿಂಗಳ ಆರಂಭದಲ್ಲಿ ಪರಿಷ್ಕರಿಸುತ್ತಾರೆ. ಪ್ರತಿ ಕುಟುಂಬವು ಒಂದು ವರ್ಷದಲ್ಲಿ ಸಬ್ಸಿಡಿ ದರದಲ್ಲಿ ತಲಾ 14.2 ಕೆಜಿಯ 12 ಸಿಲಿಂಡರ್‌ಗಳಿಗೆ ಅರ್ಹವಾಗಿರುತ್ತಾರೆ.ಅದರಾಚೆಗೆ ಗ್ರಾಹಕರು ಎಲ್‌ಪಿಜಿ ಸಿಲಿಂಡರ್‌ಗಳ ಯಾವುದೇ ಹೆಚ್ಚುವರಿ ಖರೀದಿಗಳನ್ನು ಮಾರುಕಟ್ಟೆ ಬೆಲೆಗೆ ಖರೀದಿಸಬೇಕಾಗುತ್ತದೆ. ಪಹಲ್ (ಎಲ್‌ಪಿಜಿ ನೇರ ಲಾಭ ವರ್ಗಾವಣೆ) ಯೋಜನೆಯಡಿ, ಗ್ರಾಹಕರು ಸಬ್ಸಿಡಿ ದರದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪಡೆಯುತ್ತಾರೆ. ಸಬ್ಸಿಡಿಯು ವಿದೇಶಿ ವಿನಿಮಯ ದರಗಳು, ಕಚ್ಚಾ ತೈಲ ಬೆಲೆಗಳಂತಹ ಹಲವಾರು ಅಂಶಗಳನ್ನು ಅವಲಂಬಿಸಿರುತ್ತದೆ.

ಮಾ.12ರಂದು ಮೋದಿ ಉದ್ಘಾಟನೆ

ಹೆದ್ದಾರಿಯನ್ನು ಉದ್ಘಾಟಿಸಲಿದ್ದಾರೆ. ಅದಕ್ಕಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಉದ್ಘಾಟನೆಯ ವೇಳೆ ಎಸ್‌ಪಿಜಿ ಅನುಮತಿ ನೀಡಿದರೆ 2 ಕಿ.ಮೀ. ರೋಡ್ ಶೋ ನಡೆಸಲು ಉದ್ದೇಶಿಸಲಾಗಿದೆ. ಬಳಿಕ ಮದ್ದೂರಿನ ಗೆಜ್ಜಲಗೆರೆಯಲ್ಲಿ ಸಾರ್ವಜನಿಕ ಸಭೆ ಆಯೋಜಿಸಲಾಗಿದೆ ಎಂದರು. ಸರ್ವೀಸ್ ರಸ್ತೆ ಕೆಲವು ಕಡೆ ಪೂರ್ಣಗೊಂಡಿಲ್ಲ. ಅದನ್ನು ಪೂರ್ಣಗೊಳಿಸಲು ನ್ಯಾಯಾಲಯದಲ್ಲಿ ಜಮೀನು ಕುರಿತ ಪ್ರಕರಣವಿದೆ. ಅವು ಇನ್ನು ಇತ್ಯರ್ಥವಾಗಿಲ್ಲ. ಅದು ತೀರ್ಮಾನವಾದ ಬಳಿಕವೇ ಸರ್ವಿಸ್ ರಸ್ತೆ ಕಾಮಗಾರಿ ಆರಂಭಿಸಲಾಗುವುದು. ಟೋಲ್ ಸಂಗ್ರಹವನ್ನು ಮಾ.14ರವರೆಗೆ ಮುಂದೂಡಿದ್ದೇವೆ ಎಂದು ಅವರು ಹೇಳಿದರು.

ಸರ್ವಿಸ್ ರಸ್ತೆ ಇಲ್ಲದೆ ಟೋಲ್ ಸಂಗ್ರಹಿಸಿದರು: ಬೆಂಗಳೂರು – ನಿಡಘಟ್ಟದವರೆಗೂ ಸದ್ಯಕ್ಕೆ ಟೋಲ್ ಸಂಗ್ರಹಿಸಲಾಗುವುದು. ಕಾಂಗ್ರೆಸ್ ಸರ್ಕಾರದ ಕಾಲದಲ್ಲಿ ಆದ ಮೈಸೂರು – ಊಟಿ ಹೈವೇ ರಸ್ತೆಗೆ ಸರ್ವಿಸ್ ರಸ್ತೆಯೇ ಇಲ್ಲ. ಈಗ ಇವರೆಲ್ಲಾ ಬೆಂಗಳೂರು – ಮೈಸೂರು ಹೈವೆ ಸರ್ವಿಸ್ ರಸ್ತೆ ಬಗ್ಗೆ ಮಾತಾಡುತ್ತಿದ್ದಾರೆ. ನಾವು ಸರ್ವಿಸ್ ರಸ್ತೆಯನ್ನು ವ್ಯವಸ್ಥಿತವಾಗಿ ಮಾಡುತ್ತಿದ್ದೇವೆ. ಸರ್ವಿಸ್ ರಸ್ತೆಯನ್ನೇ ಮಾಡದೆ ನೀವು ಟೋಲ್ ಸಂಗ್ರಹ ಹೇಗೆ ಆರಂಭಿಸಿದ್ದೀರಿ ಎಂದು ಕಾಂಗ್ರೆಸ್ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರನ್ನು ಕೇಳಿ ಎಂದರು.

ವಿಜಯ ಸಂಕಲ್ಪ ಯಾತ್ರೆಗೆ ಚಾಲನೆ

ಚಾಲನೆ ನೀಡಲಾಯಿತು. ರಥಯಾತ್ರೆಗೆ ಚಾಲನೆ ನೀಡಿದ ಬಳಿಕ ಜೆ.ಪಿ. ನಡ್ಡಾ ಅವರು ಮಹದೇಶ್ವರಬೆಟ್ಟದ ರಂಗಮಂದಿರದಲ್ಲಿ ಬುಡಕಟ್ಟು ಸಮುದಾಯಗಳಾದ ಬೇಡಗಂಪಣ ಹಾಗೂ ಸೋಲಿಗರೊಂದಿಗೆ ಸಂವಾದ ನಡೆಸಿದರು.

ಸಂವಾದದ ಬಳಿಕ ವೇದಿಕೆಯಲ್ಲಿ ನಡ್ಡಾ ಮಾತನಾಡಿ, ಮಲೆ ಮಹದೇಶ್ವರನ ದರ್ಶನ ಸ್ವಾಮಿಯನ್ನು ನೋಡುವ ಭಾಗ್ಯ ಹಾಗೂ ಆಶೀರ್ವಾದ ಪಡೆಯುವ ಸೌಭಾಗ್ಯ ದೊರೆತಿದೆ. ಹಾಗೆಯೇ ನಿಮ್ಮನ್ನು ನೋಡುವ ಭಾಗ್ಯವೂ ನನ್ನದಾಗಿದೆ. ಈ ಪವಿತ್ರ ಭೂಮಿಯಿಂದ ಮಲೆ ಮಹದೇಶ್ವರ ಸ್ವಾಮಿಯ ಆಶೀರ್ವಾದ ಪಡೆದು ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಆರಂಭವಾಗಿದೆ ಎಂದರು. ರಾಜ್ಯದ ನಾಲ್ಕು ಕಡೆಗಳಿಂದ ವಿಜಯ ಸಂಕಲ್ಪ ಯಾತ್ರೆ ಆರಂಭವಾಗುತ್ತಿದೆ. 224 ವಿಧಾನಸಭಾ ಕ್ಷೇತ್ರಗಳಲ್ಲೂ ಈ ಯಾತ್ರೆ ಸಾಗಲಿದೆ. 75 ಸಾರ್ವಜನಿಕ ಸಭೆಗಳು, 150ಕ್ಕೂ ಹೆಚ್ಚು ರೋಡ್ ಶೋಗಳನ್ನು ನಡೆಸಲಿದೆ. ಬೆಳಗಾವಿಯಲ್ಲಿ ದೇಶದ ರಕ್ಷಣಾ ಸಚಿವರಾದ ರಾಜನಾಥ ಸಿಂಗ್ ಹಾಗೂ ಇನ್ನೆರಡು ಕಡೆ ದೇಶದ ಗೃಹ ಸಚಿವ ಅಮಿತ್ ಷಾ ಅವರು ಯಾತ್ರೆಗೆ ಚಾಲನೆ ನೀಡಲಿದ್ದಾರೆ ಎಂದು ಹೇಳಿದರು. ನಮಗೆ ವಿಶ್ವಾಸವಿದೆ, ಕರ್ನಾಟಕದ ಜನತೆ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ದೇಶವು ಅತ್ಯಂತ ವೇಗದಲ್ಲಿ ಅಭಿವೃದ್ಧಿ ಸಾಧಿಸುತ್ತಿದೆ. ಕಾಂಗ್ರೆಸ್ ಪಕ್ಷವು ಜಾತಿವಾದ, ಕುಟುಂಬವಾದಗಳಿಂದ ಒಡೆದು ಆಳುತ್ತಿತ್ತು. ಇಂದು ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಲ್ಲರ ವಿಶ್ವಾಸ ಪಡೆದು ಎಲ್ಲರ ಭಾರತವನ್ನು ಅಭಿವೃದ್ಧಿಪಥದತ್ತ ಕೊಂಡೊಯ್ಯಲಾಗುತ್ತಿದೆ. ಜಗತ್ತಿನ ಅಗ್ರಮಾನ್ಯ ದೇಶವಾಗುವತ್ತ ಭಾರತ ಮುನ್ನಡೆಯುತ್ತಿದೆ ಎಂದರು.

ನರೇಂದ್ರಮೋದಿಯವರು ಪ್ರಧಾನಿಯಾಗುವ ಮೊದಲು ಜಗತ್ತಿನಲ್ಲಿ 10ನೇ ಸ್ಥಾನದಲ್ಲಿದ್ದ ಭಾರತ, ಈಗ 5ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ಆಟೋ ಮೊಬೈಲ್, ಮೊಬೈಲ್, ಕೈಗಾರಿಕಾ ಮತ್ತಿತರ ಕ್ಷೇತ್ರಗಳಲ್ಲಿ ದೇಶ ಪ್ರಗತಿ ಸಾಧಿಸಿದೆ. ನಮ್ಮನ್ನು ಆಳಿದ ಬ್ರಿಟಿಷ್ ಸರ್ಕಾರವನ್ನು ಹಿಂದಿಕ್ಕಿ ಭಾರತ ಮುನ್ನಡೆಯುತ್ತಿದೆ ಎಂದು ಬಣ್ಣಿಸಿದರು. ಇಲ್ಲಿರುವ ಸೋದರಿಯರ ಮಾತನ್ನು ಆಲಿಸಿದ್ದೇನೆ. ನಾನು ಇಲ್ಲಿ ಕೇವಲ ಸಂವಾದ ಮಾಡಲು ಮಾತ್ರ ಬಂದಿಲ್ಲ. ಈ ಪ್ರದೇಶದ ಚಿತ್ರಣವನ್ನು ಬದಲು ಮಾಡುವ ಸಂಕಲ್ಪದೊಂದಿಗೆ ಬಂದಿದ್ದೇನೆ. ಅದನ್ನು ಮಾಡಿಯೇ ಸಿದ್ಧ ಎಂಬ ಆಶ್ವಾಸನೆ ನೀಡುವೆ ಎಂದರು. ಭಾರತದ ರಾಷ್ಟ್ರಪತಿಯಾಗಿ ಓರ್ವ ವನವಾಸಿ ಬುಡಕಟ್ಟು ಮಹಿಳೆ ಆಯ್ಕೆಯಾಗಲು, ಈ ದೇಶದ ಅತ್ಯುನ್ನತ ಸ್ಥಾನಕ್ಕೆ ಬರಲು ನರೇಂದ್ರ ಮೋದಿಯವರು ಕಾರಣ. ದೇಶದ ಪ್ರತಿಯೊಂದು ಸಮುದಾಯಕ್ಕೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದಲ್ಲ ಒಂದು ಯೋಜನೆಗಳನ್ನು ನೀಡುತ್ತಿದೆ ಎಂದರು. ವನವಾಸಿ, ಬುಡಕಟ್ಟು ಜನರು, ಪ.ಜಾತಿ, ಪ.ಪಂಗಡ, ಯುವಕರು, ಮಹಿಳೆಯರು ಹಿಂದುಳಿದ ವರ್ಗ ಎಲ್ಲರ ಬಾಳಿನಲ್ಲಿ ಬೆಳಕಾಗುವ ರೀತಿಯಲ್ಲಿ ಸರ್ಕಾರ ಕೆಲಸ ಮಾಡುತ್ತಿವೆ. ವನವಾಸಿ ಜನರಿಗೆ ವಿಶೇಷ ಸ್ಥಾನ ಮಾನವನ್ನು ನರೇಂದ್ರ ಮೋದಿಯವರ ಸರ್ಕಾರ ನೀಡಿದೆ ಎಂದು ಹೇಳಿದರು. ನವೆಂಬರ್ 15ರಂದು ಬಿರ್ಸಾ ಮುಂಡಾ ಜಯಂತಿ ರಾಷ್ಟ್ರೀಯ ಆದಿವಾಸಿ ದಿನವನ್ನಾಗಿ ಮೋದಿ ಸರ್ಕಾರ ಘೋಷಿಸಿದೆ. ಇದು ಬುಡಕಟ್ಟು ಜನರ ಬಗ್ಗೆ ನಮ್ಮ ಸರ್ಕಾರಕ್ಕಿರುವ ಬದ್ಧತೆಯನ್ನು ತೋರಿಸುತ್ತದೆ ಎಂದು ನಡ್ಡಾ ಹೇಳಿದರು.

ಸೂರ್ಯ, ಚಂದ್ರರಷ್ಟೇ ಸತ್ಯ: ಬಿಎಸ್‌ವೈ

140 ಸೀಟುಗಳನ್ನು ಗೆದ್ದು ಬಿಜೆಪಿಯನ್ನು ಅಧಿಕಾರಕ್ಕೆ ತರುವ ಸಂಕಲ್ಪ ಮಾಡಿದ್ದೇನೆ ಎಂದರು.

ಮಲೆ ಮಹದೇಶ್ವರ ಆಶೀರ್ವಾದ ಪಡೆದು, ನಮ್ಮ ಕಾರ್ಯಕ್ರಮಗಳು ಆರಂಭವಾಗುತ್ತಿವೆ. ಜೆ.ಪಿ. ನಡ್ಡಾಜಿ ಬಂದಿರುವುದು ನಮಗೆಲ್ಲ ಸಂಭ್ರಮ ತಂದಿದೆ. ಈ ವಿಜಯ ಸಂಕಲ್ಪ ಯಾತ್ರೆ ಮಾ. 20ರವರೆಗೆ ನಡೆಯಲಿದೆ ಎಂದರು. ಯಾತ್ರೆ 224 ವಿಧಾನಸಭಾ ಕ್ಷೇತ್ರಗಳಿಗೂ ಸಂಚರಿಸಲಿದೆ. 8 ಸಾವಿರ ಕಿ.ಮೀನಷ್ಟು ದೂರ ರಥಯಾತ್ರೆ ನಡೆಯಲಿದ್ದು, 4 ರಥಗಳು ಯಾತ್ರೆಯಲ್ಲಿ ಸಂಚರಿಸಲಿವೆ. ರಾಜ್ಯದಲ್ಲಿ ಬಿಜೆಪಿ ಶಕ್ತಿ ಮೀರಿ ಪ್ರಾಮಾಣಿಕವಾಗಿ ಕೆಲಸ ಮಾಡಿದೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಬಡವರ ಮನೆಯಲ್ಲಿ ಹುಟ್ಟಿದ ಹೆಣ್ಣು ಮಕ್ಕಳಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಭಾಗ್ಯಲಕ್ಷ್ಮಿ ಯೋಜನೆ ಜಾರಿಗೊಳಿಸಿದ್ದೇನೆ. 72 ಲಕ್ಷ ಫಲಾನುಭವಿಗಳಿಗೆ ಇದರ ಪ್ರಯೋಜನ ದೊರೆಯಲಿದೆ ಎಂದರು. ಅನೇಕ ಅಭಿವೃದ್ಧಿ ಕಾರ್ಯಗಳನ್ನು ಪ್ರಧಾನಿಯವರು ಮಹಿಳೆಯರಿಗಾಗಿ ನೀಡಿದ್ದಾರೆ. ಮಹಿಳಾ ಸ್ವಸಹಾಯ ಸಂಘಗಳಿಗೆ ಹಣವನ್ನು ಕೊಡಲಾಗುತ್ತಿದೆ. ಅದನ್ನು ಸದುಪಯೋಗ ಮಾಡಿಕೊಂಡು ನಿಮ್ಮ ಕಾಲಮೇಲೆ ನಿಲ್ಲಬೇಕು ಎಂದು ಅವರು ಸಲಹೆ ಹೇಳಿದರು.

ಸಮೀಕ್ಷೆ ವೇಳೆ ಬಂಡೀಪುರ ಅರಣ್ಯದಲ್ಲಿ 246, ನಾಗರಹೊಳೆಯಲ್ಲಿ 104 ರಣಹದ್ದು ಪತ್ತೆ









ಸಮೀಕ್ಷೆಯಲ್ಲಿ ಕಂಡು ಬಂದ ರಣಹದ್ದುಗಳು

ಮೈಸೂರು, ಮಾ.1(ಎಂಟಿವೈ)– ಅಳಿವಿನಂಚಿನಲ್ಲಿರುವ ರಣಹದ್ದು ಸಂತತಿ ಉಳಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಹಲವು ಕ್ರಮ ಕೈಗೊಂಡಿದ್ದು, ಅದರ ಒಂದು ಭಾಗವಾಗಿ ಬಂಡೀಪುರ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಡೆಸಿದ ಎರಡು ದಿನಗಳ ರಣಹದ್ದುಗಳ ಸಮೀಕ್ಷೆಯಲ್ಲಿ ನಾಲ್ಕು ತಳಿಯ ರಣಹದ್ದುಗಳು ಪತ್ತೆಯಾಗಿರುವುದು ಸಮಾಧಾನ ತಂದಿದೆ.

ಅರಣ್ಯ ಪ್ರದೇಶಗಳಲ್ಲಿ ರಣಹದ್ದಿನ ಸಂತತಿಯ ನೈಜ ಸ್ಥಿತಿ ಅವಲೋಕಿಸುವ ನಿಟ್ಟಿನಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಬಂಡೀಪುರ ಅರಣ್ಯದಲ್ಲಿ ಬಿಳಿಬೆನ್ನಿನ ರಣಹದ್ದು, ಭಾರತದ ರಣಹದ್ದು, ಕೆಂಪು ತಲೆಯ ರಣಹದ್ದು ತಳಿಯ 246 ರಣಹದ್ದುಗಳು ಕಂಡು ಬಂದಿವೆ. ರಾಜ್ಯದ ಪ್ರಮುಖ ಹುಲಿ ಸಂರಕ್ಷಿತ ಪ್ರದೇಶಗಳಾದ ಬಂಡೀಪುರ, ನಾಗರಹೊಳೆಯಲ್ಲಿ ರಣಹದ್ದುಗಳ ಸಮೀಕ್ಷೆ ಯಶಸ್ವಿಯಾಗಿ ಮುಗಿದಿದ್ದು, ಬಂಡೀಪುರದಲ್ಲಿ 246, ನಾಗರಹೊಳೆಯಲ್ಲಿ ಬಿಳಿ ಬೆನ್ನಿನ ರಣಹದ್ದು, ಭಾರತೀಯ ರಣಹದ್ದು, ಕೆಂಪು ತಲೆಯ ರಣಹದ್ದು, ಈಜಿಪ್ಟಿಯನ್ ರಣಹದ್ದು ತಳಿಯ 104 ರಣಹದ್ದುಗಳು ಕಂಡು ಬಂದಿವೆ. ಸಮೀಕ್ಷೆಯಲ್ಲಿ ಇಷ್ಟು ರಣಹದ್ದುಗಳು ಕಂಡು ಬಂದಿರುವುದು ಆಶಾಭಾವ ಮೂಡಿಸಿದೆ ಇನ್ನಷ್ಟು ಕಟ್ಟುನಿಟ್ಟಿನ ಕ್ರಮ ಕೈಗೊಂಡರೆ, ರಣಹದ್ದು ಸಂತತಿ ಉಳಿಸುವುದು ಸಾಧ್ಯವಾಗಲಿದೆ ಎಂಬುದು ತಜ್ಞರ ಅಭಿಪ್ರಾಯ.

ನಾಗರಹೊಳೆಯಲ್ಲಿ: ವೈಲ್ಡ್ ಲೈಫ್ ಕನ್ಸರ್ವೇಷನ್ ಫೌಂಡೇಷನ್ ನೆರವಿನೊಂದಿಗೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವಿವಿಧ ವಲಯಗಳಲ್ಲಿ ನಡೆಸಿದ ರಣಹದ್ದು ಸಮೀಕ್ಷೆಯಲ್ಲಿ ಬಿಳಿ ಬೆನ್ನಿನ ರಣಹದ್ದು 61, ಭಾರತೀಯ ರಣಹದ್ದು 13, ಕೆಂಪು ತಲೆಯ ರಣಹದ್ದು 30 ಸೇರಿದಂತೆ ಒಟ್ಟು 104 ರಣಹದ್ದುಗಳು ಕಂಡು ಬಂದಿವೆ. ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಸ್ವಯಂಸೇವಕರಿಗೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ ಚಿಕ್ಕನರಗುಂದ ಪ್ರಮಾಣ ಪತ್ರ ವಿತರಿಸಿ ಶ್ಲಾಘಿಸಿದ್ದಾರೆ.

ಬಂಡೀಪುರದಲ್ಲಿ: ಬಂಡೀಪುರದಲ್ಲಿ ಭಾರತೀಯ ರಣಹದ್ದು–34, ಬಿಳಿ ಬೆನ್ನಿನ ರಣಹದ್ದು 168, ಕೆಂಪು ತಲೆಯ ರಣಹದ್ದು 43, ಈಜಿಪ್ಟಿಯನ್ ರಣಹದ್ದು 1 ಸೇರಿದಂತೆ 246 ಕಾಣಿಸಿಕೊಂಡಿವೆ. ಅರಣ್ಯ ಇಲಾಖೆಯ 80 ಸಿಬ್ಬಂದಿಯೊಂದಿಗೆ 32 ಪಕ್ಷಿ ತಜ್ಞರು ಹಾಗೂ ಸ್ವಯಂಸೇವಕರು ಈ ಸಮೀಕ್ಷೆಯಲ್ಲಿ ಪಾಲ್ಗೊಂಡು, ಗುರುತಿಸಲ್ಪಟ್ಟ 40 ಸ್ಥಳದಲ್ಲಿ ರಣಹದ್ದಿನ ಹುಡುಕಾಟ ನಡೆಸಿ, 246 ರಣಹದ್ದನ್ನು ಗುರುತಿಸಿ ದಾಖಲೀಕರಿಸಿದ್ದಾರೆ. ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಸ್ವಯಂ ಸೇವಕರಿಗೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ರಮೇಶ್‌ಕುಮಾರ್ ಪ್ರಮಾಣ ಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ಎಸಿಎಫ್‌ಗಳಾದ ನವೀನ್‌ಕುಮಾರ್, ರವೀಂದ್ರ, ಪರಮೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮುಂದಿನ ಪೀಳಿಗೆಗಾಗಿ ರಕ್ಷಣೆ...

ಅರಣ್ಯ ಪ್ರದೇಶಗಳ ಸ್ವಚ್ಛತೆಯಲ್ಲಿ ಪ್ರಮುಖ ಪಾತ್ರ ವಹಿಸುವ ರಣಹದ್ದುಗಳ ಸಂತತಿ ಅಪಾಯಕಾರಿ ಮಟ್ಟದಲ್ಲಿ ಕ್ಷೀಣಿಸಿದೆ. ಜಾನುವಾರುಗಳು ಅನಾರೋಗ್ಯ ಕ್ಕೀಡಾದಾಗ ನೀಡುತ್ತಿದ್ದ ಡೈಕ್ಲೋಫಿನಾಕ್ ಔಷಧವೇ ಇಂದು ರಣಹದ್ದು ಸಂತತಿ ಕ್ಷೀಣಿಸಲು ಪ್ರಮುಖ ಕಾರಣ. ಈ ಔಷಧಿ ನೀಡಲಾಗಿದ್ದ ಜಾನುವಾರುಗಳು ಮೃತಪಟ್ಟಾಗ, ಅವುಗಳನ್ನು ಭಕ್ಷಿಸುತ್ತಿದ್ದ ರಣಹದ್ದುಗಳು ಜೀವ ಕಳೆದುಕೊಂಡಿವೆ. ಬಂಡೀಪುರ, ನಾಗರಹೊಳೆ, ಮಧುಮಲೈ ಕೇರಳದ ವೈಯ್ನಾಡ್‌ನಲ್ಲಿನ ವನ್ಯಧಾಮದಲ್ಲಿ ಏಕಕಾಲದಲ್ಲಿ ರಣಹದ್ದು ಸಮೀಕ್ಷೆ ನಡೆಸಿರುವುದು ಉತ್ತಮ ಬೆಳವಣಿಗೆ. ಈ ಭಾಗದಲ್ಲಿ ಬಿಳಿ ಬೆನ್ನಿನ ರಣಹದ್ದು, ಭಾರತೀಯ ರಣಹದ್ದು, ಕೆಂಪು ತಲೆಯ ರಣಹದ್ದು, ಈಜಿಪ್ಟಿಯನ್ ರಣಹದ್ದು ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ನೀಲಗಿರಿ ಜೈವಿಕ ವಲಯವನ್ನು ರಣಹದ್ದು ವಲಯವೆಂದು ಘೋಷಿಸುವ ಮೂಲಕ ರಣಹದ್ದು ವಿಶೇಷ ಪಕ್ಷಿ ಸಂಕುಲವು ಮುಂದಿನ ಪೀಳಿಗೆಗೆ ಕೊಡುಗೆ ನೀಡಬೇಕು.

– ರಾಜಕುಮಾರ್ ದೇವರಾಜೇ ಅರಸ್, ವನ್ಯಜೀವಿ ತಜ್ಞ





ರಣಹದ್ದು ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ತಂಡಗಳಿವು

ಅಡುಗೆ ಅನಿಲ ದರ ಏರಿಕೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ



ಮೈಸೂರು,ಮಾ.1(ಎಂಟಿವೈ)– ಅಡುಗೆ ಅನಿಲ ಬೆಲೆ ಹೆಚ್ಚಳ ವಿರೋಧಿಸಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಬುಧವಾರ ಮಧ್ಯಾಹ್ನ ಖಾಲಿ ಸಿಲಿಂಡರ್ ಹಾಗೂ ಸೌದೆ ಒಲೆ ಪ್ರದರ್ಶಿಸುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರದ ಇಂತಹ ಜನವಿರೋಧಿ ನೀತಿಯಿಂದಾಗಿ ಬಡ ಹಾಗೂ ಮಧ್ಯಮ ವರ್ಗದ ಜನ ತತ್ತರಿಸಿದ್ದಾರೆ. ಪದೇ ಪದೆ ಅಡುಗೆ ಅನಿಲದ ಬೆಲೆ ಹೆಚ್ಚಿಸುವ ಮೂಲಕ ಬಡವರನ್ನು ಸಂಕಷ್ಟಕ್ಕೆ ದೂಡುತ್ತಿದ್ದಾರೆ. ದಿನ ಬಳಕೆ ವಸ್ತುಗಳ ಬೆಲೆಯೂ ಗಗನಕ್ಕೇರಿದ್ದು, ಜನ ಪರದಾಡುವಂತಾಗಿದೆ. ಈಗ ಅಡುಗೆ ಅನಿಲ ಬೆಲೆ ಹೆಚ್ಚಳ ಮಾಡಿ ಜೀವನ ಸಾಗಿಸುವುದು ದುಸ್ತರವಾಗಿಸಿದೆ ಎಂದು ಪ್ರತಿಭಟನಾಕಾರರು ದೂರಿದರು.

ಇದೇ ವೇಳೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮಾತನಾಡಿ, ಕೇಂದ್ರ ಸರ್ಕಾರ ಗೃಹ ಬಳಕೆ ಗ್ಯಾಸ್ ಸಿಲಿಂಡರ್ ಬೆಲೆ 50 ರೂ. ಹಾಗೂ ವಾಣಿಜ್ಯ ಸಿಲಿಂಡರ್ ಬೆಲೆಯನ್ನು 350 ರೂ. ಹೆಚ್ಚಳ ಮಾಡಿದೆ. ಬೇಸಿಗೆ ಆರಂಭದಲ್ಲೇ ದೇಶದ ಜನತೆಗೆ ಪ್ರಧಾನಿ ನರೇಂದ್ರ ಮೋದಿ ಮತ್ತೆ ಬೆಲೆ ಏರಿಕೆಯ ಬಿಸಿ ಮುಟ್ಟಿಸಿದ್ದಾರೆ. ಜನತೆಗೆ ಆರ್ಥಿಕ ಸಂಕಷ್ಟದ ದಾರಿ ತೋರಿಸಿದ್ದಾರೆ. ಇದು ನರೇಂದ್ರ ಮೋದಿ ಹಾಗೂ ಬೊಮ್ಮಾಯಿ ಅವರ ಬಜೆಟ್‌ನ ಮೊದಲ ಕೊಡುಗೆಯಾಗಿದೆ. ಇನ್ನೂ ಸಾಲು ಸಾಲು ಇಂತಹ ಬೆಲೆ ಏರಿಕೆ, ತೆರಿಗೆ ಭಾರದಿಂದ ನಾಗರಿಕರು ತತ್ತರಿಸಿ ಹೋಗಲಿದ್ದಾರೆ. ಮೋದಿಯವರು ಅಧಿಕಾರದುದ್ದಕ್ಕೂ ಅಚ್ಛೇ ದಿನ ಬರುತ್ತದೆ ಎಂದು ಹೇಳುತ್ತಲೇ ಬಂದಿದ್ದಾರೆ ಬೆಲೆ ಏರಿಕೆಯ ಬಿಸಿ ಮುಟ್ಟಿಸಿರುವುದು ಸಹ ಅಚ್ಛೇ ದಿನದ ಒಂದು ಭಾಗವಾಗಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಶ್ರೀಧರ್, ಪಾಲಿಕೆ ಸದಸ್ಯ ವಿ.ಲೋಕೇಶ್ ಪಿಯಾ, ಮಾಜಿ ಸದಸ್ಯ ಎಂ.ಸುನೀಲ್, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಮುಖಂಡರುಗಳಾದ ಭಾಸ್ಕರ್ ಎಲ್.ಗೌಡ, ಜೋಗಿ ಮಹೇಶ್, ಪ್ರತಿಧ್ವನಿ ಪ್ರಸಾದ್, ಬಸವರಾಜು (ಬಸಪ್ಪ), ರವಿಶಂಕರ್, ಪರಶಿವಮೂರ್ತಿ, ಸೆನೆಟ್ ಗೋಪಿನಾಥ್, ಸುಂದರ್, ಎಂ.ಕೆ.ಅಶೋಕ್, ನಾಗರತ್ನ ಮಂಜುನಾಥ್, ಕುಪ್ಪಮ್ಮ, ನಾಗೇಂದ್ರ, ಶಾದಿಖ್ ಉಲ್ಲಾ ರೆಹಮಾನ್, ನಾಸೀರ್, ಫಾರೂಖ್, ಗುಣಶೇಖರ್, ಪಾಪು(ಸುರೇಶ್), ಗೌತಮ್ ಬುದ್ಧ, ಶಂಕರ್, ಮಂಜು, ವಸಂತ್ ನಾಯಕ್, ಮಹದೇವಮ್ಮ, ಸಂತೋಷ್, ಆನಂದ್, ಡೈರಿ ವೆಂಕಟೇಶ್, ಸಿದ್ದಲಿಂಗಣ್ಣ, ಚಿಕ್ಕಲಿಂಗು, ದೀಪಕ್ ಪುಟ್ಟಸ್ವಾಮಿ, ಸುನೀಲ್ ನಾರಾಯಣ್ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರಿನ ಗಾಂಧಿನಗರದ ಮಾರುಕಟ್ಟೆ ಪುನರ್‌ನಿರ್ಮಾಣಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರು,ಮಾ.1(ಎಂಟಿವೈ)– ಕುಸಿದು ಬಿದ್ದಿರುವ ಗಾಂಧಿನಗರದ ಮಾರುಕಟ್ಟೆಯ ಪುನರ್ ನಿರ್ಮಾಣಕ್ಕೆ ಆಗ್ರಹಿಸಿ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ (ಎಸ್‌ಸಿ ಘಟಕ) ಸಮಿತಿ ಕಾರ್ಯಕರ್ತರು ಇಂದು ತಮಟೆ ಚಳವಳಿ ನಡೆಸಿದರು.

ಮೈಸೂರಿನ ಗಾಂಧಿನಗರದ ಮುಖ್ಯರಸ್ತೆಯಿಂದ ಡಾ.ಅಂಬೇಡ್ಕರ್ ವೃತ್ತ(ಎಫ್‌ಟಿಎಸ್) ದವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ನಂತರ ವೃತ್ತದಲ್ಲಿ ಧರಣಿ ನಡೆಸಿದರು. ಗಾಂಧಿನಗರದ ಮಾರುಕಟ್ಟೆ 50 ವರ್ಷಗಳ ಇತಿಹಾಸ ಹೊಂದಿದ್ದು, 15 ವರ್ಷಗಳಿಂದ ಶಿಥಿಲಾವಸ್ಥೆ ತಲುಪಿತ್ತು. ಇತ್ತೀಚೆಗೆ ಮೇಲ್ಛಾವಣಿ ಕುಸಿದು ಬಿದ್ದಿತ್ತು. ವ್ಯಾಪಾರಿಗಳು ಪ್ಲಾಸ್ಟಿಕ್ ಚೀಲ, ತೆಂಗಿನ ಗರಿಗಳಿಂದ ಸೂರು ಮಾಡಿಕೊಂಡು ವ್ಯಾಪಾರ ನಡೆಸುತ್ತಿದ್ದಾರೆ. ಮಾರುಕಟ್ಟೆ ಪುನರ್ ನಿರ್ಮಾಣಕ್ಕೆ ಪಾಲಿಕೆ ಮುಂಭಾಗ ಹಲವು ಬಾರಿ ಪ್ರತಿಭಟನೆ ಮಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕಿಡಿಕಾರಿದರು.

ಮಾರುಕಟ್ಟೆ ಗಾಂಧಿನಗರ, ಅಣ್ಣಮ್ಮ ಕೇರಿ, ಮೊಹಮ್ಮದ್ ಸೇಠ್ ಬ್ಲಾಕ್, ವೀರನಗೆರೆ, ಲೂರ್ದ್‌ನಗರ ನಿವಾಸಿಗಳಿಗೆ ಹತ್ತಿರವಾಗಿದ್ದು, ವ್ಯಾಪಾರಿಗಳು ಇದನ್ನೇ ನಂಬಿ ಬದುಕು ಕಟ್ಟಿಕೊಂಡಿದ್ದಾರೆ. ನಗರಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿ ಹಾಗೂ ಸದಸ್ಯ ರಫೀಕ್ ಅಹಮದ್ ಅವರ ಅಸಮರ್ಪಕ ಕಾರ್ಯನಿರ್ವಹಣೆಯಿಂದ ನೆನೆಗುದಿಗೆ ಬಿದ್ದಿದೆ. ಹೀಗಾಗಿ ಕೂಡಲೇ ಮಾರುಕಟ್ಟೆಯನ್ನು ಪುನರ್ ನಿರ್ಮಾಣ ಮಾಡಬೇಕು. ಅಂಬೇಡ್ಕರ್ ವೃತ್ತದ ಅಗಲೀಕರಣ ಮಾಡಬೇಕು. ಗಾಂಧಿನಗರದ ಆದಿ ಕರ್ನಾಟಕ ರುದ್ರಭೂಮಿಯನ್ನು ಅಭಿವೃದ್ಧಿಪಡಿಸಬೇಕೆಂದು ಒತ್ತಾಯಿಸಿದರು. ಬಳಿಕ ಮಹಾನಗರ ಪಾಲಿಕೆಯ ವಲಯ ಕಚೇರಿ 7ರ ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಸಮಿತಿ ಅಧ್ಯಕ್ಷ ಎಸ್.ರಾಜೇಶ್, ಗುತ್ತಿಗೆದಾರರ ಸಂಘದ ಅಧ್ಯಕ್ಷ ಉದಯ್ ಕುಮಾರ್, ಮುಖಂಡರಾದ ಇರ್ಫಾನ್ ಅನ್ನುಬಾಯ್, ನಾಗರಾಜ್, ಕುಮಾರ್, ಶ್ರೀಕಂಠ ಸೇರಿದಂತೆ ಹಲವರು ಭಾಗವಹಿಸಿದ್ದರು.

ಬಡರೋಗಿಗೆ ಉಚಿತ ಶಸ್ತ್ರ ಚಿಕಿತ್ಸೆ

ರೋಟರಿ ಮೈಸೂರ್ ವೆಸ್ಟ್, ಭಾಮಿಸ್ ಫೌಂಡೇಶನ್, ಇತರರ ನೆರವಿನೊಂದಿಗೆ ನಿರ್ಮಲ ಆಸ್ಪತ್ರೆಯಿಂದ ಸುತ್ತ್ಯಾರ್ಹ ಕಾರ್ಯ



ಮೈಸೂರು, ಮಾ.1(ಎಂಕೆ)– ವಿವಿಧ ಸಂಸ್ಥೆಗಳು ಹಾಗೂ ದಾನಿಗಳ ಸಹಕಾರದೊಂದಿಗೆ ತಲೆಗೆ ಪೆಟ್ಟುಬಿದ್ದು ಗಂಭೀರ ಸ್ಥಿತಿಯಲ್ಲಿದ್ದ ವ್ಯಕ್ತಿಯೊಬ್ಬರಿಗೆ ಉಚಿತ ಶಸ್ತ್ರ ಚಿಕಿತ್ಸೆ ಮಾಡುವ ಮೂಲಕ ಮೈಸೂರಿನ ರಿಂಗ್ ರಸ್ತೆಯಲ್ಲಿರುವ ನಿರ್ಮಲ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಮಾನವೀಯತೆ ಮೆರೆದಿದೆ.

ಚಾಮರಾಜನಗರ ಜಿಲ್ಲೆಯ ಕೂಡ್ಲೂರು ಗ್ರಾಮದ ಸತ್ಯರಾಜ್, ಫೆ.23 ರಂದು ಮಲೈಮಹದೇಶ್ವರ ಬೆಟ್ಟಕ್ಕೆ ತೆರಳಿದ್ದ ವೇಳೆ ತಲೆಸುತ್ತಿನಿಂದ ಕುಸಿದು ಬಿದ್ದು ತಲೆಗೆ ತೀವ್ರ ಸ್ವರೂಪದಲ್ಲಿ ಗಾಯ ಉಂಟಾಗಿತ್ತು. ಅವರಿಗೆ ನಿರ್ಮಲ ಆಸ್ಪತ್ರೆಯಲ್ಲಿ ಉಚಿತವಾಗಿ ಯಶಸ್ವಿ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ ಎಂದು ನಿರ್ಮಲ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಬಸವರಾಜು ಬುಧವಾರ ಆಸ್ಪತ್ರೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸತ್ಯರಾಜ್ ಅವರನ್ನು ಆಸ್ಪತ್ರೆಗೆ ಕರೆ ತಂದ ಸಂದರ್ಭ ಅವರು ಪ್ರಜ್ಞೆ ಕಳೆದುಕೊಂಡಿದ್ದರು. ತಕ್ಷಣ ಅವರನ್ನು ಸಿ.ಟಿ. ಸ್ಕ್ಯಾನ್‌ಗೆ ಒಳಪಡಿಸಲಾಯಿತು. ಜೀವ ಉಳಿಸಲು ಶಸ್ತ್ರ ಚಿಕಿತ್ಸೆ ಅನಿವಾರ್ಯವಾಗಿತ್ತು. ಈ ವಿಚಾರವನ್ನು ಸತ್ಯರಾಜ್ ಕುಟುಂಬದವರ ಗಮನಕ್ಕೆ ತಂದಾಗ ಅವರ ಬಳಿ ಹಣ ಇಲ್ಲದೆ ಇರುವುದು ತಿಳಿದು ಬಂತು. ಸತ್ಯರಾಜ್ ತಾಯಿ ಲಕ್ಷ್ಮಿ ಬಳಿ ಮಾಂಗಲ್ಯ ಸರ ಮಾರಿದ 5,000 ರೂ.ಮಾತ್ರ ಇತ್ತು. ಕುಟುಂಬದ ಸಂಕಷ್ಟವನ್ನು ಅರಿತು ನಮ್ಮ ಆಸ್ಪತ್ರೆ ಹಾಗೂ ರೋಟರಿ ಮೈಸೂರು ಪಶ್ಚಿಮ, ಭಾಮಿಸ್ ಫೌಂಡೇಶನ್ ಹಾಗೂ ನರಡ್ಕೋದಲ್ಲಿರುವ ಕೆಲ ದಾನಿಗಳ ನೆರವಿನೊಂದಿಗೆ ಉಚಿತವಾಗಿ ಚಿಕಿತ್ಸೆ ಮಾಡಿದ್ದೇವೆ. ಇದೀಗ ಸತ್ಯರಾಜ್ ಸಂಪೂರ್ಣ ಚೇತರಿಸಿಕೊಂಡಿದ್ದು, ಗುರುವಾರ ಅವರನ್ನು ಡಿಸ್ಚಾರ್ಜ್ ಮಾಡಲಾಗುವುದು ಎಂದರು.

ಚಿಕಿತ್ಸೆಗೆ 3 ಲಕ್ಷ ರೂ.ಖರ್ಚಾಗಿದ್ದು, ಅದರ ಅರ್ಧದಷ್ಟು ಹಣವನ್ನು ಆಸ್ಪತ್ರೆ ಭರಿಸಿದೆ. ಉಳಿದ 1.5 ಲಕ್ಷ ರೂ. ಹಣವನ್ನು ರೋಟರಿ ಮೈಸೂರು ಪಶ್ಚಿಮ, ಭಾಮಿಸ್ ಫೌಂಡೇಶನ್ ಹಾಗೂ ದಾನಿಗಳು ನೀಡಿದ್ದಾರೆ. ಎಲ್ಲರೂ ಒಟ್ಟಾಗಿ ಸೇರಿ ಮಾನವಿಯತೆ ದೃಷ್ಟಿಯಿಂದ ಸೇವಾ ಕಾರ್ಯ ಮಾಡಿದ್ದೇವೆ ಸತ್ಯರಾಜ್‌ಗೆ ಚಿಕಿತ್ಸೆ ನೀಡುವುದು ತಡವಾಗಿದ್ದರೂ ಆತ ನಮ್ಮೊಂದಿಗೆ ಇರುತ್ತಿರಲಿಲ್ಲ. ಮುಂದಿನ ದಿನಗಳಲ್ಲಿ ಸತ್ಯರಾಜ್ ಕುಟುಂಬಕ್ಕೆ ಒಳಿತಾಗಲಿ ಎಂದು ಆಶಿಸಿದರು.

ಇದೇ ವೇಳೆ 1.50 ಲಕ್ಷ ರೂ.ಗಳ ಚೆಕ್ ಅನ್ನು ನಿರ್ಮಲ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಬಸವರಾಜು ಅವರಿಗೆ ಹಸ್ತಾಂತರಿಸಲಾಯಿತು. ಭಾಮಿಸ್ ಫೌಂಡೇಶನ್ ಮುಖ್ಯಸ್ಥ ಹಾಗೂ ರೋಟರಿ ಮೈಸೂರು ಪಶ್ಚಿಮದ ಮಾಜಿ ಅಧ್ಯಕ್ಷ ಡಾ.ರಾಘವೇಂದ್ರ ಪ್ರಸಾದ್, ರೋಟರಿ ಮೈಸೂರು ಪಶ್ಚಿಮ ಅಧ್ಯಕ್ಷ ಉಲ್ಲಾಸ್ ಪಂಡಿತ್, ಕಾರ್ಯದರ್ಶಿ ಶ್ರೀನಾಥ್, ಸುಧೀಂದ್ರ ಆಸ್ಪತ್ರೆಯ ವೈದ್ಯ ಡಾ.ಲೋಕೇಶ್ ಉಪಸ್ಥಿತರಿದ್ದರು.

ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಹಿನ್ನೆಲೆ

ಮೈಸೂರಿಗೆ ಆಗಮಿಸಿದ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಅದ್ದೂರಿ ಸ್ವಾಗತ



ಮೈಸೂರು,ಮಾ.1(ಎಂಟಿವೈ)– ವಿಜಯ ಸಂಕಲ್ಪ ರಥ ಯಾತ್ರೆಗೆ ಚಾಲನೆ ನೀಡುವ ಸಲುವಾಗಿ ಮಲೆಮಹದೇಶ್ವರ ಬೆಟ್ಟಕ್ಕೆ ತೆರಳುವ ಸಲುವಾಗಿ ಮೈಸೂರಿಗೆ ಆಗಮಿಸಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು.


ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಬೆಟ್ಟದಲ್ಲಿ ಆಯೋಜಿಸಲಾಗಿದ್ದ ವಿಜಯ ಸಂಕಲ್ಪ ಯಾತ್ರೆಗೆ ಚಾಲನೆ ನೀಡುವ ಸಲುವಾಗಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ವಿಶೇಷ ವಿಮಾನದಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದರು. ಅವರನ್ನು ಸಿಎಂ, ಮಾಜಿ ಸಿಎಂ ಹಾಗೂ ಪಕ್ಷದ ಮುಖಂಡರು ಆತ್ಮೀಯವಾಗಿ ಬರಮಾಡಿಕೊಂಡರು. ಬಳಿಕ ಇಲ್ಲಿಂದ ಹೆಲಿಕಾಪ್ಟರ್‌ನಲ್ಲಿ ಮಲೆಮಹದೇಶ್ವರ ಬೆಟ್ಟಕ್ಕೆ ನಡ್ಡಾ ಪ್ರಯಾಣಿಸಿದರು.

ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಸಂಸದರಾದ ಪ್ರತಾಪ ಸಿಂಹ, ಬಿ.ವೈ.ರಾಘವೇಂದ್ರ ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಬಿ. ಹರ್ಷವರ್ಧನ, ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್. ಶ್ರೀವತ್ಸ, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ. ಶಿವಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮಾ. 1 ಮತ್ತು 2 ರಂದು ಚಾಮರಾಜನಗರ ಜಿಲ್ಲೆಯಲ್ಲಿ ನಡ್ಡಾ ಅವರು ವಿಜಯ ಸಂಕಲ್ಪ ಯಾತ್ರೆಯ ಕಾರ್ಯಕ್ರಮ, ರೋಡ್ ಶೋನಲ್ಲಿ ಪಾಲ್ಗೊಳ್ಳುವರು. ಮಾ. 2 ರಂದು ಸಂಜೆ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿಗೂ ಭೇಟಿ ನೀಡಿ ಮೈಸೂರಿನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಮಾ. 3, 4 ಮತ್ತು 5 ರಂದು ಮೈಸೂರು ನಗರ ಮತ್ತು ಗ್ರಾಮಾಂತರದ ವಿವಿಧ ಕ್ಷೇತ್ರದಲ್ಲಿ ನಡೆಯುವ ವಿಜಯ ಸಂಕಲ್ಪ ಯಾತ್ರೆಯಲ್ಲಿ ಪಾಲ್ಗೊಳ್ಳುವರು.

ಯಾವುದೇ ಸಂದರ್ಭದಲ್ಲಿ ಚುನಾವಣೆ, ಕಾಂಗ್ರೆಸ್ ಗೆಲುವಿಗೆ ಸಜ್ಜಾಗಿ

ಅಭಿನಂದನಾ ಸಮಾರಂಭದಲ್ಲಿ ಮಾಜಿ ಸಚಿವ ಡಾ. ಎಚ್.ಸಿ. ಮಹಾದೇವಪ್ಪ ಕರೆ



ತಿ.ನರಸೀಪುರ, ಮಾ.1– ರಾಜ್ಯದಲ್ಲಿ ವಿಧಾನಸಭೆಗೆ ಸಾರ್ವತ್ರಿಕ ಚುನಾವಣೆ ಯಾವುದೇ ಸಂದರ್ಭದಲ್ಲಿ ಘೋಷಣೆಯಾಗುವ ಸಾಧ್ಯತೆಯಿರುವುದರಿಂದ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಲು ಕಾರ್ಯಕರ್ತರು ಹಾಗೂ ಮುಖಂಡರು ಬೂತ್ ಮಟ್ಟದಲ್ಲಿ ಸಜ್ಜಾಗಿರಬೇಕೆಂದು ಮಾಜಿ ಲೋಕೋಪಯೋಗಿ ಸಚಿವ ಡಾ.ಎಚ್.ಸಿ. ಮಹಾದೇವಪ್ಪ ಕರೆ ನೀಡಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಬನ್ನೂರು ನಗರ ಸಮಿತಿಯ ಅಧ್ಯಕ್ಷರನ್ನಾಗಿ ಮಾಜಿ ಪುರಸಭಾ ಅಧ್ಯಕ್ಷ ಮುನಾವರ್ ಪಾಷ ಅವರನ್ನು ಆಯ್ಕೆ ಮಾಡಿ ಅಭಿನಂದಿಸಿದ ನಂತರ ಮಾತನಾಡಿದ ಅವರು, ಸಂಸ್ಥೆಗಳನ್ನೂ ನಿಯಂತ್ರಣದಲ್ಲಿಟ್ಟುಕೊಂಡಿರುವ ಕೇಂದ್ರ ಸರ್ಕಾರ ಚುನಾವಣೆ ಆಯೋಗದ ಮೂಲಕ ಯಾವುದೇ ಸಂದರ್ಭದಲ್ಲಿ ರಾಜ್ಯದ ವಿಧಾನಸಭೆಗೆ ಚುನಾವಣೆಯನ್ನು ಘೋಷಿಸುವ ಸಾಧ್ಯತೆಗಳಿವೆ. ಹಾಗಾಗಿ ಬೂತ್ ಮಟ್ಟದಲ್ಲಿ ಪಕ್ಷದ ಸಂಘಟನೆಯತ್ತ ಎಲ್ಲರ ಗಮನವಿರಲಿ ಎಂದರು.

ಮೊದಲು ಮೇ ನಲ್ಲಿ ಚುನಾವಣೆ ಆಗುವ ನಿರೀಕ್ಷೆಯಿತ್ತು. ರಾಜ್ಯದಲ್ಲಿ ಕಾಂಗ್ರೆಸ್ ಅಲೆಯಿರುವುದನ್ನ ಸೂಕ್ಷ್ಮವಾಗಿ ಗಮನಿಸಿರುವ ಬಿಜೆಪಿ ಕೇಂದ್ರ ನಾಯಕರು ಮಾರ್ಚ್ ಮೊದಲ ವಾರದಲ್ಲಿಯೇ ಚುನಾವಣೆ ದಿನಾಂಕ ಘೋಷಣೆ ಆಗಲಿದೆ. ರಾಜ್ಯ, ಜಿಲ್ಲೆ ಹಾಗೂ ವಿಧಾನಸಭಾ ಕ್ಷೇತ್ರದಲ್ಲಿಯೂ ಕಾಂಗ್ರೆಸ್‌ಗೆ ಜನರ ಒಲವಿದೆ ಎಂದರು.

ಕ್ಷೇತ್ರದಲ್ಲಿ ಮಹದೇವಪ್ಪ ಅವರು ಅಥವಾ ಸುನೀಲ್ ಬೋಸ್ ಅಭ್ಯರ್ಥಿಯಾಗಿ ಕಣಕ್ಕಿಳಿದರೂ ಗೆಲ್ಲುವ ಅವಕಾಶವಿದೆ. ಅಪ್ಪನೊ, ಇಲ್ಲ ಮಗ ನಿಲ್ಲುತ್ತಾನೋ ಅನ್ನೋ ಯಾವುದೇ ಗೊಂದಲ ಬೇಡ. ಬದಲಿಗೆ ಕಾಂಗ್ರೆಸ್ ಗೆಲ್ಲುವುದು ಮುಖ್ಯವಾಗಬೇಕು. ಏಕಕಾಲಕ್ಕೆ ಎಲ್ಲಾ ಬೂತ್‌ಗಳಿಗೂ ನಾನೇ ಖುದ್ದಾಗಿ ಭೇಟಿ ನೀಡಿ, ಈ ಹಿಂದೆ ಹೇಳಿದಂತೆ ಬೂತ್ ಸಮಿತಿಗೆ ಚುನಾವಣೆ ಹೊಣೆಯನ್ನು ನೀಡುವುದರಿಂದ ಕಾರ್ಯಕರ್ತರು ಹಾಗೂ ಮುಖಂಡರು ಜವಾಬ್ದಾರಿ ಅರಿತು ಚುನಾವಣೆ ಗೆಲುವಿಗೆ ಕಾರ್ಯತಂತ್ರ ರೂಪಿಸುವ ಕಡೆಗೆ ಕಾರ್ಯೋನ್ಮುಖರಾಗಬೇಕು ಎಂದು ಮಹದೇವಪ್ಪ ಮನವಿ ಮಾಡಿದರು. ನೂತನ ಅಧ್ಯಕ್ಷ ಮುನಾವರ್ ಪಾಷ ಮಾತನಾಡಿ, ಪ್ರಸಕ್ತ ಚುನಾವಣೆಯಲ್ಲಿ ಪಕ್ಷದ ಗೆಲುವೇ ಮುಖ್ಯವಾಗಿರುವುದರಿಂದ ಎಲ್ಲರೂ ಒಗ್ಗೂಡೋಣ. ಯುವ ಮುಖಂಡ ಸುನೀಲ್ ಬೋಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ, ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರ ಮಾರ್ಗದರ್ಶನದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಮುಡಿಯಿಡಲಿದ್ದಾರೆ ಎಂದರು.

ಜಿಲ್ಲಾಧ್ಯಕ್ಷ ಬಿ.ಜೆ.ವಿಜಯಕುಮಾರ್, ಕಾಂಗ್ರೆಸ್ ಮುಖಂಡರಾದ ಸುಹೇಲ್, ರಮೇಶ್, ಶಾಹಿದ್, ಮಹಿಂ, ಸತ್ಯ ಬಾಬು, ರಾಜು, ಕಾರ್ಯಕರ್ತರು ಹಾಜರಿದ್ದರು

ಗೆಲುವಿನ ಚಿಂತನೆಯಾಗಲಿ

ಕ್ಷೇತ್ರದಲ್ಲಿ ಸೋಲಿನ ಆತ್ಮಾವಲೋಕನದ ಬಳಿಕ ನಾನೂ ಕೂಡ ಪಾಠವನ್ನ ಕಲಿತಿದ್ದೇನೆ. ಯಾರ್ ನಿಲ್ತಾರೋ ಅನ್ನೋ ಗೊಂದಲದಿಂದ ಮುಖಂಡರು, ಕಾರ್ಯಕರ್ತರು ಹೊರಬಂದು ಮುಂದಿನ ಗೆಲುವಿನ ಬಗ್ಗೆ ಚಿಂತನೆ ಮಾಡಬೇಕು. ಐದು ವರ್ಷಗಳಿಂದ ಕೂತಿದ್ದೇವೆ. ಇನ್ಮುಂದೆ ಅಭಿವೃದ್ಧಿ ಮತ್ತು ಜನರ ಸೇವೆಯನ್ನು ಮಾಡೋಣ. –ಸುನೀಲ್ ಬೋಸ್, ಕಾಂಗ್ರೆಸ್ ಟಿಕೆಟ್ ಪ್ರಬಲ ಆಕಾಂಕ್ಷಿ

ಇಂದು ನಂ.ಗೂಡಿಗೆ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ

ನಂಜನಗೂಡು, ಮಾ.1– ಭಾರತೀಯ ಜನತಾ ಪಕ್ಷದಿಂದ ಆಯೋಜಿಸಿರುವ ವಿಜಯ ಸಂಕಲ್ಪಯಾತ್ರೆ ಮಾ.2ರಂದು ನಂಜನಗೂಡಿಗೆ ಆಗಮಿಸಲಿದ್ದು, ನಗರದ ಪ್ರಮುಖ ರಸ್ತೆಗಳಲ್ಲಿ ನಡೆಯಲಿರುವ ರೋಡ್ ಶೋನಲ್ಲಿ ಬಿಜೆಪಿಯ ಪ್ರಮುಖರು ಭಾಗವಹಿಸಲಿದ್ದಾರೆ. ಸಂಜೆ 4ಗಂಟೆಗೆ ನಂಜನಗೂಡಿಗೆ ಆಗಮಿಸುವ ವಿಜಯ ಸಂಕಲ್ಪ ಯಾತ್ರೆಯಲ್ಲಿ ಸಚಿವರುಗಳಾದ ವಿ.ಸೋಮಣ್ಣ, ಕೆ.ಸಿ.ನಾರಾಯಣ ಗೌಡ, ವಿ.ಸುನೀಲ್‌ಕುಮಾರ್, ಕೋಟ ಶ್ರೀನಿವಾಸ ಪೂಜಾರಿ, ಆರಗ ಜ್ಞಾನೇಂದ್ರ, ಗೋಪಾಲಯ್ಯ, ಎಸ್.ಅಂಗಾರ, ವಿ.ಶ್ರೀನಿವಾಸಪ್ರಸಾದ್, ಮಾಜಿ ಸಚಿವರುಗಳಾದ ಕೆ.ಎಸ್.ಈಶ್ವರಪ್ಪ, ಎನ್.ಮಹೇಶ್, ಬಿಜೆಪಿ ಉಪಾಧ್ಯಕ್ಷ ರಾಜೇಂದ್ರ, ನಿರ್ಮಲ್‌ಕುಮಾರ್ ಸುರಾನಾ ಮತ್ತಿತರರು ಭಾಗವಹಿಸಲಿದ್ದಾರೆ.

ಗುಂಡ್ಲುಪೇಟೆ ಮೂಲಕ ನಂಜನಗೂಡಿಗೆ ಆಗಮಿಸುವ ವಿಜಯ ಸಂಕಲ್ಪ ಯಾತ್ರೆಯನ್ನು ನಗರದ ದೇವೀರಮ್ಮನಹಳ್ಳಿ ಗೇಟ್ ಸಮೀಪ ಪೂರ್ಣಕುಂಭ ಹೊತ್ತ ಮಹಿಳೆಯರು ಹಾಗೂ ಬಿಜೆಪಿ ಕಾರ್ಯಕರ್ತರು ಬರಮಾಡಿಕೊಳ್ಳಲಿದ್ದಾರೆ. ಈ ವೇಳೆ ಸಾವಿರಕ್ಕೂ ಹೆಚ್ಚು ಬೈಕ್‌ಗಳು ರ್ಯಾಲಿಯಲ್ಲಿ ಭಾಗಿಯಾಗಲಿವೆ. ಬಳಿಕ ಚಿಂತಾಮಣಿ ಗಣಪತಿ ದೇವಸ್ಥಾನದ ಮುಂಭಾಗದಿಂದ ರೋಡ್ ಶೋ ಪ್ರಾರಂಭವಾಗಲಿದ್ದು ರಾಷ್ಟ್ರಪತಿ ರಸ್ತೆ, ಬ್ರಾಡ್ ವೇ ರಸ್ತೆ, ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ ಹಾಗೂ ಬಜಾರ್‌ರಸ್ತೆ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದವರೆಗೆ ಸಂಚರಿಸಿ ರೋಡ್ ಶೋ ಅಂತ್ಯಗೊಳ್ಳಲಿದ್ದು ಮೆರವಣಿಗೆಯಲ್ಲಿ ಜಾನಪದ ಕಲಾತಂಡಗಳು ಭಾಗವಹಿಸಲಿದೆ.

ನಂಜನಗೂಡಲ್ಲಿ ಸರ್ಕಾರಿ ಸೇವೆ ಸ್ತಬ್ಧ

ಬಿಕೋ ಎನ್ನುತ್ತಿದ್ದ ಮಿನಿವಿಧಾನಸೌಧ, ಸರ್ಕಾರಿ ಶಾಲಾ–ಕಾಲೇಜುಗಳಿಗೆ ರಜೆ, ವೈದ್ಯರಿಲ್ಲದೆ ರೋಗಿಗಳ ಪರದಾಟ



ನಂಜನಗೂಡು, ಮಾ.1– ವೇತನ ಪರಿಷ್ಕರಣೆ ಮತ್ತು ಎಂಪಿಎಸ್ ಜಾರಿಗೆ ಆಗ್ರಹಿಸಿ ರಾಜ್ಯ ಸರ್ಕಾರಿ ನೌಕರರ ಸಂಘ ಬುಧವಾರ ಕರೆ ನೀಡಿದ್ದ ಮುಷ್ಕರಕ್ಕೆ ತಾಲೂಕಲ್ಲಿ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು.

ಸದಾ ಜನಜಂಗುಳಿಯಿಂದ ತುಂಬಿರುತ್ತಿದ್ದ ಮಿನಿವಿಧಾನಸೌಧ ಕಟ್ಟಡದಲ್ಲಿ ಕಂದಾಯ, ಶಿಕ್ಷಣ ಇಲಾಖೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಉಪನೋಂದಣಾಧಿಕಾರಿಗಳ ಕಚೇರಿ, ಸಮಾಜಕಲ್ಯಾಣ ಇಲಾಖೆ, ಸರ್ವೆ ಇಲಾಖೆ ಸೇರಿದಂತೆ ಎಲ್ಲಾ ಕಚೇರಿಗಳಲ್ಲಿ ನೌಕರರು ಮತ್ತು ಅಧಿಕಾರಿಗಳು ಗೈರು ಆಗಿದ್ದರಿಂದ ಮಿನಿವಿಧಾನಸೌಧ ಬಿಕೋ ಎನ್ನುತ್ತಿತ್ತು.

ಇನ್ನು ಎಲ್ಲಾ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು ಹಾಗೂ ಉಪನ್ಯಾಸಕರು ಕರ್ತವ್ಯಕ್ಕೆ ಗೈರಾಗಿ ಮುಷ್ಕರ ಬೆಂಬಲಿಸಿದ್ದರಿಂದ ಎಲ್ಲಾ ಶಾಲಾ ಕಾಲೇಜುಗಳು ಬಂದ್ ಆಗಿದ್ದವು. ಶಾಲೆಯಿದೆ ಎಂದು ಆಗಮಿಸಿದ್ದ ವಿದ್ಯಾರ್ಥಿಗಳು ಶಿಕ್ಷಕರಿಲ್ಲದೇ ವಾಪಾಸ್ ಮನೆಗೆ ತೆರಳುವಂತಾಯಿತು. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪೂರ್ವ ನಿಯೋಜಿತ ಪರೀಕ್ಷೆಗಳು ರದ್ದುಗೊಂಡಿದ್ದವು.

ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ತುರ್ತು ಸೇವೆ ಹೊರತುಪಡಿಸಿ ಇತರೆ ಸೇವೆಗಳು ಸಿಗದೇ ರೋಗಿಗಳು ಪರದಾಡುವಂತಾಯಿತು. ಅಲ್ಲದೆ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿಗಳು ಗೈರಾಗಿದ್ದರಿಂದ ವೈದ್ಯಕೀಯ ಸೇವೆಯಲ್ಲೂ ವ್ಯತ್ಯಯ ಉಂಟಾಯಿತು.

ಮಧ್ಯಾಹ್ನದ ವೇಳೆ ರಾಜ್ಯ ಸರ್ಕಾರಿ ನೌಕರರ ಸಂಘ ಮುಷ್ಕರವನ್ನು ಹಿಂಪಡೆದರೂ ಅಧಿಕಾರಿಗಳು ಮಾತ್ರ ಕಚೇರಿಗಳತ್ತ ಸುಳಿಯಲೇ ಇಲ್ಲ. ಹೀಗಾಗಿ ಇಡೀ ದಿನ ಸರ್ಕಾರಿ ಸೇವೆಗಳಿಲ್ಲದೇ ನಾಗರಿಕರು ಪರದಾಡುವಂತಾಯಿತು.

ನಾಳೆ ಕೆ.ಆರ್.ನಗರಕ್ಕೆ ವಿಜಯ ಸಂಕಲ್ಪ ಯಾತ್ರೆ



ಕೆ.ಆರ್.ನಗರ, ಮಾ.1– ಭಾರತೀಯ ಜನತಾ ಪಾರ್ಟಿ ವತಿಯಿಂದ ಮಾ.3 ರಂದು ಕೆ.ಆರ್.ನಗರ ಕ್ಷೇತ್ರದಲ್ಲಿ ವಿಜಯ ಸಂಕಲ್ಪ ಯಾತ್ರೆಯನ್ನು ಹಮ್ಮಿಕೊಂಡಿದ್ದು, ಕ್ಷೇತ್ರದ ಮತದಾರರು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ ಮನವಿ ಮಾಡಿದ್ದಾರೆ.

ಅಂದು ಬೆಳಗ್ಗೆ 9.30ಕ್ಕೆ ಪಟ್ಟಣಕ್ಕೆ ಆಗಮಿಸುವ ಯಾತ್ರೆಯಲ್ಲಿ ಭಾಗವಹಿಸುವ ಗಣ್ಯರು ಉಪಾಹಾರ ಸೇವಿಸಿದ ನಂತರ ಪ್ರಮುಖರ ಭೇಟಿ, ದೇವಸ್ಥಾನಗಳ ಭೇಟಿ, ಪುತ್ಥಳಿಗಳಿಗೆ ಮಾಲಾರ್ಪಣೆ ಮಾಡಿ ಪಟ್ಟಣದ ಮೈಸೂರು ರಸ್ತೆಯ ಶ್ರೀ ತೋಪಮ್ಮ ತಾಯಿ ದೇವಸ್ಥಾನದಿಂದ ಮೆರವಣಿಗೆ ಹೊರಟು ಬಜಾರ್ ರಸ್ತೆ, ವಾಣಿ ವಿಲಾಸ ರಸ್ತೆ ಮೂಲಕ ಪುರಸಭೆ ವೃತ್ತದ ಬಳಿವರೆಗೆ ವಿಜಯ ಸಂಕಲ್ಪ ಯಾತ್ರೆ ಸಾಗಲಿದೆ ಎಂದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಈ ಯಾತ್ರೆಗೆ ಸಚಿವ ಕೆ.ಸಿ. ನಾರಾಯಣಗೌಡ, ಗೋಪಾಲಯ್ಯ, ವಿ.ಸೋಮಣ್ಣ, ಆರಗ ಜ್ಞಾನೇಂದ್ರ, ಶಾಸಕ ಕೆ.ಎಸ್.ಈಶ್ವರಪ್ಪ, ಸಂಸದ ಪ್ರತಾಪ್ ಸಿಂಹ ಸೇರಿದಂತೆ ಇನ್ನೂ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಈ ರೋಡ್‌ಶೋಗೆ ಕ್ಷೇತ್ರದ ಸುಮಾರು 10 ಸಾವಿರಕ್ಕೂ ಹೆಚ್ಚು ಜನರನ್ನು ಸೇರಿಸಿ ಯಾತ್ರೆಯನ್ನು ಯಶಸ್ವಿಗೊಳಿಸಲು ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಜಿಲ್ಲಾ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಜಿಲ್ಲಾ ಉಪಾಧ್ಯಕ್ಷ ಹೊಸಹಳ್ಳಿ ವೆಂಕಟೇಶ್, ಜಿಲ್ಲಾ ಮಾಧ್ಯಮ ಪ್ರಮುಖ ಹೆಚ್.ಪಿ.ಗೋಪಾಲ್, ತಾಲೂಕು ಅಧ್ಯಕ್ಷ ಕೆ.ವೈ.ಮಂಜು, ಪ್ರಧಾನ ಕಾರ್ಯದರ್ಶಿಗಳಾದ ಅನಿಲ್‌ಗೌಡ, ಮಾರ್ಕಂಡಯ್ಯ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಪ್ರಭಾಕರ್ ಜೈನ್, ನಗರಾಧ್ಯಕ್ಷ ಚಿರಾಗ್ ಪಟೇಲ್, ಆಶ್ರಯ ಕಮಿಟಿ ಸಮಿತಿ ಸದಸ್ಯ ಕೆ.ಆರ್.ಮಂಜು ಸೇರಿದಂತೆ ಇನ್ನಿತರರು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಇಂದು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣನವರ ಹುಟ್ಟುಹಬ್ಬ ಆಚರಣೆ



ಹೆಚ್.ಡಿ.ಕೋಟೆ, ಮಾ.1– ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅವರ 79ನೇ ಹುಟ್ಟುಹಬ್ಬವನ್ನು ನಾಳೆ (ಮಾ.2) ಪಟ್ಟಣದ ಕೃಷ್ಣಾಪುರ ಸರ್ಕಲ್ ಸಮೀಪ ಚಿಕ್ಕಣ್ಣ ಅಭಿಮಾನಿ ಬಳಗ, ತಾಲೂಕು ಜೆಡಿಎಸ್ ಪಕ್ಷದ ಅಭಿಮಾನಿಗಳು, ಕಾರ್ಯಕರ್ತರು, ಮುಖಂಡರುಗಳ ಸಮ್ಮುಖದಲ್ಲಿ ವಿವಿಧ ಸೇವಾ ಕಾರ್ಯಗಳನ್ನು ಮಾಡುವ ಮೂಲಕ ಆಚರಿಸಲಾಗುತ್ತದೆ.

ತಾಲೂಕಿನ ಹಿರಿಯ ರಾಜಕಾರಣಿ ಮುತ್ಸದ್ಧಿ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿರುವುದನ್ನು ಪರಿಗಣಿಸಿ ಅಭಿಮಾನಿ ಬಳಗ, ಜೆಡಿಎಸ್ ಮುಖಂಡರು, ಕಾರ್ಯಕರ್ತರ ಸಮ್ಮುಖದಲ್ಲಿ ಪಟ್ಟಣದ ಕೃಷ್ಣಾಪುರ ಸರ್ಕಲ್ ಸಮೀಪ ಅವರ ಹುಟ್ಟುಹಬ್ಬ ಆಚರಿಸಲಾಗುತ್ತಿದೆ ಎಂದರು. ಗುರುವಾರ ಬೆಳಿಗ್ಗೆ ತಾಲೂಕಿನ ಶಕ್ತಿ ದೇವತೆ ಚಿಕ್ಕದೇವಮ್ಮ ಬೆಟ್ಟದಲ್ಲಿ ಶಾಸಕರಾದ ಜಿ.ಟಿ. ದೇವೇಗೌಡ, ಸಾ.ರಾ. ಮಹೇಶ್, ಮಹದೇವು, ಅಶ್ವಿನ್‌ಕುಮಾರ್, ವಿಧಾನಪರಿಷತ್ ಸದಸ್ಯ ಮಂಜೇಗೌಡರು ಸೇರಿದಂತೆ ಇನ್ನು ಹಲವಾರು ಪ್ರಮುಖರ ಸಮ್ಮುಖದಲ್ಲಿ ವಿಶೇಷ ಪೂಜೆ ಸಲ್ಲಿಸಲಾಗುವುದು. ನಂತರ ಸರಗೂರು ಸೇರಿದಂತೆ ಹಲವು ಭಾಗದಲ್ಲಿ ಅಭಿಮಾನಿಗಳು ಕಾರ್ಯಕರ್ತರುಗಳು ಮುಖಂಡರುಗಳು ಮೆರವಣಿಗೆ ಮೂಲಕ ಹ್ಯಾಂಡ್‌ಪೋಸ್ಟ್ ಸರ್ಕಲ್‌ನಲ್ಲಿ ಭಾರೀ ಗಾತ್ರದ ಸೇಬಿನ ಹಾರ ಹಾಕಿ ಬರಮಾಡಿಕೊಂಡು ಅಭಿನಂದಿಸಲಿದ್ದಾರೆ. ಕೋಟೆ ಪಟ್ಟಣ ಗದ್ದಿಗೆ ವೃತ್ತದಿಂದ ವಿವಿಧ ಕಲಾತಂಡಗಳೊಂದಿಗೆ ಅದ್ದೂರಿ ಮೆರವಣಿಗೆ ಮಾಡಿ, ವೇದಿಕೆಗೆ ಕರೆತರಲಾಗುವುದು, ವೇದಿಕೆಯಲ್ಲಿ ಅಭಿಮಾನಿಗಳನ್ನು ಉದ್ದೇಶಿಸಿ ಚಿಕ್ಕಣ್ಣ ಹಾಗೂ ಗಣ್ಯರು ಮಾತನಾಡಲಿದ್ದಾರೆ.

ಲಾರಿ ಡಿಕ್ಕಿ: ಬೈಕ್ ಸವಾರ ಸಾವು, ಮತ್ತೋರ್ವನಿಗೆ ಗಾಯ

ಹುಣಸೂರು, ಮಾ.1– ಲಾರಿಯೊಂದು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿ, ಮತ್ತೊಬ್ಬ ಗಾಯಗೊಂಡಿರುವ ಘಟನೆ ತಾಲೂಕಿನ ಯಶೋದರಪುರ ಗ್ರಾಮದ ಮುಖ್ಯರಸ್ತೆಯಲ್ಲಿ ಸಂಭವಿಸಿದೆ.

ಕೆ.ಅರ್.ನಗರ ತಾಲೂಕಿನ ಅಕ್ಕಿಹೆಬ್ಬಾಳ್ ಗ್ರಾಮದ ಮರಿಚಿಕ್ಕೇಗೌಡರ ಮಗ ರಮೇಶ್(46) ಮೃತಪಟ್ಟ ದುರ್ದೈವಿ. ಈತನ ಸ್ನೇಹಿತ ದೊಡ್ಡಕೊಪ್ಪಲು ಗ್ರಾಮದ ಮರಿಗೌಡರ ಮಗ ಹರೀಶ್ ಅಸ್ಪತ್ರೆಗೆ ಸೇರಿಸಲಾಗಿದೆ.

ಘಟನೆ ವಿವರ: ರಮೇಶ್ ತನ್ನ (ಕೆ.ಎ–54 ಹೆಚ್–5065) ಹೀರೋ ಪ್ಯಾಷನ್ ಪ್ರೋ ಬೈಕ್‌ನಲ್ಲಿ ಪಿರಿಯಾಪಟ್ಟಣದಿಂದ ಹುಣಸೂರು ಕಡೆಗೆ ಬರುತ್ತಿದ್ದಾಗ ತಾಲೂಕಿನ ರಾಷ್ಟ್ರೀಯ ಹೆದ್ದಾರಿ 275ರ ಯಶೋದರಪುರ ಗ್ರಾಮದ ಬಳಿ ಸ್ಪೀಡ್ ಹಂಪ್ಸ್ ಬಳಿ ನಿಧಾನವಾಗಿ ಚಲಿಸುತ್ತಿದ್ದ ಸಂದರ್ಭದಲ್ಲಿ ಹಿಂದಿನಿಂದ ಬಂದ ಕಲ್ಲಿದ್ದಲು ಪುಡಿ ತುಂಬಿದ್ದ ಲಾರಿ ಡಿಕ್ಕಿ ಒಡೆದು ಸುಮಾರು ದೂರ ಎಳೆದುಕೊಂಡು ಹೋಗಿ ನಿಲ್ಲಿಸದೆ ಪರಾರಿಯಾಗಿದ್ದು, ಅಪಘಾತದಲ್ಲಿ ರಮೇಶ್ ದೇಹ ತುಂಡುತುಂಡಾಗಿ ಬಿದ್ದಿದ್ದ ದೃಶ್ಯ ಹೃದಯ ವಿದ್ರಾವಿತವಾಗಿತ್ತು.

ಅಪಘಾತವನ್ನು ಕಂಡ ಗ್ರಾಮಸ್ಥರು ಗೂಡ್ಸ್ ಲಾರಿಯನ್ನು ಬೆನ್ನಟ್ಟಿ ಹುಣಸೂರು ನಗರದ ಕಲ್ಕುಣಿಕೆ ಸರ್ಕಲ್‌ನಲ್ಲಿ ಹಿಡಿದು ಪೋಲಿಸರಿಗೆ ಒಪ್ಪಿಸಿದ್ದಾರೆ. ಚಾಲಕ ರವಿಕುಮಾರ್ ಪರಾರಿಯಾಗಿದ್ದು ಕ್ಲೀನರ್ ಮಾತ್ರ ಸಿಕ್ಕಿಬಿದ್ದಿದ್ದಾನೆ.

ಈ ಸಂಬಂಧ ಹುಣಸೂರು ನಗರ ಪೋಲಿಸ್ ಇನ್ಸ್‌ಪೆಕ್ಟರ್ ದೇವೇಂದ್ರರವರು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಮೃತದೇಹ ಹಾಗೂ ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಿ ಎರಡು ವಾಹನಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಚಾಲಕನ ಪತ್ತೆ ಕಾರ್ಯದಲ್ಲಿ ತೊಡಗಿದ್ದಾರೆ. ಮರಣೋತ್ತರ ಪರೀಕ್ಷೆ ನಂತರ ಮೃತದೇಹವನ್ನು ವಾರಸುದಾರರಿಗೆ ನೀಡಲಾಯಿತು. ಮರಣೋತ್ತರ ಪರೀಕ್ಷೆಯನ್ನು ಸಾರ್ವಜನಿಕ ಆಸ್ಪತ್ರೆಯ ಡಾ.ಲತಾರವರು ನಡೆಸಿದರು.

ಜಮೀನು ವಿಚಾರವಾಗಿ ಮಹಿಳೆ ಸೇರಿ ಇಬ್ಬರ ಮೇಲೆ ಹಲ್ಲೆ?

6 ಮಂದಿ ವಿರುದ್ಧ ದೂರು ದಾಖಲು

ಹುಣಸೂರು, ಮಾ.1– ಜಮೀನಿನಲ್ಲಿ ಉಳುಮೆ ಮಾಡುವ ವಿಚಾರವಾಗಿ 6 ಮಂದಿ ಗುಂಪು ಮಹಿಳೆ ಸೇರಿದಂತೆ ಇಬ್ಬರ ಮೇಲೆ ಹಲ್ಲೆ ನಡೆಸಿದ ಘಟನೆ ಹುಣಸೂರು ತಾಲೂಕಿನ ಮಾದಾಪುರ ಗ್ರಾಮದಲ್ಲಿ ಇಂದು ನಡೆದಿದೆ.

ಹಲ್ಲೆಗೆ ಒಳಗಾದ ತಾಲೂಕಿನ ಕಟ್ಟೆಮಳಲವಾಡಿಯ ಮಾಜಿ ಗ್ರಾಪಂ ಅಧ್ಯಕ್ಷೆ ಸಿಂಗಮ್ಮ ಹಾಗೂ ವೆಂಕಟೇಶ್ ಎಂಬುವರು ಗಾಯಗೊಂಡು ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಲ್ಲೆ ನಡೆಸಿದ ಕಟ್ಟೆಮಳಲವಾಡಿ ಗ್ರಾಮದ ನಿವಾಸಿಗಳಾದ ಸ್ವಾಮಿ, ಶಿಲ್ಪ, ರವಿ, ವೆಂಕಟೇಶ, ನಾರಾಯಣ ಹಾಗೂ ಚಂದ್ರ ಎಂಬುವರ ಮೇಲೆ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆ ವಿವರ: ಮಾದಾಪುರ ವ್ಯಾಪ್ತಿಯ ಸರ್ವೆ ನಂ.64 ಸಿಂಗಮ್ಮ ಪತಿಗೆ ಸೇರಿದ ಜಮೀನಿದ್ದು, ಶುಂಠಿ ಬೆಳೆ ಬೆಳೆಯಲು ಬೇರೆಯವರಿಗೆ ಗುತ್ತಿಗೆ ನೀಡಿದ್ದಾರೆ. ಗುತ್ತಿಗೆದಾರರಿಗೆ ಉಳುಮೆ ಮಾಡಲು ಬಂದಾಗ ಸ್ವಾಮಿ, ಶಿಲ್ಪ, ರವಿ ಹಾಗೂ ಇತರರು ತಕರಾರು ಮಾಡಿ ಗಲಾಟೆ ಮಾಡಿದ್ದಾರೆ. ಇದನ್ನ ಪ್ರಶ್ನಿಸಿದ ಸಿಂಗಮ್ಮಳಿಗೆ ಸ್ವಾಮಿ ಹಾಗೂ ಇತರರು ಹಲ್ಲೆ ನಡೆಸಿದ್ದಾರೆ. ಸಿಂಗಮ್ಮ ನೆರವಿಗೆ ಬಂದ ಸಂಬಂಧಿಕ ವೆಂಕಟೇಶ್ ಮೇಲೂ ಹಲ್ಲೆ ನಡೆಸಿದ್ದಾರೆ. ಹಲ್ಲೆಗೆ ಒಳಗಾದ ಸಿಂಗಮ್ಮ ಮತ್ತು ಸಂಬಂಧಿಕ ವೆಂಕಟೇಶ್ ಮೈಸೂರಿನ ಆಸ್ಪತ್ರೆ ಸೇರಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಲ್ಲೆ ನಡೆಸಿದ ಸ್ವಾಮಿ, ಶಿಲ್ಪ, ರವಿ, ವೆಂಕಟೇಶ್, ನಾರಾಯಣ, ಚಂದ್ರ ಮೇಲೆ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳು ಪರಾರಿಯಾಗಿದ್ದಾರೆ.

ಪ್ರಯಾಣಿಕರ ಆಟೋಗಳಿಗೆ ಕಾರು ಡಿಕ್ಕಿ

ಆಟೋ ಚಾಲಕರು, ಪ್ರಯಾಣಿಕರಿಗೆ ಗಾಯ

ಬೈಲಕುಪ್ಪೆ ಮಾ.1– ಮಾರುತಿ ಕಾರೊಂದು ಮೂರು ಪ್ರಯಾಣಿಕರ ಆಟೋಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಆಟೋ ಚಾಲಕನೋರ್ವ ತೀವ್ರವಾಗಿ ಗಾಯಗೊಂಡು ಮತ್ತೆರಡು ಆಟೋ ಚಾಲಕರು ಮತ್ತು ಆಟೋದಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರಿಗೆ ಸಣ್ಣ–ಪುಟ್ಟ ಗಾಯಗಳಾಗಿ ಆಟೋ ಜಖಂಗೊಂಡಿರುವ ಘಟನೆ ಕೊಪ್ಪ ಗ್ರಾಮದಲ್ಲಿ ಬುಧವಾರ ನಡೆದಿದೆ.

ಪಿರಿಯಾಪಟ್ಟಣ ತಾಲೂಕಿನ ನರಳಪುರ ಗ್ರಾಮದ ಆಟೋ ಚಾಲಕ ಕಿರಣ(30) ಕುಶಾಲನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಕೊಪ್ಪ ಗ್ರಾಮದ ಆಟೋ ಚಾಲಕ ನಿಜಮುದ್ದೀನ್(42), ಆಟೋದಲ್ಲಿ ಪ್ರಯಾಣಿಸುತ್ತಿದ್ದ ಮಧುಶ್ರೀ(17), ಚಿಂಚನ(19) ಕೊಪ್ಪ ಗ್ರಾಮದ ಆಟೋ ಚಾಲಕ ತೇಜಸ್ವಿ(31) ಅವರಿಗೆ ಸಣ್ಣ–ಪುಟ್ಟ ಗಾಯಗಳಾಗಿದ್ದು, ಕುಶಾಲನಗರ ಆಸ್ಪತ್ರೆಗೆ ಸೇರಿಸಲಾಗಿದೆ. ಬೈಲಕುಪ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೃದ್ಧೆಯನ್ನು ವಂಚಿಸಿ ಸರ ಕಳ್ಳತನ

ನಂಜನಗೂಡು, ಮಾ.1– ನಗರದ ತ್ಯಾಗರಾಜ ಕಾಲೋನಿಯ ಚೆನ್ನಪ್ಪನವರ ಮಡದಿ ವನಜಾಕ್ಷಿ(67) ಅವರನ್ನು ಯಾಮಾರಿಸಿ 27 ಗ್ರಾಂ ಚಿನ್ನದ ಮಾಂಗಲ್ಯದ ಸರವನ್ನು ಲಪಟಾಯಿಸಿದ್ದಾರೆ.

ಹುಲ್ಲಹಳ್ಳಿ ವೃತ್ತದ ಬಳಿಯ ಎಸ್.ಬಿ.ಎಂ. ಬ್ಯಾಂಕ್‌ಗೆ ತೆರಳಿ ತ್ಯಾಗರಾಜ ಕಾಲೋನಿಯ ತಮ್ಮ ಮನೆಗೆ ವಾಪಸ್ಸಾಗುತ್ತಿದ್ದ ವನಜಾಕ್ಷಿ ಅವರನ್ನು ತ್ಯಾಗರಾಜ ಕಾಲೋನಿಯ ಈದಿಗಾ ಮಸೀದಿಯ ಬಳಿ ಮಾತನಾಡಿಸಿದ ನಾಲ್ಕು ಮಂದಿ ಕಳ್ಳರ ತಂಡ, ಕಳ್ಳರ ಕಾಟ ಹೆಚ್ಚಾಗಿದೆ, ಚಿನ್ನದ ಸರ ಧರಿಸಿ ಬೀದಿಯಲ್ಲಿ ಹೀಗೆ ಓಡಾಡಬಾರದು ಎಂದು ಪುಸಲಾಯಿಸಿ, ಕತ್ತಿನಲ್ಲಿದ್ದ ಚಿನ್ನದ ಸರ ಬಿಚ್ಚಿಸಿ, ಪೇಪರ್‌ಗೆ ಹಾಕಿ ಕೊಡುವಂತೆ ನಟಿಸಿ, ಪೇಪರ್‌ಗೆ ಕಲ್ಲು ತುಂಬಿಕೊಟ್ಟು ಎರಡು ಬೈಕ್‌ಗಳಲ್ಲಿ ಪರಾರಿಯಾಗಿದ್ದಾರೆ. ಈ ಸಂಬಂಧ ನಗರದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನರಸೀಪುರದಲ್ಲಿ ಸ್ಥಳೀಯರಿಗೆ ಬಿಜೆಪಿ ಟಿಕೆಟ್ ನೀಡಲು ಒತ್ತಾಯ

ಆಕಾಂಕ್ಷಿಗಳ ಗೊಂದಲ ನಿವಾರಿಸಲು ಪಕ್ಷದ ಮುಖಂಡರ ಮನವಿ



ತಿ.ನರಸೀಪುರ ಮಾ.1– ವಿಧಾನಸಭೆ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿದ್ದು, ರಾಜಕೀಯ ಪಕ್ಷಗಳಲ್ಲಿ ಟಿಕೆಟ್ ಗೊಂದಲ ಉಂಟಾಗಿದೆ. ಅದರಲ್ಲೂ ಬಿಜೆಪಿ ಪಕ್ಷದಲ್ಲಿ ಟಿಕೆಟ್ ಆಕಾಂಕ್ಷಿಗಳ ಪಟ್ಟಿ ದೊಡ್ಡದಿದ್ದು, ಸ್ಥಳೀಯರಿಗೆ ಪಕ್ಷದ ಟಿಕೆಟ್ ನೀಡುವಂತೆ ಹೈಕಮಾಂಡ್‌ಗೆ ಒತ್ತಡ ಹೇರಲಾಗುತ್ತಿದೆ.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಟಿಕೆಟ್ ನೀಡಿಕೆ ವಿಷಯದಲ್ಲಿ ಆಗಿರುವ ಗೊಂದಲಕ್ಕೆ ತೆರೆ ಎಳೆಯಲು ಬಿಜೆಪಿ ಮುಖಂಡರು ಪ್ರಯತ್ನಪಟ್ಟರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಡವಾಡಿ ಮಹೇಶ್ ಮಾತನಾಡಿ, 2018ರ ಚುನಾವಣೆಯಲ್ಲಿ ಅನ್ಯ ಪಕ್ಷದ ವ್ಯಕ್ತಿಗೆ ಹೈಕಮಾಂಡ್ ಮಣೆ ಹಾಕಿದ್ದರಿಂದ ಪಕ್ಷಕ್ಕೆ ಸೋಲುಂಟಾಯಿತು.ಆದರೆ ಈ ಬಾರಿ ಹಾಗಾಗುವುದು ಬೇಡ, ತಿ.ನರಸೀಪುರ ಮೀಸಲು ಕ್ಷೇತ್ರಕ್ಕೆ ಕ್ಷೇತ್ರದಲ್ಲವರನ್ನು ಅಭ್ಯರ್ಥಿಯನ್ನಾಗಿ ಪರಿಗಣಿಸುವುದು ಸರಿಯಲ್ಲ.ಕ್ಷೇತ್ರದ ಜನರ ನಿರಂತರ ಸಂಪರ್ಕ ಹೊಂದಿ ಜನ ಮನ್ನಣೆಗಳಿಸಿರುವ ಅಭ್ಯರ್ಥಿಯನ್ನು ಆಯ್ಕೆ ಮಾಡುವಂತೆ ಹೈಕಮಾಂಡ್‌ಗೆ ಮನವಿ ಮಾಡಿದರು.

ಕ್ಷೇತ್ರ ಹಾಗೂ ಪಕ್ಷದಲ್ಲಿ ಅನೇಕ ವರ್ಷಗಳಿಂದ ಸೇವೆ ಸಲ್ಲಿಸಿದವರನ್ನು ಮಾತ್ರವೇ ಅಭ್ಯರ್ಥಿ ಆಯ್ಕೆಯಲ್ಲಿ ಪರಿಗಣಿಸಬೇಕು, ಹಾಗೆಯೇ ಕ್ಷೇತ್ರದ ಹಳ್ಳಿಗಳ ಮತ್ತು ಜನರ ಸಂಪರ್ಕವಿಲ್ಲದ ಹಾಗೂ ರಾಜಕೀಯ, ಸಾಮಾಜಿಕ ತಿಳುವಳಿಕೆಯ ಅನುಭವವಿರದ ವ್ಯಕ್ತಿಗಳನ್ನು ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರ ಮೇಲೆ ಹೇರಬೇಡಿ, ಹಾಗೇನಾದರೂ ಮಾಡಿದಲ್ಲಿ ಪಕ್ಷದ ಕಾರ್ಯಕರ್ತರಿಗೆ ಮುಖಂಡರಿಗೆ, ಹಿತೈಷಿಗಳಿಗೆ ನೋವಾಗುವುದರಿಂದ ಜನರಿಗೆ ಇಷ್ಟವಾಗುವ ಜನ ಸಂಪರ್ಕ ಹೊಂದಿರುವ ವ್ಯಕ್ತಿಗೆ ಟಿಕೆಟ್ ನೀಡುವಂತೆ ಅವರು ಮನವಿ ಮಾಡಿದರು.

ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಕರೋಹಟ್ಟಿ ಮಹದೇವಯ್ಯ ಮಾತನಾಡಿ, ಈಗಾಗಲೇ ತಿ.ನರಸೀಪುರ ಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿ ಕುರಿತು, ವಿರೋಧ ಪಕ್ಷಗಳು ಊಹಾಪೋಹಗಳನ್ನು ಮತ್ತು ಗೊಂದಲಗಳನ್ನು ಸೃಷ್ಟಿ ಮಾಡುತ್ತಿದ್ದಾರೆ. ಪಕ್ಷ ಸ್ಥಳೀಯ ಅಭ್ಯರ್ಥಿಗೆ ಟಿಕೆಟ್ ನೀಡುವ ಮೂಲಕ ಗೊಂದಲ ನಿವಾರಣೆಗೆ ಪ್ರಯತ್ನಿಸಬೇಕು. ದೇಶ ಮತ್ತು ರಾಜ್ಯವನ್ನು ಆಳುತ್ತಿರುವ ಜನೋಪಯೋಗಿ ಕೆಲಸ ಮಾಡುತ್ತಿರುವ ಬಿಜೆಪಿ ನಾಯಕರು ಸೂಕ್ತ ಸಮಯದಲ್ಲಿ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸಮರ್ಥರಿದ್ದು ಅವರು ತೆಗೆದು ಕೊಳ್ಳುವ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ ಎಂದರು.

ಬಿಜೆಪಿ ಪಕ್ಷದಲ್ಲಿ ಟಿಕೆಟ್‌ಗೆ ಬೇಡಿಕೆ ಸೃಷ್ಟಿಯಾಗಿರುವುದು ಪಕ್ಷದ ಜನ ಮನ್ನಣೆಗೆ ಸಾಕ್ಷಿಯಾಗಿದ್ದು, ಕ್ಷೇತ್ರದಲ್ಲಿ ಅಂತಿಮವಾಗಿ ಪಕ್ಷ ಗೆಲ್ಲುವ ಪರಿಸ್ಥಿತಿಯಲ್ಲಿದೆ ಆದರೆ ಸಮರ್ಥ ಅಭ್ಯರ್ಥಿಯ ಆಯ್ಕೆಗೆ ಹೈಕಮಾಂಡ್ ಅವಕಾಶ ಮಾಡಿಕೊಡಬೇಕಿದೆ ಎಂದರು.

ಮಾಜಿ ಶಾಸಕ ಡಾ.ಎನ್.ಎಲ್. ಭಾರತೀ ಶಂಕರ್, ಕಾರ್ಯದರ್ಶಿ ಕೆಎಸ್. ಬಸವರಾಜು, ಎಸ್ಸಿ ಮೋರ್ಚಾ ಕಾರ್ಯದರ್ಶಿ ಅನಿಲ್ ಕುಮಾರ್, ಜಿಲ್ಲಾ ಉಪಾಧ್ಯಕ್ಷ ದಾಸಯ್ಯ, ಹಿಂದುಳಿದ ವರ್ಗಗಳ ಅಧ್ಯಕ್ಷ ಗೂಳಿ ಮಹೇಶ್, ಗ್ರಾಪಂ ಸದಸ್ಯ ಪ್ರಕಾಶ್, ಮಹಾದೇವ್ ಉಪಸ್ಥಿತರಿದ್ದರು.



ಜೆಎಸ್‌ಎಸ್ ಪಾಲಿಟೆಕ್ನಿಕ್ ಮೈಸೂರು ಮತ್ತು ನಂಜನಗೂಡು ವತಿಯಿಂದ ನಂಜನಗೂಡು ತಾಲೂಕಿನ ಚಂದ್ರವಾಡಿ ಗ್ರಾಮದಲ್ಲಿ ನಡೆದ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರವನ್ನು ಶ್ರೀ ಮಹೇಶ್ವರ ಸ್ವಾಮಿಗಳು ಉದ್ಘಾಟಿಸಿದರು. ಈ ಸಂದರ್ಭ ಮೈಸೂರಿನ ಜೆಎಸ್‌ಎಸ್ ಪಾಲಿಟೆಕ್ನಿಕ್ ಪ್ರಾಂಶುಪಾಲ ಬಿ.ಎಸ್.ರಾಜಶೇಖರ್, ಎನ್.ವಿದ್ಯಾಶಂಕರ್, ಗ್ರಾಪಂ ಅಧ್ಯಕ್ಷ ಮಾದೇವಸ್ವಾಮಿ, ಸದಸ್ಯೆ ಶಶಿಕಲಾ, ಎಚ್.ಪಿ. ರಾಜೇಶ್, ಕೆ.ಬಿ.ಚಂದ್ರಶೇಖರ ಮೂರ್ತಿ, ಯೋಗೇಶ್ವರಿ .ಎಂ ಇತರರು ಹಾಜರಿದ್ದರು.

ನಾಗರಾಜು ನಿಧನ



ಸರಗೂರು, ಮಾ.1– ಪಟ್ಟಣದ ನಿವಾಸಿ ಕೆಎಸ್‌ಆರ್‌ಟಿಸಿ ನಿವೃತ್ತ ಹಿರಿಯ ಚಾಲಕ ನಾಗರಾಜು(60) ಬುಧವಾರ ನಿಧನರಾಗಿದ್ದಾರೆ. ಕೆಲವು ತಿಂಗಳಿನಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೃತರು ಪತ್ನಿ ಹಾಗೂ ನಾಲ್ವರು ಹೆಣ್ಣು ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ತೋಗಟವೀರ ಜನಾಂಗದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ,

ಮಹದೇವಮ್ಮ



ಹುಣಸೂರು, ಮಾ.1(ಕೆಕೆ)– ನಗರದ ಆರ್.ಟಿ.ಓ ಕಚೇರಿ ಮುಂಭಾಗದ ಹೌಸಿಂಗ್ ಬೋರ್ಡ್ ಕಾಲೋನಿ ನಿವಾಸಿ ನಿವೃತ್ತ ಮುಖ್ಯ ಶಿಕ್ಷಕ ಬಸವಲಿಂಗಪ್ಪ ಅವರ ಧರ್ಮಪತ್ನಿ ಮಹದೇವಮ್ಮ (82) ಅವರು ಇಂದು ನಿಧನರಾದರು.


ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಮೃತರು ಚಿಕಿತ್ಸೆ ಫಲಕಾರಿಯಾಗದೆ ಇಂದು ಮಧ್ಯಾಹ್ನ ನಿಧನರಾದರು. ಮೃತರು ಸೋಮು ಡ್ರೈವಿಂಗ್ ಶಾಲೆಯ ಪ್ರಾಂಶುಪಾಲ ಸೋಮು ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರು, ಪತಿ ಬಸವಲಿಂಗಪ್ಪ ಮತ್ತು ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ತಾಲೂಕಿನ ಬನ್ನಿಕುಪ್ಪೆಯ ಸಮೀಪ ಮಾದಹಳ್ಳಿ ಮಠದ ರಸ್ತೆಯಲ್ಲಿರುವ ತೆಂಕಲಕೊಪ್ಪಲಿನ ಜಮೀನಿನಲ್ಲಿ ಮಾ.2ರ ಗುರುವಾರ ಬೆಳಗ್ಗೆ 11ಕ್ಕೆ ನಡೆಯಲಿದೆ.

ಸಂತಾಪ: ಶಾಸಕ ಜಿ.ಟಿ. ದೇವೇಗೌಡ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಹಾಗೂ ಮಠಾಧೀಶರು, ಗಣ್ಯರು, ಜನಪ್ರತಿನಿಧಿಗಳು, ಆರ್.ಟಿ.ಓ ಪ್ರತಿನಿಧಿಗಳ ಸಂಘ ಮತ್ತು ಸಿಬ್ಬಂದಿ ಹಾಗೂ ಕುಟುಂಬಸ್ಥರು ಸಂತಾಪ ಸೂಚಿಸಿದ್ದಾರೆ.

ಎಲ್‌ಪಿಜಿ ಸಿಲಿಂಡರ್ ಏರಿಕೆಗೆ ಆಕ್ರೋಶ

ಹೇಗಪ್ಪಾ ಜೀವನ ಮಾಡೋದು... ಮಹಿಳೆಯರ ಹಿಡಿಶಾಪ



ಮೈಸೂರು, ಮಾ.1(ಎಂಕೆ)– ಗ್ಯಾಸ್ ಸಿಲಿಂಡರ್ ಏರಿಕೆಗೆ ಮೈಸೂರಿನಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದ್ದು, ಹೋಟೆಲ್ ಉದ್ಯಮಿಗಳು, ಮಹಿಳಾ ಮುಖಂಡರು, ಗೃಹಿಣಿಯರು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ. ಕೊರೊನಾ ನಂತರ ಚೇತರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆ ಮಾಡಿರುವುದು ಖಂಡನೀಯ. ಬಡವರು, ಮಧ್ಯಮ ವರ್ಗದ ಜನರನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡುವ ಕೆಲಸವನ್ನು ಸರ್ಕಾರಗಳು ಮಾಡುತ್ತಿವೆ ಎಂದು 'ಮೈಸೂರು ಮಿತ್ರ'ನಲ್ಲಿ ತಮ್ಮ ಅಳಲು ತೋಡಿಕೊಂಡಿದ್ದಾರೆ.

ಮನಸ್ಸೋ ಇಚ್ಛೆ ಏರಿಕೆ...

ಈಗ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆ ಮಾಡಲಾಗಿದೆ. ಅದೂ, ಕಮರ್ಷಿಯಲ್ ಸಿಲಿಂಡರ್ ಬೆಲೆಯಲ್ಲಿ 360 ರೂ. ಏರಿಕೆ ಮಾಡಲಾಗಿದೆ. ಇತ್ತೀಚೆಗಷ್ಟೇ ಹಾಲಿನ ಬೆಲೆಯನ್ನೂ ಹೆಚ್ಚಿಸಲಾಗಿದೆ. ಇದೇ ರೀತಿ ಅಗತ್ಯ ಪದಾರ್ಥಗಳ ಬೆಲೆ ಏರಿಕೆಯಾಗುತ್ತಿದ್ದರೆ ಹೋಟೆಲ್ ನಡೆಸುವುದು ಇನ್ನಷ್ಟು ಕಷ್ಟವಾಗುತ್ತದೆ. ಸದ್ಯಕ್ಕೆ ಹೋಟೆಲ್‌ಗಳಲ್ಲಿ ಬೆಲೆ ಏರಿಕೆ ಮಾಡುವುದಿಲ್ಲ. ಸಮಯ ನೋಡಿಕೊಂಡು ತೀರ್ಮಾನಿಸಲಾಗುವುದು.

- **ಸಿ.ನಾರಾಯಣಗೌಡ,** ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ

ಕೊಟ್ಟು ಕಿತ್ತುಕೊಳ್ಳುವ ಸರ್ಕಾರಗಳು...

ಗ್ಯಾಸ್ ಬೆಲೆ ಏರಿಕೆಯಂತೂ ನಿರಂತರವಾಗಿ ಹೆಚ್ಚಾಗುತ್ತಲೇ ಇದೆ. ಬೇರೆ ದಾರಿಯಿಲ್ಲದೆ ಕಷ್ಟವಾದರೂ ಖರೀದಿಸಲೇಬೇಕು. ಜನಪರ ಯೋಜನೆಗಳನ್ನು ಘೋಷಣೆ ಮಾಡುವ ಸರ್ಕಾರ ಒಂದು ಕಡೆ ಕೊಟ್ಟು, ಮತ್ತೊಂದು ಕಡೆಯಿಂದ ಕಿತ್ತುಕೊಳ್ಳುವ ಕೆಲಸ ಮಾಡುತ್ತಿದೆ. ಸಾಮಾನ್ಯ ಜನರ ಪರಿಸ್ಥಿತಿ ಈಗಾಗಲೇ ದುಸ್ತರವಾಗಿದ್ದು, ಬೆಲೆ ಏರಿಕೆಯಿಂದ ಜನರು ನೆಮ್ಮದಿ ಕಳೆದುಕೊಳ್ಳುತ್ತಿದ್ದಾರೆ.

- **ಎಂ.ಎಸ್.ಅನ್ನಪೂರ್ಣ,** ಸಂಶೋಧಕಿ

ಕಷ್ಟದ ಮೇಲೆ ಕಷ್ಟಗಳ ಏರಿಕೆ...

ಈಗಾಗಲೇ ಆಗಿರುವ ಬೆಲೆ ಏರಿಕೆಯಿಂದ ಲಾಭವಿಲ್ಲದೆ ನಷ್ಟದಲ್ಲಿಯೇ ವ್ಯಾಪಾರ ನಡೆಸುತ್ತಿದ್ದೇವೆ. ಮೊದಲು ಒಂದು ಸಿಲಿಂಡರ್ ಎರಡು ದಿನ ಬರುತ್ತಿತ್ತು. ಆದರೀಗ ಒಂದೇ ದಿನದಲ್ಲಿ ಖಾಲಿಯಾಗುತ್ತವೆ. ಗ್ಯಾಸ್ ಕೂಡ ಸರಿಯಾಗಿ ತುಂಬಿರುವುದಿಲ್ಲ. ಇದರ ನಡುವೆ ಮತ್ತೆ ಮತ್ತೆ ಬೆಲೆ ಏರಿಕೆ ಮಾಡುತ್ತಿರುವುದು ಸರಿಯಿಲ್ಲ. ಸರ್ಕಾರ ಜಾಸ್ತಿ ಮಾಡಿದಂತೆ ನಾವು ಜಾಸ್ತಿ ಮಾಡಿದರೆ, ಜನರ ಬೈಗುಳಕ್ಕೆ ಗುರಿಯಾಗಬೇಕಾಗುತ್ತದೆ.

- **ಮಂಜು,** ಪಲ್ಲವಿ ಗೋಬಿ ಸೆಂಟರ್, ಸಂಗೀತ ಕಾರ್ನರ್

ಜನರ ಸಮಸ್ಯೆ ಅರಿಯದ ಸರ್ಕಾರ

ಜಾಸ್ತಿ ಸಂಬಳ ತೆಗೆದುಕೊಳ್ಳುವವರಿಗೆ ಸಿಲಿಂಡರ್ ಬೆಲೆ ಏರಿಕೆಯಿಂದ ತೊಂದರೆಯಿಲ್ಲ. ಆದರೆ ಮಧ್ಯಮ ವರ್ಗದವರು, ಬಡವರಿಗೆ ತುಂಬಾ ಕಷ್ಟವಾಗಲಿದೆ. ಅಗತ್ಯ ದಿನ ಬಳಕೆ ವಸ್ತುಗಳ ಬೆಲೆಯನ್ನೇ ಏರಿಕೆ ಮಾಡುತ್ತಿರುವುದು ಸರ್ಕಾರ ಆಡಳಿತ ವೈಫಲ್ಯತೆಯನ್ನು ತೋರುತ್ತದೆ. ಜನರ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಬೆಲೆ ನಿಗದಿ ಮಾಡುವ ವ್ಯವಸ್ಥೆ ಜಾರಿಯಾಗಬೇಕು.

- **ಅನುಸೂಯ,** ಲೇಖಕಿ

ಮಾನವೀಯತೆ ಇಲ್ಲದ ಸರ್ಕಾರ...

ಬಡವರು, ಮಧ್ಯಮ ವರ್ಗದ ಜನರ ಮೇಲೆ ಕಿಂಚಿತ್ತೂ ಕರುಣೆ ಇಲ್ಲದ ಕೇಂದ್ರ ಸರ್ಕಾರ ಕಳೆದ 9 ವರ್ಷಗಳಲ್ಲಿ ಸುಮಾರು 28 ಬಾರಿ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆ ಮಾಡಿದೆ. ಮನೆ ನಡೆಸುವ ಹೆಣ್ಣುಮಕ್ಕಳ ಕಷ್ಟ ಸರ್ಕಾರಕ್ಕೆ ತಿಳಿಯುತ್ತಿಲ್ಲ. 2014ರಲ್ಲಿ ಸುಮಾರು 410 ರೂ. ಇದ್ದ ಸಿಲಿಂಡರ್ ಬೆಲೆ ಸಾವಿರದ ಗಡಿದಾಟಿ ಹೆಚ್ಚಾಗುತ್ತಲೇ ಇದೆ. ಗ್ಯಾಸ್ ಸಿಲಿಂಡರ್ ಏರಿಕೆ ವಿರುದ್ಧ ರಾಜ್ಯಮಟ್ಟದಲ್ಲಿ 10 ದಿನಗಳ ನಿರಂತರ ಪ್ರತಿಭಟನೆ ನಡೆಸಲಾಗುವುದು.

- **ಪುಷ್ಪಾ ಅಮರನಾಥ್,** ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ

ಹಸಿ ಸೊಪ್ಪು-ತರಕಾರಿ, ಗೆಡ್ಡೆ-ಗೆಣಸು ಬಳಸಲು ಉತ್ತೇಜನ ನೀಡಿದಂತಿದೆ...

ಒಳ್ಳೆಯದೇ ಆಯಿತು! ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆಯಿಂದ ಜನರು ಹಸಿ ಸೊಪ್ಪು-ತರಕಾರಿ, ಗೆಡ್ಡೆ-ಗೆಣಸು ಬಳಸಲು ಸರ್ಕಾರ ಉತ್ತೇಜನ ನೀಡಿದಂತಿದೆ. ಬೆಲೆ ಏರಿಕೆ ಸಂದರ್ಭದಲ್ಲಿ ಪರ್ಯಾಯ ಮಾರ್ಗ ಕಂಡುಕೊಳ್ಳುವುದು ಅಗತ್ಯವಾಗಿದೆ.

- **ಅನುರಾಧ ನಂದಕುಮಾರ್,** ಸ್ವಯಂ ಸೇವಕಿ

ಸರ್ಕಾರದಿಂದ ಬೆಲೆ ಏರಿಕೆ ಹೊರತು ಮತ್ತೇನನ್ನು ಬಯಸಲಾಗದು...

ಬಜೆಟ್ ಹತ್ತಾರು ಯೋಜನೆಗಳನ್ನು ಘೋಷಣೆ ಮಾಡಲು ಸರ್ಕಾರದಲ್ಲಿ ದುಡ್ಡಿದೆ. ಆದರೆ ಅಗತ್ಯವಾಗಿ ಬೇಕಾದ ಗ್ಯಾಸ್ ಸಿಲಿಂಡರ್ ಬೆಲೆ ಇಳಿಕೆ ಮಾಡಲು ದುಡ್ಡಿಲ್ಲವೆಂದರೆ ಸರ್ಕಾರದ ಯಾವ ಯೋಜನೆಗಳು ಜನರನ್ನು ತಲುಪುವುದಿಲ್ಲ ಎಂಬುದು ಖಾತರಿಯಾಗಿದೆ. ಘೋಷಣೆಗಳು ಮಾಡಿದ ದಿನಕ್ಕಷ್ಟೇ ಸೀಮಿತ. ಜನರನ್ನು ತಲುಪುವುದಿಲ್ಲ. ಜನತೆಗೆ ಅಗತ್ಯವಾಗಿ ಬೇಕಾದ ಪದಾರ್ಥಗಳನ್ನು ಕಡಿಮೆ ಬೆಲೆಯಲ್ಲಿ ಪೂರೈಸದ ಸರ್ಕಾರದಿಂದ ಬೆಲೆ ಏರಿಕೆ ಹೊರತು ಮತ್ತೇನನ್ನು ಬಯಸಲಾಗದು.

- **ಮಾಲವಿಕ ಗುಬ್ಬಿವಾಣಿ,** ಎಎಪಿ ಜಿಲ್ಲಾಧ್ಯಕ್ಷೆ



ಹಣ ದುರುಪಯೋಗದ ಆರೋಪ ಹೊರಿಸಿ ಕಿರುಕುಳ

ಹೈದರಾಬಾದ್ ಫೈನಾನ್ಸ್‌ನ ಮಾಜಿ ಫೀಲ್ಡ್ ಆಫೀಸರ್ ಕಾವೇರಿ ನದಿಗೆ ಹಾರಿ ಆತ್ಮಹತ್ಯೆ

● ಡೆತ್‌ನೋಟ್‌ನಲ್ಲಿ ಫೈನಾನ್ಸ್‌ನ ಮ್ಯಾನೇಜರ್ ಸೇರಿ ಹಲವರ ಮೇಲೆ ಕಿರುಕುಳ ಆರೋಪ ● ನದಿ ದಡದಲ್ಲಿ ಬ್ಯಾಗ್ ಮೇಲೆ ಪತ್ರ ಬರೆದಿಟ್ಟು ಆತ್ಮಹತ್ಯೆ

ಸಾಲಿಗ್ರಾಮ, ಮಾ. 1– ತಾವೇ ಹಣ ದುರುಪಯೋಗಪಡಿಸಿಕೊಂಡು ತನ್ನ ಮೇಲೆ ಆರೋಪ ಹೊರಿಸಿ ಕಿರುಕುಳ ನೀಡುತ್ತಿದ್ದಾರೆ ಎಂದು ಹೈದರಾಬಾದ್ ಮೂಲದ ಫೈನಾನ್ಸ್ ಕಂಪನಿಯೊಂದರ ಮ್ಯಾನೇಜರ್ ಹಾಗೂ ಸಿಬ್ಬಂದಿ ಮೇಲೆ ಆರೋಪಿಸಿ, ಡೆತ್‌ನೋಟ್ ಬರೆದಿಟ್ಟು, ಕಂಪನಿಯ ಹಿಂದಿನ ಫೀಲ್ಡ್ ಆಫೀಸರ್ ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಇಲ್ಲಿಗೆ ಸಮೀಪದ ಚುಂಚನಕಟ್ಟೆ ಮತ್ತು ಬೇವಿನಹಳ್ಳಿ ಮಧ್ಯೆ ನಡೆದಿದೆ.

ಹೈದರಾಬಾದ್ ಮೂಲದ ಫೈನಾನ್ಸ್ ಕಂಪನಿಯ ಬ್ರಾಂಚ್ ಮ್ಯಾನೇಜರ್, ಸಿಬ್ಬಂದಿಗಳಾದ ರಾಕೇಶ್, ಸಂತೋಷ, ಮಧು ಮತ್ತು ಮಹದೇವ ಎಂಬುವರ ವಿರುದ್ಧ ರಕ್ಷಿತ್ ಆತ್ಮಹತ್ಯೆಗೆ ಪ್ರಚೋದಿಸಿದ ಆರೋಪದ ಮೇರೆಗೆ ಪ್ರಕರಣ ದಾಖಲಾಗಿದೆ.

ಸಾಲಿಗ್ರಾಮ ತಾಲೂಕು ಚೆಟ್ಟಹಳ್ಳಿ ನಿವಾಸಿ ಬಿ.ವಿ. ರಕ್ಷಿತ್(26) ಆತ್ಮಹತ್ಯೆಗೆ ಶರಣಾದವನಾಗಿದ್ದು, ಈತ ಫೆಬ್ರವರಿ 27ರಂದು ಸಂಜೆ ಚುಂಚನಕಟ್ಟೆ ಮತ್ತು ಬೇವಿನಹಳ್ಳಿ ಮಧ್ಯೆ ಕಾವೇರಿ ನದಿ ದಡದಲ್ಲಿ ತನ್ನ ಬ್ಯಾಗ್ ಇಟ್ಟು, ಬ್ಯಾಗ್ ಮೇಲೆ ಒಂದು ಚೀಟಿಯಲ್ಲಿ ತಂದೆಯ ಫೋನ್ ನಂಬರ್ ಬರೆದಿಟ್ಟು ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಇದಕ್ಕೂ ಮುನ್ನ ಈತ ಡೆತ್‌ನೋಟ್ ಅನ್ನು ತನ್ನ ಸ್ನೇಹಿತರನ್ನೊಳಗೊಂಡ ವಾಟ್ಸಾಪ್ ಗ್ರೂಪ್‌ವೊಂದಕ್ಕೆ ಅಪ್‌ಲೋಡ್ ಮಾಡಿದ್ದಾನೆ. ಜೊತೆಗೆ ಬ್ಯಾಗ್‌ನಲ್ಲೂ ತಾನು ಬರೆದಿದ್ದ ಡೆತ್‌ನೋಟ್ ಅನ್ನು ಇಟ್ಟಿದ್ದಾನೆ.

ಹೈದರಾಬಾದ್ ಮೂಲದ ಭಾರತ್ ಫೈನಾನ್ಷಿಯಲ್ ಇಕ್ಲೂಷನ್ ಲಿಮಿಟೆಡ್ (ಬಿಎಫ್‌ಐಎಲ್)ನ ಗೋಣಿಕೊಪ್ಪ ಶಾಖೆಯಲ್ಲಿ ಈ ಹಿಂದೆ ಈತ ಫೀಲ್ಡ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದ. ಈತನೂ ಸೇರಿದಂತೆ ನಾಲ್ವರು ಮಹಿಳಾ ಸಂಘಗಳಿಂದ ವಸೂಲಿ ಮಾಡಿದ 31,87,637 ರೂ.ಗಳನ್ನು ಕಂಪನಿಗೆ ಪಾವತಿಸದೇ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಬಿಎಫ್‌ಐಎಲ್‌ನ ಗೋಣಿಕೊಪ್ಪ ಬ್ರಾಂಚ್ ಮ್ಯಾನೇಜರ್ ಬಿ.ಕೆ. ಮಹೇಶ್ ಅವರು ಫೆ. 22ರಂದು ಗೋಣಿಕೊಪ್ಪ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈ ಹಿನ್ನೆಲೆಯಲ್ಲಿ ರಕ್ಷಿತ್ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಹೇಳಲಾಗಿದೆ.

ಕಳೆದ ಒಂದೂವರೆ ತಿಂಗಳ ಹಿಂದೆ ಹಣ ದುರುಪಯೋಗದ ಆರೋಪದ ಮೇರೆಗೆ ಬಿಎಫ್‌ಐಎಲ್‌ನಿಂದ ರಕ್ಷಿತ್ ಅಮಾನತುಗೊಂಡಿದ್ದು, ನಂತರ ಸಮಸ್ತ ಫೈನಾನ್ಸ್ ಎಂಬ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂದು ಹೇಳಲಾಗಿದೆ. ಈತ ಬರೆದಿರುವ ಡೆತ್‌ನೋಟ್‌ನಲ್ಲಿ ಗೋಣಿಕೊಪ್ಪ ಶಾಖೆಯ ಬಿಎಫ್‌ಐಎಲ್ ಸಂಸ್ಥೆಯಲ್ಲಿ ಬೇರೆಯವರು ಹಣ ದುರ್ಬಳಕೆ ಮಾಡಿಕೊಂಡು, ತಾನೂ ಸೇರಿದಂತೆ 11 ಮಂದಿ ಸಿಬ್ಬಂದಿ ವಿರುದ್ಧ ಲಕ್ಷಾಂತರ ರೂ. ದುರುಪಯೋಗಪಡಿಸಿಕೊಂಡಿರುವುದಾಗಿ ಆರೋಪ ಮಾಡಿದ್ದಾರೆ. ನನಗೆ ಹಾಗೂ ತಂದೆ-ತಾಯಿಗೆ ತುಂಬಾ ತೊಂದರೆ ಕೊಟ್ಟಿದ್ದಾರೆ. ಈ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಬಡ ಮಕ್ಕಳಿಗೆ ಕಂಪನಿಯವರು ತೊಂದರೆ ಕೊಡುತ್ತಿದ್ದು, ಬೇರೆ ಕೆಲಸ ಸಿಗದ ಕಾರಣ ಇಲ್ಲಿನ ಸಿಬ್ಬಂದಿ ಏನನ್ನೂ ಹೇಳುವ ಸ್ಥಿತಿಯಲ್ಲಿಲ್ಲ. ನಮ್ಮನ್ನೂ ಕೂಡ ಏನೂ ಮಾಡದ ಸ್ಥಿತಿಗೆ ತಳ್ಳಿದ್ದು, ನಾವೇ ತಪ್ಪು ಮಾಡಿದ್ದೇವೆ ಎಂದು ಹೆದರಿಸಿ ಸಹಿ ಮಾಡಿಸಿಕೊಂಡಿದ್ದಾರೆ. ಇವರಿಗೆ ಶಿಕ್ಷೆ ಆಗಲೇಬೇಕು. ನನಗೆ ಬಂದ ಸ್ಥಿತಿ ಯಾರಿಗೂ ಬರಬಾರದು ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾನೆ.

ಈ ಸಂಬಂಧ ರಕ್ಷಿತ್ ತಂದೆ ವೆಂಕಟಾಚಲ ಮೂರ್ತಿ ನೀಡಿದ ದೂರಿನ ಮೇರೆಗೆ ಬಿಎಫ್‌ಐಎಲ್ ಫೈನಾನ್ಸ್ ಕಂಪನಿಯ ಗೋಣಿಕೊಪ್ಪ ಬ್ರಾಂಚ್ ಮ್ಯಾನೇಜರ್, ಸಿಬ್ಬಂದಿಗಳಾದ ರಾಕೇಶ್, ಸಂತೋಷ್, ಮಧು ಮತ್ತು ಮಹದೇವ್ ವಿರುದ್ಧ ಭಾರತೀಯ ದಂಡ ಸಂಹಿತೆ 306ರಡಿ ಪ್ರಕರಣ ದಾಖಲಿಸಿಕೊಂಡಿರುವ ಸಾಲಿಗ್ರಾಮ ಠಾಣೆ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ತನ್ವೀರ್ ಚುನಾವಣಾ ರಾಜಕೀಯದಿಂದ ಹಿಂದೆ ಸರಿಯದಂತೆ ಆಗ್ರಹಿಸಿ ಪಂಜಿನ ಪ್ರದರ್ಶನ



ಮೈಸೂರು, ಮಾ.1–ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಚುನಾವಣಾ ರಾಜಕೀಯದಿಂದ ನಿವೃತರಾಗಬಾರದೆಂದ ಬೆಂಬಲಿಗರು ಅವರ ಮನೆ ಮುಂದೆ ಉರಿವ ಪಂಜು ಹಿಡಿದು ಬುಧವಾರ ಸಂಜೆ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ತನ್ವೀರ್ ಸೇಠ್ ಮುಖ ನೋಡಿಕೊಂಡು ನಾವು ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕುತ್ತಿರುವುದು. ಅವರಿಗೆ ಪಕ್ಷ ಟಿಕೆಟ್ ನೀಡದಿದ್ದರೆ, ಮುಂಬರುವ ವಿಧಾನಸಭೆ, ಲೋಕಸಭೆ ಹಾಗೂ ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದಿಲ್ಲ. ಪಕ್ಷ ಅವರನ್ನು ಕೈಬಿಡಬಾರದು. ಹಾಗೇ ಅವರು ಚುನಾವಣಾ ರಾಜಕೀಯದಿಂದ ಹಿಂದೆ ಸರಿಯಬಾರದು. ಸರಿದರೆ, ಇಡೀ ಕ್ಷೇತ್ರದಾದ್ಯಂತ ಉಗ್ರ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಸಿದರು.

ಗ್ರೀಸ್‌ನಲ್ಲಿ ಎರಡು ರೈಲುಗಳ ಮಧ್ಯೆ ಮುಖಾಮುಖಿ ಡಿಕ್ಕಿ: 32 ಮಂದಿ ಸಾವು

85ಕ್ಕೂ ಹೆಚ್ಚು ಮಂದಿಗೆ ಗಾಯ



ಅಥೆನ್ಸ್: ಗ್ರೀಸ್‌ನಲ್ಲಿ ಕಳೆದ ರಾತ್ರಿ ಎರಡು ರೈಲುಗಳ ನಡುವೆ ಮುಖಾಮುಖಿ ಡಿಕ್ಕಿಯಾಗಿ 32 ಮಂದಿ ಮೃತಪಟ್ಟಿದ್ದು, 85ಕ್ಕೂ ಅಧಿಕ ಜನರು ಗಂಭೀರವಾಗಿ ಗಾಯಗೊಂಡಿರುವ ದುರ್ಘಟನೆ ನಡೆದಿದೆ. ಗ್ರೀಸ್ ರಾಜಧಾನಿ ಅಥೆನ್ಸ್ ಮತ್ತು ಥೆಸಲೋನಿಕಿ ನಡುವೆ ಅಥೆನ್ಸ್‌ನಿಂದ ಉತ್ತರಕ್ಕೆ 235 ಮೈಲುಗಳಷ್ಟು ದೂರದಲ್ಲಿರುವ ಟೆಂಪಿ ಬಳಿ ಪ್ರಯಾಣಿಕ ರೈಲು ಸರಕು ಸಾಗಣೆ ರೈಲಿಗೆ ಡಿಕ್ಕಿ ಹೊಡೆದಿದೆ. ಅಪಘಾತದಿಂದಾಗಿ ಹಲವು ಬೋಗಿಗಳು ಹಳಿತಪ್ಪಿದ್ದು, ಈ ಪೈಕಿ 3 ಬೋಗಿಗಳಿಗೆ ಬೆಂಕಿ ಹೊತ್ತಿಕೊಂಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪಘಾತದಲ್ಲಿ 32 ಜನರು ಮೃತಪಟ್ಟು ಕನಿಷ್ಠ 85 ಜನರು ಗಾಯಗೊಂಡಿದ್ದಾರೆ. ಗಾಯಗೊಂಡವರಲ್ಲಿ 25 ಮಂದಿಯ ಸ್ಥಿತಿ ಗಂಭೀರವಾಗಿದೆ ಎಂದು ಆಸ್ಪತ್ರೆ ಅಧಿಕಾರಿಗಳು ತಿಳಿಸಿದ್ದಾರೆ. ಗಾಯಗೊಂಡ ಪ್ರಯಾಣಿಕರನ್ನು ಆಸ್ಪತ್ರೆಗಳಿಗೆ ಕರೆದೊಯ್ಯಲು ಹತ್ತಿರದ ನಗರಗಳಿಂದ ಆಂಬ್ಯುಲೆನ್ಸ್‌ಗಳನ್ನು ಕರೆಸಲಾಗಿದೆ, ರಕ್ಷಣಾ ಕಾರ್ಯಾಚರಣೆ ಇನ್ನೂ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಮಾಜಿ ಪ್ರಧಾನಿ ದೇವೇಗೌಡರ ಆರೋಗ್ಯ ಬಗ್ಗೆ ಮಾಹಿತಿ ನೀಡಿದ ಅಳಿಯ ಡಾ. ಸಿ.ಎನ್. ಮಂಜುನಾಥ್

ಬೆಂಗಳೂರು: ಮಾಜಿ ಪ್ರಧಾನಿ ದೇವೇಗೌಡರು ಚೆನ್ನಾಗಿದ್ದಾರೆ, ಯಾರೂ ಆತಂಕಪಡುವ ಅಗತ್ಯವಿಲ್ಲ. ಹಲವು ದಿನಗಳಿಂದ ಮಂಡಿ ನೋವು, ಕಾಲುನೋವಿನಿಂದ ಬಳಲುತ್ತಿದ್ದಾರೆ. ದಿನಂಪ್ರತಿ ಆರೋಗ್ಯ ತಪಾಸಣೆಗೆ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಅವರ ಅಳಿಯ ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್ ತಿಳಿಸಿದ್ದಾರೆ.

ದೇವೇಗೌಡರಿಗೆ ಹಲವು ದಿನಗಳಿಂದ ಮಂಡಿನೋವು, ಕಾಲು ಊತ ಇದೆ. ಅದಕ್ಕೆ ವಿಸ್ತಾರವಾದ ತಪಾಸಣೆಗೆ ಆಸ್ಪತ್ರೆಗೆ ದಾಖಲಾಗಿದ್ದಾರೆ. ಎಮರ್ಜೆನ್ಸಿ ಪರಿಸ್ಥಿತಿಯಿಲ್ಲ, ವಾರ್ಡ್‌ಗೆ ಶಿಫ್ಟ್ ಮಾಡಲಾಗಿದೆ... ವಾರ್ಡ್‌ಲಿಟ್ಟಿದ್ದಾರೆ, ಊಟ ಮಾಡುತ್ತಿದ್ದಾರೆ, ಆರಾಮಾಗಿದ್ದಾರೆ, ಇನ್ನು ಎರಡು-ಮೂರು ದಿನಗಳಲ್ಲಿ ಮನೆಗೆ ವಾಪಸ್ಸಾಗುತ್ತಾರೆ ಎಂದರು.

ಈಗ ಅವರಿಗೆ ವೈದ್ಯರು ಬಿಪಿ, ಡಯಾಬಿಟಿಸ್‌ಗೆ, ಕಾಲು ಊತಕ್ಕೆ ಚಿಕಿತ್ಸೆ ನೀಡುತ್ತಿದ್ದಾರೆ. ಆರೋಗ್ಯ ತಪಾಸಣೆಗೆಂದು ನಿನ್ನೆ ಸಾಯಂಕಾಲ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ತೆರಳಿದ್ದ ವೇಳೆ ವೈದ್ಯರು ಪರೀಕ್ಷಿಸಿ ಒಂದು ವಾರ ವಿಶ್ರಾಂತಿ ಇರುವಂತೆ ಸೂಚಿಸಿದ್ದಾರೆ.

ಪ್ರತಿಷ್ಠಿತ 'ಮಾರ್ಕೋನಿ' ಪುರಸ್ಕಾರಕ್ಕೆ ಭಾರತ ಮೂಲದ ಹರಿಬಾಲಕೃಷ್ಣನ್ ಆಯ್ಕೆ



ನ್ಯೂಯಾರ್ಕ್: ಮೆಸಾಚುಸೆಟ್ಸ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ) ಯಲ್ಲಿ ಪ್ರಾಧ್ಯಾಪಕರಾಗಿರುವ, ಭಾರತ ಮೂಲದ ಹರಿಬಾಲಕೃಷ್ಣನ್ ಅವರು ಪ್ರತಿಷ್ಠಿತ 'ಮಾರ್ಕೋನಿ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

'ವೈರ್ ಮತ್ತು ವೈರ್‌ಲೆಸ್ ನೆಟ್‌ವರ್ಕಿಂಗ್, ಮೊಬೈಲ್ ಸೆನ್ಸಿಂಗ್ ಹಾಗೂ ಸಂಬಂಧಿಸಿದ ಕ್ಷೇತ್ರಗಳಲ್ಲಿ ನಡೆಸಿರುವ ಸಂಶೋಧನೆಗಳಿಗಾಗಿ ಹರಿಬಾಲಕೃಷ್ಣನ್ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ಮಾರ್ಕೋನಿ ಸೊಸೈಟಿ ಪ್ರಕಟಣೆಯಲ್ಲಿ ತಿಳಿಸಿದೆ.

ಅಕ್ಟೋಬರ್ 27ರಂದು ವಾಷಿಂಗ್ಟನ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ.

ಮೌಲ್ಯಯುತ ಶಿಕ್ಷಣ ಮಹತ್ವ ಸಾರಲು 4 ಸಾವಿರ ಕಿಮೀ ಬೈಕ್ ಯಾತ್ರೆ

ವಿವೇಕ ವಿದ್ಯಾ ವಾಹಿನಿ ಟ್ರಸ್ಟ್ ಸ್ಥಾಪಕ ನಿತ್ಯಾನಂದ ವಿವೇಕವಂಶಿ ಅವರಿಗೆ ಟೀಂ ಮೈಸೂರು ಪ್ರತಿಷ್ಠಾನದಿಂದ ಸನ್ಮಾನ



ಮೈಸೂರು, ಮಾ.1(ಜಿಎ)– ಮೌಲ್ಯ ಶಿಕ್ಷಣದ ಕುರಿತು ಜಾಗೃತಿ ಮೂಡಿಸಲು ರಾಜ್ಯಾದ್ಯಂತ 4 ಸಾವಿರ ಕಿಮೀ ಬೈಕ್ ಯಾತ್ರೆ ಪೂರೈಸಿ, ಮೈಸೂರಿಗೆ ಆಗಮಿಸಿದ ವಿವೇಕ ವಿದ್ಯಾ ವಾಹಿನಿ ಟ್ರಸ್ಟ್‌ನ ಸ್ಥಾಪಕ ನಿತ್ಯಾನಂದ ವಿವೇಕವಂಶಿ ಅವರನ್ನು ಟೀಂ ಮೈಸೂರು ಪ್ರತಿಷ್ಠಾನದ ಪದಾಧಿಕಾರಿಗಳು ಸನ್ಮಾನಿಸಿದರು.

ನಗರದ ಚಿಕ್ಕಗಡಿಯಾರದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗೋಪಾಲ ಸ್ವಾಮಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಮಂಜುನಾಥ್, ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ ಹಾಗೂ ಟೀಂ ಮೈಸೂರು ಪ್ರತಿಷ್ಠಾನ ಪದಾಧಿಕಾರಿಗಳು ಅಭಿನಂದಿಸಿದರು.

ನಂತರ ಗೋಪಾಲ ಸ್ವಾಮಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಮಂಜುನಾಥ್ ಮಾತನಾಡಿ, ಇಪ್ಪತ್ತು ವರ್ಷಗಳಿಂದ ವಿದ್ಯಾರ್ಥಿಗಳನ್ನು ನೋಡಿಕೊಂಡು ಬಂದಿದ್ದೇನೆ. ಆದರೆ, ಕಳೆದ ನಾಲ್ಕು ವರ್ಷದಲ್ಲಿ ವಿದ್ಯಾರ್ಥಿಗಳ ಮನಸ್ಸು ಸಾಕಷ್ಟು ಬದಲಾಗಿದ್ದು, ಕೊರೊನಾ ನಂತರ ಕಷ್ಟಕರವಾಗಿದೆ. ಪ್ರೌಢಶಾಲೆಯ ಹಂತದಲ್ಲಿಯೇ ವಿದ್ಯಾರ್ಥಿಗಳು ಅನಾಪೇಕ್ಷಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಶಾಲೆಗೆ ಬಾರದೆ ಹುಕ್ಕಾ ಕೇಂದ್ರದಲ್ಲಿ ಕುಳಿತುಕೊಳ್ಳುತ್ತಿದ್ದಾರೆ. ಮಕ್ಕಳ ಈ ನಡವಳಿಕೆಯಿಂದ ಶಿಕ್ಷಕರು ಮತ್ತು ಶಿಕ್ಷಣ ಸಂಸ್ಥೆಗಳು ರೋಸಿ ಹೋಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ ಮಾತನಾಡಿ, ಮಕ್ಕಳಿಗೆ ಅವಶ್ಯಕತೆ ಇರುವುದನ್ನು ಮಾತ್ರ ಕೊಡಿಸಿ, ಮಕ್ಕಳ ಮೇಲೆ ನಿಮ್ಮ ಶ್ರೀಮಂತಿಕೆಯನ್ನು ಹೇರಬೇಡಿ. ಇದರಿಂದ ಮಕ್ಕಳು ದಿಕ್ಕು ತಪ್ಪಲು ಸಹಾಯಕವಾಗಲಿದ್ದು, ಮಕ್ಕಳನ್ನು ಮಕ್ಕಳಂತೆ ಇರಲು ಬಿಡಿ ಎಂದು ಸಲಹೆ ನೀಡಿದರು.

ಮೌಲ್ಯಯುತ ಶಿಕ್ಷಣ ಕುರಿತು ಜಾಗೃತಿ ಮೂಡಿಸಲು ಕಳೆದ ಫೆ.11 ರಂದು ಮೈಸೂರಿನಿಂದ ಬೈಕ್ ಹೇರಿ ರಾಜ್ಯದ ಎಲ್ಲಾ ಜಿಲ್ಲೆ ಹಾಗೂ ಕರ್ನಾಟಕದ ಗಡಿ ಭಾಗದಲ್ಲಿರುವ ಜಿಲ್ಲೆಗೂ ಭೇಟಿ ನೀಡಿ ನಾಲ್ಕು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ್ದು, ಎಲ್ಲಾ ಕಡೆಯೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ನಿತ್ಯಾನಂದ ವಿವೇಕವಂಶಿ ತಿಳಿಸಿದರು.

'ಸಮಾಜದ ಎಲ್ಲಾ ಕೇಡುಗಳಿಗೆ ಶಿಕ್ಷಣವೇ ಮದ್ದು' ಎಂಬ ವಿವೇಕಾನಂದರ ಮಾತಿನಂತೆ ನಾನು ಈ ಯಾತ್ರೆಯನ್ನು ಆರಂಭಿಸಿದೆ. ಪ್ರಮುಖವಾಗಿ ಸಾಮಾಜಿಕ ಸಮಸ್ಯೆಗಳಾದ ಭ್ರಷ್ಟಾಚಾರ, ಜಾತಿ ಪದ್ಧತಿ ಸೇರಿದಂತೆ ಅನೇಕ ಸಮಸ್ಯೆಗಳು ವಿದ್ಯಾವಂತರಿಂದ ನಿರ್ಮಾಣವಾಗುತ್ತಿದ್ದು, ಹೆಚ್ಚು ಓದಿಕೊಂಡ ಅಧಿಕಾರಿಗಳು ಇದರಲ್ಲಿ ಪ್ರಮುಖರಾಗಿದ್ದಾರೆ. ಆದ್ದರಿಂದ ಮಕ್ಕಳಲ್ಲಿ ಈ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲು ಮೌಲ್ಯಯುತ ಶಿಕ್ಷಣವನ್ನು ಆಯ್ಕೆ ಮಾಡಿಕೊಂಡೆ, ಅದು ಪರಿಣಾಮಕಾರಿಯಾಗಿ ಪ್ರಭಾವ ಬೀರಿದೆ ಎಂದರು.

ಕಾರ್ಯಕ್ರಮದಲ್ಲಿ ಟೀಂ ಮೈಸೂರು ಪ್ರತಿಷ್ಠಾನದ ಗೋಕುಲ್ ಗೋವರ್ಧನ್, ಸಹಸಂಚಾಲಕರಾದ ಯಶವಂತ್, ಪದಾಧಿಕಾರಿಗಳಾದ ಅನಿಲ್, ಸುಮಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

